# www.karunaduexams.com

ಪ್ರಚಲಿತ ವಿದ್ಯಮಾನಗಳು -ಏಪ್ರಿಲ್ 2017

www.karunaduexams.com

# Contents

**ಅಂತರ್ ರಾಷ್ಟ್ರೀಯ** ..... 2
**ಪ್ರಶಸ್ತಿಗಳು** ..... 12
**ಪರಿಸರ** ..... 23
**ವ್ಯವಹಾರ** ..... 26
**ರಾಷ್ಟ್ರೀಯ** ..... 35
**ವಿಜ್ಞಾನ-ತಂತ್ರಜ್ಞಾನ** ..... 55
**ಕ್ರೀಡೆ** ..... 63
**ಇತರೆ: ಚೂರು ಪಾರು** ..... 66

**ಹೆಚ್ಚಿನ ಮಾಹಿತಿಗಾಗಿ,**

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ,
WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mohan Kumar: Mobile: +91- 98805 33259 (Content related queries)

Chandrashekhar Nayak: Mobile: +91-9448880551 (Technical and Marketing related queries)

Ramakant: Mobile: +91-9972355744(Management related queries)

www.karunaduexams.com

# ಅಂತರ್ ರಾಷ್ಟ್ರೀಯ

## ಭಾರತ-ಮಲೇಷಿಯಾ ನಡುವೆ ಏಳು ಒಪ್ಪಂದಕ್ಕೆ ಸಹಿ



ಭಾರತ ಮತ್ತು ಮಲೇಷಿಯಾ ಏಳು ಒಪ್ಪಂದಗಳಿಗೆ ಸಹಿ ಹಾಕಿದ್ದು, ಉಭಯ ದೇಶಗಳ ನಡುವಿನ ಬಾಂದವ್ಯವನ್ನು ಗಟ್ಟಿಗೊಳಿಸಲು ದಿಟ್ಟ ಹೆಜ್ಜೆ ಇಟ್ಟಿವೆ. ಭಾರತ ಪ್ರವಾಸದಲ್ಲಿರುವ ಮಲೇಷಿಯಾದ ಪ್ರಧಾನಿ ನಜೀಬ್ ಅಬ್ದುಲ್ ರಜಾಕ್ ಹಾಗೂ ಪ್ರಧಾನಿ ನರೇಂದ್ರ ಮೋದಿ ನಡುವೆ ನವದೆಹಲಿಯಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆಯಲ್ಲಿ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

**ಸಹಿ ಹಾಕಲಾದ ಒಪ್ಪಂದಗಳು:**

- **ವಾಯು ಸೇವೆ ಒಪ್ಪಂದ:** ಉಭಯ ದೇಶಗಳ ನಡುವೆ 1974ರಲ್ಲಿ ಸಹಿ ಹಾಕಲಾದ ವಾಯು ಸೇವೆ ಒಪ್ಪಂದವನ್ನು ಪರಿಷ್ಕರಿಸುವುದಾಗಿ.
- **ರಸಗೊಬ್ಬರ ವಲಯದಲ್ಲಿ ಸಹಕಾರಕ್ಕೆ ಒಪ್ಪಂದ:** ಮಲೇಷಿಯಾದಲ್ಲಿ ಉದ್ದೇಶಿತ ಯೂರಿಯಾ ಮತ್ತು ಅಮೋನಿಯಾ ಘಟಕಗಳನ್ನು ಒಪ್ಪಂದದಡಿ ಅಭಿವೃದ್ದಿಪಡಿಸಲಾಗುವುದು.
- **ಕ್ರೀಡಾ ಕ್ಷೇತ್ರದಲ್ಲಿ ಸಹಕಾರಕ್ಕೆ ಒಪ್ಪಂದ:** ಕ್ರೀಡಾ ಕ್ಷೇತ್ರದಲ್ಲಿ ತರಭೇತುದಾರರ ವಿನಿಮಯ, ಕ್ರೀಡೆಗೆ ಸಂಬಂಧಿಸಿದ ಮಾಹಿತಿ ವಿನಿಮಯವನ್ನು ಒಪ್ಪಂದದಡಿ ಮಾಡಿಕೊಳ್ಳಲಾಗುವುದು.
- **ತರಭೇತಿ ಸಂಬಂಧಿಸಿದ ಒಪ್ಪಂದ:** ಮಲೇಷಿಯಾದ ಮಾನವ ಅಭಿವೃದ್ದಿ ನಿಧಿ ಮತ್ತು ಅಹಮದಬಾದಿನ ಇಐಐಡಿ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈ ಒಪ್ಪಂದದಡಿ ಅಗತ್ಯ ತರಭೇತಿಯನ್ನು ಅಹಮದಬಾದಿನ ಇಐಐಡಿ ನಡೆಸಲಿದೆ.
- **ತಾಳೆ ಎಣ್ಣೆ ಕ್ಷೇತ್ರದಲ್ಲಿ ತಂತ್ರಜ್ಞಾನ ಅಭಿವೃದ್ದಿಗೆ ಒಪ್ಪಂದ:** ಮಲೇಷಿಯಾ ತಾಳೆ ಎಣ್ಣೆ ಮಂಡಳಿ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಟೆಕ್ನಾಲಜಿ ನಡುವೆ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.
- **ಆಂಧ್ರಪ್ರದೇಶದಲ್ಲಿ 4ನೇ ತಲೆಮಾರಿನ ತಾಂತ್ರಿಕ ಪಾರ್ಕ್ ಅಭಿವೃದ್ದಿಗೆ ಒಪ್ಪಂದ:** ಎಂಐಜಿಹೆಚ್ಟಿ ಮಲೇಷಿಯಾ ಹಾಗೂ ಎಪಿ ಎಕಾನಿಮಿಕ್ ಡೆವೆಲಪ್ಮೆಂಟ್ ಬೋರ್ಡ್ ನಡುವೆ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.
- **ಶೈಕ್ಷಣಿಕ ಅರ್ಹತೆಯನ್ನು ಪರಸ್ಪರ ಗುರುತಿಸುವ ಒಪ್ಪಂದಕ್ಕೆ ಸಹಿ:** ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟಿಸ್ ಹಾಗೂ ಮಲೇಷಿಯನ್ ಕ್ವಾಲಿಫಿಕೇಶನ್ ಏಜೆನ್ಸಿ ನಡುವೆ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

www.karunaduexams.com

## ಅಮೆರಿಕದ ಎರಡು ಪ್ರಮುಖ ಹುದ್ದೆಗಳಿಗೆ ಭಾರತೀಯರು ನೇಮಕ



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎರಡು ಪ್ರಮುಖ ಹುದ್ದೆಗಳಿಗೆ ಇಬ್ಬರು ಭಾರತ ಸಂಜಾತರನ್ನು ನೇಮಕ ಮಾಡಿದ್ದಾರೆ. ನಿಯೋಮಿ ರಾವ್ ಅವರನ್ನು ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು ತಮ್ಮ ಫೆಡರಲ್ ರೆಗ್ಯುಲೇಶನ್ಸ್ ತಜ್ಞರನ್ನಾಗಿ ನೇಮಿಸಿಕೊಂಡಿದ್ದಾರೆ.

- ಫೆಡರಲ್ ರೆಗ್ಯುಲೇಶನ್ಸ್ ವಿಭಾಗದಲ್ಲಿ ಶೇ. 75 ರಷ್ಟು ಯೋಜನೆಗಳನ್ನು ತೆಗೆದುಹಾಕಲು ಅಧ್ಯಕ್ಷ ಟ್ರಂಪ್ ಅವರು ನಿರ್ಧರಿಸಿದ್ದು, ನಿಯೋಮಿ ರಾವ್ ಅವರು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಿದ್ದಾರೆ.
- ಇನ್ನು ಮುಂದೆ, ಅಮೆರಿಕದ ಅಧ್ಯಕ್ಷರ ಶ್ವೇತಭವನದಲ್ಲಿ ಕಾರ್ಯಕಾರಿ ಕಚೇರಿಯಲ್ಲಿ ಅವರು ಕಾರ್ಯನಿರ್ವಹಿಸಲಿದ್ದಾರೆ. ನಿಯೋಮಿ ರಾವ್ ಅವರು ಪ್ರಸ್ತುತ ವಿಶ್ವವಿದ್ಯಾಲಯವೊಂದರಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ಫಾರಮೇಶನ್ ಅಂಡ್ ರೆಗ್ಯುಲೇಟರಿ ವಿಭಾಗದಲ್ಲಿ ಆಡಳಿತಾಧಿಕಾರಿಯಾಗಲಿದ್ದಾರೆ.
- ಅಧ್ಯಕ್ಷರ ಧ್ಯೇಯೋದ್ದೇಶಗಳಿಗೆ ಪೂರಕವಾಗಿರದಿದ್ದಲ್ಲಿ ಈ ವಿಭಾಗವು ತಿರಸ್ಕರಿಸುವ ಅಧಿಕಾರವನ್ನು ಹೊಂದಿದೆ. ನಿಯೋಮಿ ರಾವ್ ಅವರು ಜಾರ್ಜ್ ಡಬ್ಲ್ಯು ಬುಷ್ ಆಡಳಿತದಿಂದಲೂ ಶ್ವೇತಭವನದಲ್ಲಿ ಅಧಿಕಾರದಲ್ಲಿದ್ದರು. ನಿಯೋಮಿ ಅಮೆರಿಕದಲ್ಲಿ ಉನ್ನತ ವ್ಯಾಸಂಗ ಮಾಡಿದ್ದಾರೆ.

**ವಿಶಾಲ್ ಅಮಿನ್**

- ಬೌದ್ಧಿಕ ಆಸ್ತಿ ಜಾರಿ ಸಂಯೋಜಕರಾಗಿ ವಿಶಾಲ್ ಅಮಿನ್ ಅವರನ್ನು ಹಾಗೂ ಮಾಹಿತಿ ಮತ್ತು ನಿಯಂತ್ರಣ ವ್ಯವಹಾರಗಳ ಕಚೇರಿ (ಒಐಆರ್‌ಎ) ಆಡಳಿತಾಧಿಕಾರಿಯಾಗಿ ನಿಯೋಮಿ ರಾವ್ ಅವರನ್ನು ನೇಮಿಸಲಾಗಿದೆ.
- ಸಂಸತ್‌ನ ನ್ಯಾಯಾಂಗ ಸಮಿತಿಯ ಹಿರಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿರುವ ಅಮಿನ್ ಅವರು, ಜಾರ್ಜ್ ಬುಷ್ ಅಧ್ಯಕ್ಷರಾಗಿದ್ದಾಗ ದೇಶೀಯ ನೀತಿ ಹಾಗೂ ವಾಣಿಜ್ಯ ಇಲಾಖೆಯ ಸಹ ನಿರ್ದೇಶಕರಾಗಿದ್ದರು.

## ಸುಧಾರಿತ ಕ್ಷಿಪಣಿ ವ್ಯವಸ್ಥೆ ಪೂರೈಕೆಗೆ ಇಸ್ರೇಲ್-ಭಾರತ ಒಪ್ಪಂದ



ಸುಧಾರಿತ ಮಧ್ಯಮ ವ್ಯಾಪ್ತಿಯ ಮೇಲ್ಮೆಯಿಂದ ಆಕಾಶಕ್ಕೆ ಹಾರುವ ಕ್ಷಿಪಣಿ ರಕ್ಷಣಾ ವ್ಯವಸ್ಥೆ (Medium Range Surface to air Missile System (MRSMS)) ಪೂರೈಸುವ ಸಂಬಂಧ ಇಸ್ರೇಲ್ ಭಾರತದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಒಪ್ಪಂದ ಅನ್ವಯ ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರಿಯು ಭಾರತಕ್ಕೆ ಎಂಟು ಬರಾಕ್-8 ಸುಧಾರಿತ MRSMS ಕ್ಷಿಪಣಿಗಳನ್ನು ಪೂರೈಸಲಿದೆ.

www.karunaduexams.com

**MRSMS**:

- ಎಂಆರ್ಎಸ್ಎಂಎಸ್ ಒಂದು ಅತ್ಯಂತ ಸುಧಾರಿತ ಕ್ಷಿಪಣಿ ರಕ್ಷಣಾ ವ್ಯವಸ್ಥೆಯಾಗಿದ್ದು, ಶತ್ರು ವಿಮಾನ, ಡ್ರೋಣ್ ಹಾಗೂ ಕ್ಷಿಪಣಿಗಳನ್ನು ಒಡೆದು ಉರುಳಿಸುವ ಸಾಮರ್ಥ್ಯವನ್ನು ಹೊಂದಿದೆ.
- ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರಿ ಹಾಗೂ ಭಾರತೀಯ ರಕ್ಷಣಾ ಸಂಶೋಧನಾ ಸಂಸ್ಥೆ ಇದನ್ನು ಅಭಿವೃದ್ಧಿಪಡಿಸಿವೆ. ಬಿಇಎಲ್, ಬಿಹೆಚ್ಇಎಲ್, ಎಲ್ & ಟಿ ಇತರೆ ಪಾಲುದಾರಿಕೆ ಸಂಸ್ಥೆಗಳಾಗಿವೆ.
- ಈಗಾಗಲೇ ಭಾರತೀಯ ವಾಯುದಳ ಹಾಗೂ ಭಾರತೀಯ ನೌಕ ಪಡೆ ಹಾಗೂ ಇಸ್ರೇಲ್ ರಕ್ಷಣಾ ದಳದಲ್ಲಿ ಈ ಕ್ಷಿಪಣಿಗಳನ್ನು ಬಳಸಬಹುದಾಗಿದೆ. ಇವುಗಳ ಸೇರ್ಪಡೆಯಿಂದ ಭಾರತದ ರಕ್ಷಣಾ ವ್ಯವಸ್ಥೆಗೆ ಅಧಿಕ ಬಲ ಬರಲಿದೆ.

ಭಾರತಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮಾಡುತ್ತಿರುವ ನಾಲ್ಕನೇ ಅತಿದೊಡ್ಡ ರಾಷ್ಟ್ರ ಇಸ್ರೇಲ್. ಅಮೆರಿಕ, ರಷ್ಯಾ ಮತ್ತು ಫ್ರಾನ್ಸ್ ಮೊದಲ ಮೂರು ಸ್ಥಾನದಲ್ಲಿವೆ. ಈ ಒಪ್ಪಂದದಿಂದಾಗಿ ಭಾರತ ಮತ್ತು ಇಸ್ರೇಲ್ ನಡುವಿನ ದ್ವಿಪಕ್ಷೀಯ ಸಂಬಂಧ ಮತ್ತುಷ್ಟು ಸುಧಾರಣೆ ಆಗಲಿದೆ.

## <u>2017 ಪ್ರಯಾಣ ಮತ್ತು ಪ್ರವಾಸೋದ್ಯಮ ಸ್ಪರ್ಧಾತ್ಮಕತೆ ಸೂಚ್ಯಂಕದಲ್ಲಿ ಭಾರತಕ್ಕೆ 40ನೇ ಸ್ಥಾನ</u>



ವಿಶ್ವ ಆರ್ಥಿಕ ವೇದಿಕೆ ಹೊರತಂದಿರುವ 2017 ಪ್ರಯಾಣ ಮತ್ತು ಪ್ರವಾಸೋದ್ಯಮ ಸ್ಪರ್ಧಾತ್ಮಕತೆ ಸೂಚ್ಯಂಕದಲ್ಲಿ ಭಾರತ 40ನೇ ಸ್ಥಾನದಲ್ಲಿದೆ. ಸೂಚ್ಯಂಕದಲ್ಲಿ ಒಟ್ಟು 136 ರಾಷ್ಟ್ರಗಳನ್ನು ಸಮೀಕ್ಷೆಗೆ ಒಳಪಡಿಸಿಲಾಗಿತ್ತು. 2015ನೇ ವರ್ಷದ ಸೂಚ್ಯಂಕದಲ್ಲಿ ಭಾರತ 52ನೇ ಸ್ಥಾನದಲ್ಲಿತ್ತು. ಈ ಬಾರಿ 12 ಸ್ಥಾನಗಳನ್ನು ಜಿಗಿಯುವ ಮೂಲಕ 40ನೇ ಸ್ಥಾನವನ್ನು ಪಡೆದುಕೊಂಡಿದೆ.

**ಪ್ರಮುಖಾಂಶಗಳು**:

- ***ಟಾಪ್ 10 ರಾಷ್ಟ್ರಗಳು:*** ಸ್ಪೇನ್ (1), ಫ್ರಾನ್ಸ್ (2), ಜರ್ಮನಿ (3), ನೆದರ್ಲ್ಯಾಂಡ್ (4), ಯುಕೆ (5), ಅಮೆರಿಕ (6), ಆಸ್ಟ್ರೇಲಿಯಾ (7), ಇಟಲಿ (8), ಕೆನಡಾ (9) ಮತ್ತು ಚೀನಾ (10).
- ಜಾಗತಿಕವಾಗಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಸೂಚ್ಯಂಕದಲ್ಲಿ ಮುಂಚೂಣಿಯಲ್ಲಿವೆ. ಟಾಪ್ 15 ರಾಷ್ಟ್ರಗಳಲ್ಲಿ 12 ರಾಷ್ಟ್ರಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಾಗಿವೆ.
- ಪ್ರವಾಸೋಧ್ಯಮಕ್ಕೆ ಏಷ್ಯಾ ಅಚ್ಚುಮೆಚ್ಚಿನ ತಾಣವಾಗಿ ಹೊರಹೊಮ್ಮಿದೆ. ಆದರೆ ಭದ್ರತೆ, ಸಾಂಸ್ಕೃತಿಕ ಪರಂಪರೆ ಉತ್ತೇಜನ, ದೃಡವಾದ ವೀಸಾ ನೀತಿ ಹಾಗೂ ಮೂಲಭೂತ ಸೌಕರ್ಯಗಳನ್ನು ಏಷ್ಯಾ ರಾಷ್ಟ್ರಗಳು ಸಾಕಷ್ಟು ಸುಧಾರಿಸಬೇಕಿದೆ.

www.karunaduexams.com

- ವಿಶ್ವದ ವಾರ್ಷಿಕ ಜಿಡಿಪಿ ಪಾಲಿನಲ್ಲಿ ಪ್ರವಾಸೋಧ್ಯಮದ ಪಾಲು ಶೇ 10% ರಷ್ಟಿದೆ. ಸ್ಥಿರ ಆರ್ಥಿಕತೆ ಅನೇಕ ರಾಷ್ಟ್ರಗಳಲ್ಲಿ ಇದು ಪ್ರಮುಖ ವ್ಯವಹಾರವೆನಿಸಿದೆ.
- ಭಾರತ ಸರ್ಕಾರ ಕೈಗೊಂಡಿರುವ ವೀಸಾ ನೀತಿ, ಇ-ವೀಸಾ ಸೌಲಭ್ಯ, ಸ್ಥಳೀಯ ಸಾರಿಗೆ ವ್ಯವಸ್ಥೆ ಸುಧಾರಣೆಯಿಂದಾಗಿ ಸೂಚ್ಯಂಕದಲ್ಲಿ ಭಾರತ ಜಿಗಿತ ಕಾಣಲು ನೆರವಾಗಿದೆ.
- ಅಲ್ಲದೇ ಭಾರತದ ವಿಸ್ತಾರವಾದ ಸಾಂಸ್ಕೃತಿಕ ಹಾಗೂ ನೈಸರ್ಗಿಕ ತಾಣಗಳು ವಿದೇಶಿ ಪ್ರವಾಸಿಗರನ್ನು ಸೆಳೆಯಲು ನೆರವಾಗಿವೆ.

**ಸೂಚ್ಯಂಕದ ಬಗ್ಗೆ**:

- ಪ್ರಯಾಣ ಮತ್ತು ಪ್ರವಾಸೋದ್ಯಮ ಸ್ಪರ್ಧಾತ್ಮಕತೆ ಸೂಚ್ಯಂಕವನ್ನು ವಿಶ್ವ ಆರ್ಥಿಕ ವೇದಿಕೆ ಹೊರತರುತ್ತಿದೆ. ಒಟ್ಟು 14 ಆಯಾಮಗಳನ್ನು ಪರಿಗಣಿಸಿ ಸೂಚ್ಯಂಕವನ್ನು ಹೊರತರಲಾಗುತ್ತಿದೆ.

**<u>ಏಪ್ರಿಲ್ 10: ವಿಶ್ವ ಹೋಮಿಯೊಪಥಿ ದಿನ</u>**



ವಿಶ್ವ ಹೋಮಿಯೊಪಥಿ ದಿನವನ್ನು ಪ್ರತಿ ವರ್ಷ ಏಪ್ರಿಲ್ 10 ರಂದು ಆಚರಿಸಲಾಗುತ್ತಿದೆ. ಹೋಮಿಯೊಪಥಿ ವೈದ್ಯಕೀಯ ಚಿಕಿತ್ಸಾ ಪದ್ದತಿಯ ಪಿತಾಮಹ ಡಾ. ಕ್ರಿಸ್ಚಿಯನ್ ಫ್ರೆಡರಿಕ್ ಸಮ್ಯುಯೆಲ್ ಹಹ್ನೆಮನ್ ಅವರಿಗೆ ಗೌರವ ಸಲ್ಲಿಸುವ ಪ್ರತೀಕವಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷ ಫ್ರೆಡರಿಕ್ ಅವರ 262ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಹೋಮಿಯೊಪಥಿ ಚಿಕಿತ್ಸಾ ಪದ್ದತಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದಯ ಈ ದಿನದ ಉದ್ದೇಶವಾಗಿದೆ.

**ಹೋಮಿಯೊಪಥಿ**:

- ಹೋಮಿಯೊಪಥಿ ಒಂದು ವೈದ್ಯಕೀಯ ಚಿಕಿತ್ಸಾ ವಿಧಾನವಾಗಿದೆ. ಡಾ. ಕ್ರಿಸ್ಚಿಯನ್ ಫ್ರೆಡರಿಕ್ ಸಮ್ಯುಯೆಲ್ ಹಹ್ನೆಮನ್ ಅವರು ಈ ವಿಧಾನವನ್ನು ಅಭಿವೃದ್ದಿಪಡಿಸಿದ ಮೊದಲಿಗರು. ಇಂದು ಹೋಮಿಯೊಪಥಿ ಪ್ರಸಿದ್ದ ವೈದ್ಯಕೀಯ ಚಿಕಿತ್ಸಾ ವಿಧಾನವಾಗಿದ್ದು, ವಿಶ್ವದ ಅನೇಕ ವೈದ್ಯರು ಇದನ್ನು ಅಳವಡಿಸಿಕೊಂಡಿದ್ದಾರೆ.
- ವಿಶ್ವದಾದ್ಯಂತ ಅಳವಡಿಸಿಕೊಂಡಿರುವ ಎರಡನೇ ಅತಿ ದೊಡ್ಡ ವೈದ್ಯಕೀಯ ಚಿಕಿತ್ಸಾ ವಿಧಾನ ಇದಾಗಿದೆ. ದೇಹದ ಸ್ವಂತ ಗುಣಪಡಿಸುವ ಶಕ್ತಿಯನ್ನು ಉತ್ತೇಜಿಸಿ ಕಾಯಿಲೆ ವಾಸಿ ಮಾಡುವುದು ಹೋಮಿಯೊಪಥಿ ಚಿಕಿತ್ಸೆಯ ಮುಖ್ಯ ಲಕ್ಷಣ.

www.karunaduexams.com

## ಭಾರತ-ಮಂಗೋಲಿಯಾ ಜಂಟಿ ಸಮರಾಭ್ಯಾಸ "ನೊಮಾಡಿಕ್ ಎಲಿಫೆಂಟ್-2017"ಗೆ ಚಾಲನೆ



ಭಾರತ ಮತ್ತು ಮಂಗೋಲಿಯಾ ನಡುವಿನ ಜಂಟಿ ಮಿಲಿಟರಿ ಸಮರಾಭ್ಯಾಸ "ನೊಮಾಡಿಕ್ ಎಲಿಫೆಂಟ್ (Nomadic Elephant)"ಮಿಜೋರಾಂನ ವೈರೆಂಗ್ಟೆಯಲ್ಲಿ ಆರಂಭಗೊಂಡಿತು. ಉಭಯ ದೇಶಗಳ ನಡುವೆ ನಡೆಯುತ್ತಿರುವ 12ನೇ ಜಂಟಿ ಸಮರಾಭ್ಯಾಸ ಇದಾಗಿದೆ. ಮಿಜೋರಾಂನ ವೈರೆಂಗ್ಟೆಯಲ್ಲಿ ಭಾರತೀಯ ಸೇನೆಯ ಪ್ರತಿಷ್ಠಿತ ಜಂಗಲ್ ವಾರ್ಫೇರ್ ಸ್ಕೂಲ್ ಇದೆ. 2004 ರಲ್ಲಿ ಉಭಯ ದೇಶಗಳ ನಡುವಿನ ಮೊದಲ ಮಿಲಿಟರಿ ಅಭ್ಯಾಸಕ್ಕೆ ಚಾಲನೆ ನೀಡಲಾಗಿತ್ತು. ಅಂದಿನಿಂದ ಪ್ರತಿ ವರ್ಷ ಈ ಮಿಲಿಟರಿ ಅಭ್ಯಾಸ ನಡೆಯುತ್ತಿದೆ. ಭಾರತ ಮತ್ತು ಮಂಗೋಲಿಯಾ ನಡುವೆ ಮಿಲಿಟರಿ ಸಹಕಾರವನ್ನು ಹೆಚ್ಚಿಸುವುದು ಸಮರಾಭ್ಯಾಸದ ಧ್ಯೇಯವಾಗಿದೆ.

**ಪ್ರಮುಖಾಂಶಗಳು**:

- ಏಪ್ರಿಲ್ 5 ರಿಂದ 18 ವರೆಗೆ ಎರಡು ವಾರಗಳ ಕಾಲ ಈ ಸಮರಾಭ್ಯಾಸ ನಡೆಯಲಿದೆ. ಭಯೋತ್ಪಾದನೆ ನಿಗ್ರಹ ಹಾಗೂ ಒಳನುಸುಳುವಿಕೆ ವಿರುದ್ಧ ಕಾರ್ಯಾಚರಣೆಯ ಬಗ್ಗೆ ಸಮರಾಭ್ಯಾಸದಲ್ಲಿ ತರಭೇತಿ ನೀಡಲಾಗುವುದು.
- ಈ ಭಾರಿಯ ಸಮರಾಭ್ಯಾಸದಲ್ಲಿ ಭಾರತ ಸೇನೆಯನ್ನು ಮೂರು ಅಧಿಕಾರಿಗಳು, ನಾಲ್ಕು ಜೂನಿಯರ್ ಕಮಾಂಡೊಗಳು ಹಾಗೂ ಜಮ್ಮು ಮತ್ತು ಕಾಶ್ಮೀರ ರೈಫಲ್ ಪಡೆ ಪ್ರತಿನಿಧಿಸಿದೆ.
- ಮಂಗೋಲಿಯಾದ ಪರವಾಗಿ 36 ಸೈನಿಕರನ್ನು ಒಳಗೊಂಡ 084 ಸ್ಪೆಷಲ್ ಫೋರ್ಸ್ ಟಾಸ್ಕ್ ಬೆಟಾಲಿಯನ್ ಪ್ರತಿನಿಧಿಸಿದೆ.

## ಯುನೈಟೆಡ್ ಕಿಂಗ್ಡಮ್ ನಿಂದ ಚೀನಾಗೆ ಮೊದಲ ಸರಕು ರೈಲು ಸಂಚಾರ ಆರಂಭ



ಯುನೈಟೆಡ್ ಕಿಂಗ್ಡಮ್ ನಿಂದ ಚೀನಾಗೆ ಮೊದಲ ಸರಕು ರೈಲು ಸಂಚಾರ ಆರಂಭಗೊಂಡಿತು. ಈ ಮುಂಚೆ ಚೀನಾದಿಂದ ಯುಕೆ ಗೆ ಸರಕು ರೈಲು ಸಂಚಾರ ಆರಂಭಗೊಂಡು, ಜನವರಿ 2017 ರಲ್ಲಿ ಲಂಡನ್ ತಲುಪಿತ್ತು. ಚೀನಾದ "ಒನ್ ಬೆಲ್ಟ್, ಒನ್ ರೋಡ್" ಕಾರ್ಯಕ್ರಮದಡಿ ಈ ರೈಲು ಸಂಚಾರವನ್ನು ಆರಂಭಿಸಲಾಗಿದೆ. ಪುರಾತನ ಕಾಲದ ಸಿಲ್ಕ್ ರೋಡ್ ಗೆ ಮತ್ತೆ ಜೀವ ತುಂಬುವ ಸಲುವಾಗಿ "ಒನ್ ಬೆಲ್ಟ್ ಒನ್ ರೋಡ್" ಯೋಜನೆಗೆ ಚಾಲನೆ ನೀಡಲಾಗಿದೆ.

**ಪ್ರಮುಖಾಂಶಗಳು:**

- 30 ಬೋಗಿಗಳನ್ನು ಹೊಂದಿರುವ ಈ ರೈಲು ಔಷಧೀಯ ವಸ್ತುಗಳು ಸೇರಿದಂತೆ ಬ್ರಿಟನ್ ಉತ್ಪನ್ನಗಳನ್ನು ಚೀನಾದ ಯಿವು ಪ್ರದೇಶಕ್ಕೆ ಸಾಗಿಸಲಿದೆ. ಈ ವೇಳೆ ಸುಮಾರು 7500 ಮೈಲಿ ಕ್ರಮಿಸಲಿದೆ.
- ಪ್ರಯಾಣದ ವೇಳೆ ಈ ಸರಕು ರೈಲು ಏಳು ದೇಶಗಳಲ್ಲಿ ಸಂಚರಿಸಲಿದೆ. ಈ ರಾಷ್ಟ್ರಗಳೆಂದರೆ ಫ್ರಾನ್ಸ್, ಜರ್ಮನಿ, ಬೆಲ್ಜಿಯಂ, ಪೋಲ್ಯಾಂಡ್, ರಷ್ಯಾ, ಕಜಕಸ್ತಾನ ಆ ನಂತರ ಕೊನೆಯದಾಗಿ ಚೀನಾ.

www.karunaduexams.com

- ಮೂಲಗಳ ಪ್ರಕಾರ ಯುಕೆ ಮತ್ತು ಚೀನಾ ನಡುವೆ ರೈಲಿನ ಮೂಲಕ ಸರಕು ಸಾಗಣೆ ವಿಮಾನ ಹಾಗೂ ಹಡುಗಿಗಿಂತ ಕಡಿಮೆ ಎನ್ನಲಾಗಿದೆ.

## ಭಾರತ-ಬಾಂಗ್ಲದೇಶ ನಡುವೆ 22 ಒಪ್ಪಂದಗಳಿಗೆ ಸಹಿ



ಭಾರತ ಮತ್ತು ಬಾಂಗ್ಲದೇಶ ನಡುವೆ 22 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಾಂಗ್ಲದೇಶದ ಪ್ರಧಾನಿ ಶೇಖ್ ಹಸೀನಾ ಅವರ ನಡುವೆ ನವದೆಹಲಿಯಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆ ವೇಳೆ ಈ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಅಲ್ಲದೆ, ಮೂಲಸೌಕರ್ಯ ಯೋಜನೆಗಳಿಗಾಗಿ ಬಾಂಗ್ಲಾದೇಶಕ್ಕೆ ಭಾರತ ₹ 30,600 ಕೋಟಿ ಸಾಲ ನೀಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ರಕ್ಷಣಾ ಉಪಕರಣಗಳ ಖರೀದಿಗಾಗಿ ₹ 3,200 ಕೋಟಿ ಸಾಲ ನೀಡುವುದಾಗಿಯೂ ಭಾರತ ಹೇಳಿದೆ.

**ಪ್ರಮುಖ ಒಪ್ಪಂದಗಳು:**

- ರಕ್ಷಣಾ ಕ್ಷೇತ್ರದಲ್ಲಿ ಸಹಕಾರಕ್ಕೆ ಒಪ್ಪಂದ
- ದ್ವಿಪಕ್ಷೀಯ ನ್ಯಾಯಾಂಗ ವಲಯ ಸಹಕಾರಕ್ಕೆ ಒಪ್ಪಂದ
- ಮಾಸ್ ಮೀಡಿಯಾ ಕ್ಷೇತ್ರದಲ್ಲಿ ಸಹಕಾರಕ್ಕೆ ಒಪ್ಪಂದ
- ಸೈಬರ್ ಭದ್ರತೆ ಕ್ಷೇತ್ರದಲ್ಲಿ ಒಪ್ಪಂದ
- ಅಣುಶಕ್ತಿಯ ಶಾಂತಿಯುತ ಬಳಕೆಗೆ ಒಪ್ಪಂದ
- ಮಾಹಿತಿ ತಂತ್ರಜ್ಞಾನ ಮತ್ತು ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಒಪ್ಪಂದ
- ರಕ್ಷಣಾ ಕ್ಷೇತ್ರಕ್ಕೆ ರೂ 3,200 ಕೋಟಿ ಸಾಲ
- ಭಾರತ ಮತ್ತು ಬಾಂಗ್ಲದೇಶ ಗಡಿಯಲ್ಲಿ ಗಡಿ ಮಾರುಕಟ್ಟೆಗಳನ್ನು ಸ್ಥಾಪಿಸಲು ಒಪ್ಪಂದ
- ಮೋಟಾರು ವಾಹನ ಪ್ಯಾಸೆಂಜರ್ ಟ್ರಾಫಿಕ್ ನಿಯಂತ್ರಣ ಒಪ್ಪಂದ
- ಬಾಂಗ್ಲದೇಶದಲ್ಲಿ ಅಣು ವಿದ್ಯುತ್ ಸ್ಥಾವರಗಳ ಸ್ಥಾಪನೆಗೆ ಒಪ್ಪಂದ

## ಭಾರತ-ಆಸ್ಟ್ರೇಲಿಯಾ ನಡುವೆ ಆರು ಒಪ್ಪಂದಕ್ಕೆ ಸಹಿ



ಭಯೋತ್ಪಾದನೆ ನಿಗ್ರಹ, ಕ್ರೀಡೆ, ಆರೋಗ್ಯ, ವಿಮಾನಯಾನ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ಆರು ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಪ್ರಧಾನಿ ನರೇಂದ್ರ ಮೋದಿ ಹಾಗೂ ಆಸ್ಟ್ರೇಲಿಯಾದ ಪ್ರಧಾನಿ ಮಾಲ್ಕೊಮ್ ಟರ್ನಬುಲ್ ನಡುವಿನ ದ್ವಿಪಕ್ಷೀಯ ಮಾತುಕತೆ ವೇಳೆ ಈ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

**ಸಹಿ ಹಾಕಲಾದ ಒಪ್ಪಂದಗಳು:**

- ಕ್ರೀಡಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ಒಪ್ಪಂದಕ್ಕೆ ಸಹಿ
- ಆರೋಗ್ಯ ಮತ್ತು ಔಷಧೀಯ ಕ್ಷೇತ್ರದಲ್ಲಿ ಸಹಕಾರಕ್ಕೆ ಸಹಿ

www.karunaduexams.com

- ಪರಿಸರ, ಹವಾಮಾನ ಮತ್ತು ವನ್ಯಜೀವಿ ಕ್ಷೇತ್ರದಲ್ಲಿ ಸಹಕಾರಕ್ಕೆ ಸಹಿ
- ನಾಗರಿಕ ವಿಮಾನಯಾನ ಭದ್ರತೆ ಕ್ಷೇತ್ರದಲ್ಲಿ ಅಭಿವೃದ್ಧಿ ಮತ್ತು ಪರಸ್ಪರ ಸಹಕಾರಕ್ಕೆ ಸಹಿ
- ಅಂತಾರಾಷ್ಟ್ರೀಯ ಭಯೋತ್ಪಾದನೆ ಮಟ್ಟ ಹಾಕಲು ಸಹಕಾರಕ್ಕೆ ಸಹಿ
- ಇಸ್ರೋ ಮತ್ತು ಆಸ್ಟ್ರೇಲಿಯಾದ ಜಿಯೋಸೈನ್ಸ್ ನಡುವೆ ಭೂವೀಕ್ಷಣೆ ಹಾಗೂ ಉಪಗ್ರಹ ನ್ಯಾವಿಗೇಷನ್ ಸಂಬಂಧಿಸಿದಂತೆ ಸಹಿ ಹಾಕಲಾಗಿದೆ.

## ಭಾರತ-ಆಸ್ಟ್ರೇಲಿಯಾ ಕ್ರೀಡಾ ಸಹಭಾಗಿತ್ವ (IASP)ಕ್ಕೆ ಚಾಲನೆ



ಕ್ರೀಡಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ನೀಡುವ ಸಲುವಾಗಿ "ಭಾರತ-ಆಸ್ಟ್ರೇಲಿಯಾ ಕ್ರೀಡಾ ಸಹಭಾಗಿತ್ವ (India-Australia Sports Partnership)"ಗೆ ಚಾಲನೆ ನೀಡಲಾಗಿದೆ. ಭಾರತ ಭೇಟಿಯಲ್ಲಿರುವ ಆಸ್ಟ್ರೇಲಿಯಾದ ಪ್ರಧಾನಿ ಮಾಲ್ಕಮ್ ಟರ್ನ್ಬುಲ್ ಹಾಗೂ ಕೇಂದ್ರ ಯುವ ವ್ಯವಹಾರ ಹಾಗೂ ಕ್ರೀಡಾ ಸಚಿವ ವಿಜಯ್ ಗೋಯೆಲ್ ಅವರು ಚಾಲನೆ ನೀಡಿದರು. ಮಾಜಿ ಕ್ರಿಕೆಟ್ ಆಟಗಾರ ಸಚಿನ್ ತೆಂಡಲ್ಕೂರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. IASP ಯಡಿ ಭಾರತ ಮತ್ತು ಆಸ್ಟ್ರೇಲಿಯಾ ಈ ಕೆಳಗಿನ ನಾಲ್ಕು ಕ್ಷೇತ್ರದಲ್ಲಿ ಸಹಕಾರ ನೀಡಲಿದೆ.

- ಅಥ್ಲೇಟ್ ಮತ್ತು ಕೋಚ್ ಗಳ ತರಭೇತಿ ಹಾಗೂ ಅಭಿವೃದ್ಧಿ
- ಕ್ರೀಡಾ ವಿಜ್ಞಾನ
- ಕ್ರೀಢಾ ಆಢಳಿತ ಮತ್ತು ಸಮಗ್ರತೆ
- ತಳಮಟ್ಟದ ಪಾಲ್ಗೊಳ್ಳುವಿಕೆ.

ಈ ಸಹಭಾಗಿತ್ವದ ಅಡಿಯಲ್ಲಿ ವಿಕ್ಟೋರಿಯಾ ವಿಶ್ವವಿದ್ಯಾಲಯ ಹಾಗೂ ಕೆನ್ಬರಾ ವಿಶ್ವವಿದ್ಯಾಲಯ ಭಾರತದಲ್ಲಿ "ರಾಷ್ಟ್ರೀಯ ಕ್ರೀಡಾ ವಿಶ್ವವಿದ್ಯಾಲಯ"ವನ್ನು ಸ್ಥಾಪಿಸಲಿವೆ.

## ನೇಪಾಳ-ಚೀನಾ "ಸಾಗರಮಾತ ದೋಸ್ತಿ-2017" ಮಿಲಿಟರಿ ಅಭ್ಯಾಸ



ನೇಪಾಳ ಮತ್ತು ಚೀನಾ ನಡುವಿನ ಪ್ರಪ್ರಥಮ ಮಿಲಿಟರಿ ಸಮರಾಭ್ಯಾಸ "ಸಾಗತಮಾತ ದೋಸ್ತಿ-2017" ಏಪ್ರಿಲ್ 17 ರಿಂದ ಏಪ್ರಿಲ್ 24 ರವರೆಗೆ ನಡೆಯಲಿದೆ. ಹತ್ತು ದಿನಗಳ ಕಾಲ ನಡೆಯಲಿರುವ ಈ ಮಿಲಿಟರಿ ಅಭ್ಯಾಸದಲ್ಲಿ ಭಯೋತ್ಪಾದನೆ ನಿಗ್ರಹ ಹಾಗೂ ವಿಪತ್ತು ನಿರ್ವಹಣೆ ತಾಲೀಮು ನಡೆಸಲಾಗುವುದು. ಅಮೆರಿಕ ಮತ್ತು ಚೀನಾ ಜೊತೆ ನೇಪಾಳ ಈಗಾಗಲೇ ಮಿಲಿಟರಿ ಅಭ್ಯಾಸ ನಡೆಸುತ್ತಿದೆ ಆದರೂ ಇದೇ ಮೊದಲ ಬಾರಿಗೆ ಚೀನಾದೊಂದಿಗೆ ಜಂಟಿ ಮಿಲಿಟರಿ ಸಮರಾಭ್ಯಾಸ ನಡೆಸುತ್ತಿದೆ. ಚೀನಾದ ರಕ್ಷಣಾ ಸಚಿವ ಜನರಲ್ ಚಾಂಗ್ ವಾಂಕನ್ ಅವರು ನೇಪಾಳಕ್ಕೆ ಭೇಟಿ ನೀಡಿದ್ದ ವೇಳೆ ಈ ಸಮರಾಭ್ಯಾಸ ನಡೆಸುವ ಕುರಿತು ಚರ್ಚಿಸಲಾಗಿತ್ತು. ಚೀನಾ ಜೊತೆ ನೇಪಾಳ ಮಿಲಿಟರಿ ಸಮರಾಭ್ಯಾಸ ನಡೆಸುತ್ತಿರುವುದು



www.karunaduexams.com

ಭಾರತ-ನೇಪಾಳ ಶಾಂತಿ ಮತ್ತು ಸ್ನೇಹ ಒಪ್ಪಂದ-1950 ರ ಉಲ್ಲಂಘನೆಯಾಗದೆ ಇದ್ದರು ಸಹ ನೇಪಾಳದೊಂದಿಗೆ ಚೀನಾದ ಸಂಬಂಧ ಭಾರತಕ್ಕೆ ಗಡಿ ಸಮಸ್ಯೆಯನ್ನು ತಂದೊಡ್ಡಲಿದೆ ಎನ್ನಲಾಗಿದೆ.

**ಭಾರತ-ನೇಪಾಳ ಶಾಂತಿ ಮತ್ತು ಸ್ನೇಹ ಒಪ್ಪಂದ-1950:**

ಭಾರತ-ನೇಪಾಳ ಶಾಂತಿ ಮತ್ತು ಸ್ನೇಹ ಒಪ್ಪಂದ-1950ಕ್ಕೆ ಉಭಯ ದೇಶಗಳ ನಡುವೆ ಕಠ್ಮಂಡುವಿನಲ್ಲಿ ಜುಲೈ 31, 1950 ರಲ್ಲಿ ಸಹಿ ಹಾಕಲಾಯಿತು. ಉಭಯ ದೇಶಗಳ ನಡುವೆ ಸಾರ್ವಜನಿಕರ ಹಾಗೂ ಸರಕುಗಳ ಮುಕ್ತ ಸಂಚಾರ ಮತ್ತು ರಕ್ಷಣಾ ಹಾಗೂ ವಿದೇಶಾಂಗ ವ್ಯವಹಾರವನ್ನು ಸುಗುಮಗೊಳಿಸುವುದು ಒಪ್ಪಂದದ ಉದ್ದೇಶ. ಒಪ್ಪಂದವು ಒಟ್ಟು 10 ಪರಿಚ್ಛೇದಗಳನ್ನು ಒಳಗೊಂಡಿದ್ದು, ಉಭಯ ದೇಶಗಳ ನಡುವೆ ಶಾಶ್ವತ ಶಾಂತಿ ಮತ್ತು ಸ್ನೇಹ ಸಂಬಂಧವನ್ನು ಪ್ರೋತ್ಸಾಹಿಸುವುದಾಗಿದೆ.

**<u>"457" ವೀಸಾ ನೀತಿಯನ್ನು ರದ್ದುಪಡಿಸಿದ ಆಸ್ಟ್ರೇಲಿಯಾ</u>**



ಆಸ್ಟ್ರೇಲಿಯಾದಲ್ಲಿ ಉದ್ಯೋಗ ಮಾಡಲು ಅವಕಾಶ ಕಲ್ಪಿಸುತ್ತಿದ್ದ ವಿದೇಶಿ ಉದ್ಯೋಗಿಗಳ '457 ವೀಸಾ' ನೀತಿಯನ್ನು ಆಸ್ಟ್ರೇಲಿಯಾ ಸರ್ಕಾರ ರದ್ದುಪಡಿಸಿದೆ. ಈ ವೀಸಾ ನೀತಿಯಡಿ ಉಪಯೋಗಪಡೆಯುತ್ತಿರುವವರ ಸಂಖ್ಯೆ ಅತಿ ಹೆಚ್ಚಿದ್ದು, ಆಸ್ಟ್ರೇಲಿಯಾದಲ್ಲಿ ಉದ್ಭವವಾಗಿರುವ ನಿರುದ್ಯೋಗ ಸಮಸ್ಯೆಯನ್ನು ಸುಧಾರಿಸುವ ಸಲುವಾಗಿ ರದ್ದುಪಡಿಸಲಾಗಿದೆ. ಇದರ ಬದಲಾಗಿ "ಆಸ್ಟ್ರೇಲಿಯಾ ಮೊದಲು" ನೀತಿಯನ್ನು ಅಳವಡಿಸಿಕೊಳ್ಳಲು ಮುಂದಾಗಿದೆ.

- ಸುಮಾರು 95,757 ಕೆಲಸಗಾರರು "457 ವೀಸಾ ನೀತಿ"ಯಡಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಲ್ಲಿ ಭಾರತೀಯರು ಮೊದಲ ಸ್ಥಾನದಲ್ಲಿದ್ದು, ಯುಕೆ ಮತ್ತು ಚೀನಾ ನಂತರದ ಸ್ಥಾನದಲ್ಲಿವೆ.
- ಆಸ್ಟ್ರೇಲಿಯಾದ ಪ್ರಧಾನಿ ಟರ್ನ್ಬುಲ್ ಅವರು ಭಾರತಕ್ಕೆ ಪ್ರವಾಸ ನೀಡಿದ ವೇಳೆ ಈ ನಿರ್ಧಾರವನ್ನು ಘೋಷಿಸಿದ್ದಾರೆ. ರಾಷ್ಟ್ರೀಯ ಭದ್ರತೆ, ಭಯೋತ್ಪಾದನೆ ನಿಗ್ರಹ, ಶಿಕ್ಷಣ ಮತ್ತು ಇಂಧನ, ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಈ ವೇಳೆ ಉಭಯ ದೇಶಗಳ ನಡುವೆ ಆರು ಒಪ್ಪಂದಗಳಿಗೆ ಸಹಿ ಹಾಕಲಾಯಿತು.

**"457 ವೀಸಾ ನೀತಿ":**

457 ವೀಸಾ ನೀತಿಯಡಿ ಆಸ್ಟ್ರೇಲಿಯಾದ ಸಂಸ್ಥೆಗಳು ಕೌಶಲ್ಯ ಉದ್ಯೋಗಕ್ಕೆ ಕೆಲಸಗಾರರ ಕೊರತೆ ಇದ್ದಾಗ ವಿದೇಶಿಯರನ್ನು ನಾಲ್ಕು ವರ್ಷಗಳ ಅವಧಿಗೆ ಈ ವೀಸಾದಡಿ ಕೆಲಸಕ್ಕೆ ನೇಮಿಸಿಕೊಳ್ಳಬಹುದಾಗಿದೆ. 1996 ರಲ್ಲಿ ಅಂದಿನ ಆಸ್ಟ್ರೇಲಿಯಾದ ಪ್ರಧಾನಿ ಜಾನ್ ಹೋವರ್ಡ್ ಅವರ

www.karunaduexams.com

ಅವಧಿಯಲ್ಲಿ ಈ ವೀಸಾ ನೀತಿಯನ್ನು ಜಾರಿಗೆ ತರಲಾಯಿತು. ಈ ವೀಸಾವನ್ನು ಹೊಂದಿರುವವರು ಕುಟುಂಬ ಸದಸ್ಯರೊಂದಿಗೆ ಆಸ್ಟ್ರೇಲಿಯಾದಲ್ಲಿ ನೆಲಸಬಹುದು.

## ಆಸ್ಟ್ರೇಲಿಯಾ ಪೌರತ್ವ ಕಾನೂನುಗಳಿಗೆ ಮಹತ್ವದ ಬದಲಾವಣೆ



ಆಸ್ಟ್ರೇಲಿಯಾದ ಪ್ರಧಾನಿ ಮಾಲ್ಕಂ ಟರ್ನ್ಬುಲ್ ಅವರು ಆಸ್ಟ್ರೇಲಿಯಾ ಪೌರತ್ವಕ್ಕೆ ಸಂಬಂಧಿಸಿದ ಕಾನೂನುಗಳಿಗೆ ಮಹತ್ವದ ಬದಲಾವಣೆ ಮಾಡಿರುವುದಾಗಿ ಹೇಳಿದ್ದಾರೆ. ಆಸ್ಟ್ರೇಲಿಯಾದ 457 ವೀಸಾ ನೀತಿಯನ್ನು ರದ್ದುಪಡಿಸಿದ ಬೆನ್ನಲೆ ಈ ಹೊಸ ನಿರ್ಣಯವನ್ನು ಕೈಗೊಂಡಿದ್ದಾರೆ.

**ಪ್ರಮುಖಾಂಶಗಳು**:

- ಪೌರತ್ವ ಬಯಸುವವರು ಇಂಗ್ಲಿಷ್ ಭಾಷೆಯ ಕೌಶಲಗಳ ಕುರಿತು ಕಠಿಣ ಪರೀಕ್ಷೆ ಎದುರಿಸಬೇಕು.
- ಪೌರತ್ವಕ್ಕೆ ಅರ್ಜಿ ಸಲ್ಲಿಸುವವರು ಆಸ್ಟ್ರೇಲಿಯಾದಲ್ಲಿ ಕನಿಷ್ಠ ನಾಲ್ಕು ವರ್ಷಗಳ ಕಾಲ ಶಾಶ್ವತ ನಿವಾಸಿಯಾಗಿರಬೇಕು.
- ಪೌರತ್ವ ಬಯಸುವವರು ಆಸ್ಟ್ರೇಲಿಯದ ಮೌಲ್ಯಗಳನ್ನು ಎತ್ತಿಹಿಡಯಬೇಕು.
- ಯಾವುದೇ ರೀತಿಯ ಕ್ರಿಮಿನಲ್ ಅಪರಾಧ, ಕೌಟುಂಬಿಕ ಹಿಂಸಾಚಾರ, ಇನ್ನಿತರ ಅಪರಾಧಿಗಳಲ್ಲಿ ಭಾಗಿಯಾಗಿರಬಾರದು.
- ಒಟ್ಟಾರೆ, ಪೌರತ್ವಕ್ಕೆ ಸಂಬಂಧಿಸಿದ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಮೂರು ಅವಕಾಶಗಳನ್ನು ಮಾತ್ರ ನೀಡಲಾಗುವುದು.
- ಆಸ್ಟ್ರೇಲಿಯಾದ ಮೌಲ್ಯಗಳನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಈ ಕ್ರಮವನ್ನು ಕೈಗೊಳ್ಳಲಾಗಿದೆ.

## LPG ಆಮದು: ವಿಶ್ವದಲ್ಲಿ ಭಾರತಕ್ಕೆ ಎರಡನೇ ಸ್ಥಾನ



ಅಡುಗೆ ಅನಿಲ ಆಮದು ಮಾಡಿಕೊಳ್ಳುವಲ್ಲಿ ಭಾರತ ವಿಶ್ವದಲ್ಲೆ ಎರಡನೇ ಸ್ಥಾನದಲ್ಲಿದೆ. ಈ ಮುಂಚೆ ಜಪಾನ್ LPGಯನ್ನು ಆಮದು ಮಾಡಿಕೊಳ್ಳುವ ವಿಶ್ವದ ಎರಡನೇ ದೇಶವೆನಿಸಿತ್ತು. ಪ್ರಸ್ತುತ ಚೀನಾ ವಿಶ್ವದಲ್ಲೆ ಮೊದಲ ಸ್ಥಾನದಲ್ಲಿದೆ. ಪೆಟ್ರೋಲಿಯಂ ಪ್ಲಾನಿಂಗ್ & ಅನಾಲಿಸಿಸ್ ಸೆಲ್ ಈ ವರದಿಯನ್ನು ಬಿಡುಗಡೆಗೊಳಿಸಿದ್ದು, 2016-17ನೇ ಸಾಲಿನ ಆರ್ಥಿಕ ವರ್ಷದಲ್ಲಿ ದೇಶದ LPG ಆಮದು ಪ್ರಮಾಣದಲ್ಲಿ ಶೇ 23% ರಷ್ಟು ಹೆಚ್ಚಳವಾಗಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಉಚಿತ ಅನಿಲ ಸಂಪರ್ಕ ಯೋಜನೆಗಳಿಂದಾಗಿ LPG ಆಮದು ಹೆಚ್ಚಳವಾಗಲು ಪ್ರಮುಖ ಕಾರಣ ಎನ್ನಲಾಗಿದೆ. ಕಡು ಬಡ ಕುಟುಂಬ ಮಹಿಳೆಯರು ಮರದ ಕಟ್ಟಿಗೆ ಹಾಗೂ ಸಗಣಿ ಬೆರಣಿಯನ್ನು ಉರುವಲಾಗಿ

ಬಳಸುವುದನ್ನು ತಡೆಯಲು ಮೇ 2016ರಿಂದ ಉಚಿತ ಅನಿಲ ಸಂಪರ್ಕ  ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಇದರಿಂದಾಗಿ ದೇಶದಲ್ಲಿ ಸಕ್ರಿಯವಾಗಿ LPG ಬಳಸುವವರ ಸಂಖ್ಯೆ 200 ಮಿಲಿಯನ್ ರಷ್ಟಿದ್ದು, ಜಪಾನಿಗಿಂತ ಶೇ 60% ರಷ್ಟು ಹೆಚ್ಚು. ವಿಶ್ವಸಂಸ್ಥೆಯ ವರದಿ ಪ್ರಕಾರ ಮಾಲಿನ್ಯಕಾರಕ ಉರುವಲು ಬಳುಸುವುದರಿಂದ ಪ್ರತಿ ವರ್ಷ ಭಾರತದಲ್ಲಿ 1.3 ಮಿಲಿಯನ್ ಸಾವು ಸಂಭವಿಸುತ್ತಿದೆ. 2019ರ ವೇಳೆಗೆ ದೇಶದ ಶೇ80% ರಷ್ಟು ಕುಟುಂಬಗಳಿಗೆ ಅಡುಗೆ ಅನಿಲ ಸೌಲಭ್ಯವನ್ನು ಕಲ್ಪಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.

**ಪ್ರಧಾನ ಮಂತ್ರಿ ಉಜ್ವಲ ಯೋಜನೆ**

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉಜ್ವಲ ಯೋಜನೆಗೆ ಮೇ 2016 ರಂದು ಚಾಲನೆ ನೀಡಿದರು. "ಸ್ವಚ್ಛ ಇಂಧನ, ಉತ್ತಮ ಜೀವನ" ಯೋಜನೆಯ ಟ್ಯಾಗ್ ಲೈನ್. ಯೋಜನೆಯ ಉದ್ದೇಶಗಳು:

- ದೇಶದ ಎಲ್ಲ ನಾಗರಿಕರಿಗೂ ಎಲ್ ಪಿಜಿ ಸಂಪರ್ಕ ಸಿಕ್ಕಿದಂತೆ ಮಾಡುವುದು
- ಮಹಿಳೆಯರ ಆರೋಗ್ಯ ಸೂಧಾರಣೆ ಮಾಡುವುದು
- ಮಾಲಿನ್ಯ ನಿಯಂತ್ರಣ

www.karunaduexams.com

# ಪ್ರಶಸ್ತಿಗಳು

**<u>ಶಿವಕುಮಾರ ಸ್ವಾಮೀಜಿಯವರಿಗೆ ಭಗವಾನ್ ಮಹಾವೀರ ಪ್ರಶಸ್ತಿ</u>**



ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿರವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಇದೇ ಮೊದಲ ಬಾರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿ ನೀಡಲಾಗುತ್ತಿದೆ.

- ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಮಲ್ಲಿಕಾ ಘಂಟಿ ಅವರನ್ನು 2016ನೇ ಸಾಲಿನ ಅಕ್ಕಮಹಾದೇವಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಡಾ. ಮಲ್ಲಿಕಾ ಘಂಟಿ ಅವರು ಮಹಿಳಾ ಪರವಾದ ಹೋರಾಟಗಳಿಗೆ ಹೆಸರುವಾಸಿಯಾಗಿದ್ದಾರೆ.
- ಈ ಎರಡೂ ಪ್ರಶಸ್ತಿಗಳನ್ನು ಮೊದಲ ಬಾರಿಗೆ ನೀಡಲಾಗುತ್ತಿದ್ದು, ಎರಡೂ ಪ್ರಶಸ್ತಿಗಳು ತಲಾ ₹ 3 ಲಕ್ಷ ನಗದು ಹಾಗೂ ಸ್ಮರಣ ಫಲಕಗಳನ್ನು ಒಳಗೊಂಡಿದೆ.
- **ಶಿವಕುಮಾರಸ್ವಾಮೀಜಿ**

  ಶಿವಕುಮಾರ ಸ್ವಾಮೀಜಿ 110 ವರ್ಷಗಳನ್ನು ಪೂರೈಸಿದ್ದಾರೆ. ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಸಿದ್ದಗಂಗೆ ಪೀಠದ ನೇತೃತ್ವ ವಹಿಸಿಕೊಂಡು ತ್ರಿವಿಧ ದಾಸೋಹದಿಂದ ಜಾತಿ, ಮತ, ಪಂಥಗಳ ಬೇಧವಿಲ್ಲದೇ ಅಕ್ಷರ, ವಸತಿ ಮತ್ತು ಅನ್ನದಾಸೋಹದ ಕೇಂದ್ರವಾಗಿ ಸಿದ್ದಗಂಗಾ ಮಠವನ್ನು ಬೆಳೆಸಿದರು.
- ಗ್ರಾಮೀಣ ಮಕ್ಕಳಿಗೆ ವಿಶೇಷ ಆದ್ಯತೆ ನೀಡಿ ಅವರ ಬದುಕನ್ನು ರೂಪಿಸುವಲ್ಲಿ ಶ್ರೀಗಳು ಮಾಡಿದ ಕೆಲಸ ಅಸಮಾನ್ಯವಾದದ್ದು. ಅವರ ಸೇವೆಯನ್ನು ಪರಿಗಣಿಸಿ ಮಹಾವೀರ ಶಾಂತಿ ಪ್ರಶಸ್ತಿಗೆ ಡಾ. ಶಿವಕುಮಾರ ಸ್ವಾಮೀಜಿಯವರನ್ನು ಆಯ್ಕೆ ಮಾಡಲಾಗಿದೆ.
- ಈ ಪ್ರಶಸ್ತಿಯನ್ನು ಏಪ್ರಿಲ್ 9ರಂದು ನಡೆಯಲಿರುವ ಮಹಾವೀರ ಜಯಂತಿ ಸಂದರ್ಭದಲ್ಲಿ ಪ್ರದಾನ ಮಾಡಲಾಗುವುದು.

www.karunaduexams.com

## NIRF ಸಮೀಕ್ಷೆಯಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗೆ ಪ್ರಥಮ ಸ್ಥಾನ

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಪ್ರಕಟಿಸಿರುವ ದೇಶದ ಶಿಕ್ಷಣ ಸಂಸ್ಥೆಗಳ ಶ್ರೇಯಾಂಕದಲ್ಲಿ ಬೆಂಗಳೂರಿನ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ) ಮೊದಲ ಸ್ಥಾನ ಪಡೆದಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಎನ್‌ಐಆರ್‌ಎಫ್ ವಿಭಾಗವು ಶ್ರೇಯಾಂಕ ಪಟ್ಟಿಯನ್ನು ಪ್ರಕಟಿಸಿದೆ. ಒಟ್ಟಾರೆ ಶೈಕ್ಷಣಿಕ ಸಂಸ್ಥೆಗಳ ಸ್ಥಾನಮಾನ, ಇಂಜಿನಿಯರಿಂಗ್, ಸಾಮಾನ್ಯ ಪದವಿ ಕಾಲೇಜು, ಮ್ಯಾನೇಜ್‌ಮೆಂಟ್ ಸಂಸ್ಥೆಗಳು, ಫಾರ್ಮಸಿ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾಲಯ ಎಂಬ 6 ಪ್ರತ್ಯೇಕ ವಿಭಾಗಗಳಲ್ಲಿ ತಲಾ 100 ಶ್ರೇಯಾಂಕ ನೀಡಲಾಗಿದೆ. ಕಲಿಕಾ ವಿಧಾನ, ಕಲಿಕಾ ಸಂಪನ್ಮೂಲ, ಸಂಶೋಧನೆ, ಪದವೀಧರರ ಸಂಖ್ಯೆ, ಶಿಕ್ಷಣ ಸಂಸ್ಥೆಯ ವ್ಯಾಪ್ತಿ ಹಾಗೂ ಸಂಸ್ಥೆ ಬಗೆಗಿನ ಅಭಿಪ್ರಾಯ ಆಧರಿಸಿ ಶ್ರೇಯಾಂಕ ನೀಡಲಾಗುತ್ತಿದೆ.

**ಏನಿದು NIRF ಸಮೀಕ್ಷೆ?**

ದೇಶದ ಉನ್ನತ ಶಿಕ್ಷಣಗಳ ಗುಣಮಟ್ಟವನ್ನು ಅಳೆಯುವ ದೇಶಿಯ ಶ್ರೇಯಾಂಕ ವ್ಯವಸ್ಥೆ ಇದಾಗಿದೆ. ಕಲಿಕಾ ವಿಧಾನ, ಕಲಿಕಾ ಸಂಪನ್ಮೂಲ, ಸಂಶೋಧನೆ, ಪದವೀಧರರ ಸಂಖ್ಯೆ, ಶಿಕ್ಷಣ ಸಂಸ್ಥೆಯ ವ್ಯಾಪ್ತಿ ಹಾಗೂ ಸಂಸ್ಥೆ ಬಗೆಗಿನ ಅಭಿಪ್ರಾಯ ಆಧರಿಸಿ ಶ್ರೇಯಾಂಕ ನೀಡಲಾಗುತ್ತಿದೆ. ಒಟ್ಟಾರೆ ಶೈಕ್ಷಣಿಕ ಸಂಸ್ಥೆಗಳ ಸ್ಥಾನಮಾನ, ಇಂಜಿನಿಯರಿಂಗ್, ಸಾಮಾನ್ಯ ಪದವಿ ಕಾಲೇಜು, ಮ್ಯಾನೇಜ್‌ಮೆಂಟ್ ಸಂಸ್ಥೆಗಳು, ಫಾರ್ಮಸಿ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾಲಯ ಎಂಬ 6 ಪ್ರತ್ಯೇಕ ವಿಭಾಗಗಳಲ್ಲಿ ತಲಾ 100 ಶ್ರೇಯಾಂಕ ನೀಡಲಾಗುತ್ತಿದೆ.

**ಹಿನ್ನಲೆ**:

ಎರಡನೇ ಸಮೀಕ್ಷೆಯಲ್ಲಿ ಒಟ್ಟು 2995 ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಇವುಗಳಲ್ಲಿ 232 ವಿಶ್ವವಿದ್ಯಾಲಯಗಳು, 1024 ಎಂಜನಿಯರಿಂಗ್ ಶೈಕ್ಷಣಿಕ ಸಂಸ್ಥೆಗಳು, 546 ಮ್ಯಾನೆಜ್ಮೆಂಟ್ ಶೈಕ್ಷಣಿಕ ಸಂಸ್ಥೆಗಳು, 318 ಫಾರ್ಮಸಿ ಶೈಕ್ಷಣಿಕ ಸಂಸ್ಥೆಗಳು ಮತ್ತು 637 ಪದವಿ ಕಾಲೇಜುಗಳನ್ನು ಒಳಗೊಂಡಿದೆ.

**ಟಾಪ್ ಐದು ಭಾರತದ ಶಿಕ್ಷಣ ಸಂಸ್ಥೆಗಳು (ಒಟ್ಟಾರೆ):**

- ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
- ಐಐಟಿ, ಮದ್ರಾಸ್
- ಐಐಟಿ, ಬಾಂಬೆ
- ಐಐಟಿ, ಖರಗಪುರ
- ಐಐಟಿ, ನವದೆಹಲಿ

**ಟಾಪ್ ಐದು ಎಂಜನಿಯರಿಂಗ್ ಸಂಸ್ಥೆಗಳು:**

- ಐಐಟಿ, ಮದ್ರಾಸ್
- ಐಐಟಿ ಬಾಂಬೆ
- ಐಐಟಿ, ಖರಗಪುರ

www.karunaduexams.com

- ಐಐಟಿ, ನವ ದೆಹಲಿ
- ಐಐಟಿ, ಖಾನ್ಪುರ

**ಟಾಪ್ ಐದು ಮ್ಯಾನೇಜ್ಮೆಂಟ್ ಸಂಸ್ಥೆಗಳು:**

- ಐಐಎಂ, ಅಹಮದಬಾದ್
- ಐಐಎಂ, ಬೆಂಗಳೂರು
- ಐಐಎಂ, ಕಲ್ಕತ್ತಾ
- ಐಐಎಂ, ಲಕ್ನೋ
- ಐಐಎಂ, ಕೋಝಿಕೊಡೆ

**ಟಾಪ್ ಐದು ಕಾಲೇಜುಗಳು:**

- ಮಿರಾಂಡ ಹೌಸ್, ನವದೆಹಲಿ
- ಲೊಯೊಲ ಕಾಲೇಜು, ಚೆನ್ನೈ
- ಶ್ರೀರಾಮ್ ಕಾಮರ್ಸ್ ಕಾಲೇಜ್, ನವದೆಹಲಿ
- ಬಿಷಾಪ್ ಹೆಬೆರ್ ಕಾಲೇಜು, ತಿರುಚನಪಲ್ಲಿ
- ಆತ್ಮರಾಮ್ ಸನಾತನ ಧರ್ಮ ಕಾಲೇಜು, ನವದೆಹಲಿ

**ಟಾಪ್ ಐದು ಫಾರ್ಮಸಿ ಸಂಸ್ಥೆಗಳು:**

- ಜಾಮೀಯ ಹಮದರ್ದ್, ನವದೆಹಲಿ
- ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿಟಿಕಲ್ ಎಜುಕೇಷನ್ ಅಂಡ್ ರಿಸರ್ಚ್, ಮೊಹಲಿ, ಪಂಜಾಬ್
- ಯೂನಿವರ್ಸಿಟಿ ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿಟಿಕಲ್ ಸೈನ್ಸ್, ಚಂಡೀಗರ್
- ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಟೆಕ್ನಾಲಜಿ, ಮುಂಬೈ
- ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಫಾರ್ಮಸಿಟಿಕಲ್ ಎಜುಕೇಷನ್ ಅಂಡ್ ರಿಸರ್ಚ್, ಹೈದ್ರಬಾದ್

**ಶ್ರೇಯಾಂಕದಲ್ಲಿ ಸ್ಥಾನ ಪಡೆದಿರುವ ಕರ್ನಾಟಕದ ಸಂಸ್ಥೆಗಳು:**

- 1. ಐಐಎಸ್‌ಸಿ, ಬೆಂಗಳೂರು
- 11. ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್, ಬೆಂಗಳೂರು
- 25. ಐಐಎಂ, ಬೆಂಗಳೂರು
- 30. ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್, ಮಣಿಪಾಲ್
- 57. ಮಾನಸ ಗಂಗೋತ್ರಿ ಮೈಸೂರು ವಿಶ್ವವಿದ್ಯಾಲಯ
- 60. ಎನ್‌ಐಟಿ, ಸುರತ್ಕಲ್
- 74. ಜೆಎಸ್‌ಎಸ್ ವಿಶ್ವವಿದ್ಯಾಲಯ, ಮೈಸೂರು
- 100. ಕೆಎಲ್‌ಇ ಅಕಾಡೆಮಿ ಫಾರ್ ಹೈಯರ್ ಎಜುಕೇಶನ್ ಆಂಡ್ ರಿಸರ್ಚ್, ಬೆಳಗಾವಿ

ಪದವಿ ಕಾಲೇಜುಗಳು

www.karunaduexams.com

- 29. ಸೇಂಟ್ ಜೋಸೆಫ್ ಕಾಲೇಜು, ಬೆಂಗಳೂರು
- 44. ಸೇಂಟ್ ಅಲೋಶಿಯಸ್ ಕಾಲೇಜು, ಮಂಗಳೂರು
- 71. ಎಸ್‌ಡಿಎಂ ಕಾಲೇಜು, ಉಜಿರೆ
- 89. ಪಿ.ಸಿ.ಜಾಬಿನ್ ಕಾಲೇಜು, ಹುಬ್ಬಳ್ಳಿ
- 94. ಜೆ.ಜಿ.ವಾಣಿಜ್ಯ ಕಾಲೇಜು, ಧಾರವಾಡ
- 96. ಪ್ರೆಸಿಡೆನ್ಸಿ ಕಾಲೇಜು, ಬೆಂಗಳೂರು

**ಇಂಜಿನಿಯರಿಂಗ್ ಕಾಲೇಜು**

- 22. ಎನ್‌ಐಟಿ, ಸುರತ್ಕಲ್ 43. ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ್
- 45. ಎಂ.ಎಸ್.ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು
- 49. ಆರ್.ವಿ.ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು 52. ಬಿಎಂಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು
- 72. ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು
- 86. ಪಿಇಎಸ್ ವಿಶ್ವವಿದ್ಯಾಲಯ, ಬೆಂಗಳೂರು
- 95. ಬಿಎಂಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆಂಡ್ ಮ್ಯಾನೇಜ್ಮೆಂಟ್, ಬೆಂಗಳೂರು
- ಮ್ಯಾನೇಜ್‌ಮೆಂಟ್
- ಶೈಕ್ಷಣಿಕ ಸಂಸ್ಥೆಗಳು
- 2. ಐಐಎಂ, ಬೆಂಗಳೂರು 3. ಕ್ಸೇವೀಯರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆಂಡ್ ಎಂಟರ್‌ಪ್ರಿನರ್‌ಶಿಪ್, ಬೆಂಗಳೂರು

**ವಿಶ್ವವಿದ್ಯಾಲಯಗಳು**

- 1.ಐಐಎಸ್‌ಸಿ, ಬೆಂಗಳೂರು
- 4. ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್, ಬೆಂಗಳೂರು
- 18. ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್, ಮಣಿಪಾಲ್
- 36. ಮಾನಸ ಮೈಸೂರು ಗಂಗೋತ್ರಿ ವಿಶ್ವವಿದ್ಯಾಲಯ
- 45. ಜೆಎಸ್‌ಎಸ್ ವಿಶ್ವವಿದ್ಯಾಲಯ, ಮೈಸೂರು
- 62. ಕೆಎಲ್‌ಇ ಅಕಾಡೆಮಿ ಫಾರ್ ಹೈಯರ್ ಎಜುಕೇಶನ್ ಆಂಡ್ ರಿಸರ್ಚ್, ಬೆಳಗಾವಿ
- 83. ನಿಟ್ಟೆ ವಿಶ್ವವಿದ್ಯಾಲಯ, ನಿಟ್ಟೆ
- 94. ಪಿಇಎಸ್ ವಿಶ್ವವಿದ್ಯಾಲಯ, ಬೆಂಗಳೂರು

**ಫಾರ್ಮಸಿ ಕಾಲೇಜುಗಳು**

- 7. ಮಣಿಪಾಲ್ ಕಾಲೇಜ್ ಆಫ್ ಫಾರ್ವಸುಟಿಕಲ್ ಸೈನ್ಸ್, ಮಣಿಪಾಲ್
- 10. ಜೆಎಸ್‌ಎಸ್ ಕಾಲೇಜ್ ಫಾರ್ಮಸಿ, ಮೈಸೂರು
- 27. ಎನ್‌ಜಿಎಸ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಫಾರ್ವಸುಟಿಕಲ್ ಸೈನ್ಸ್, ಮಂಗಳೂರು
- 37. ಕೆಎಲ್‌ಇ ಅಕಾಡೆಮಿ ಫಾರ್ ಹೈಯರ್ ಎಜುಕೇಶನ್ ಆಂಡ್ ರಿಸರ್ಚ್, ಬೆಳಗಾವಿ

www.karunaduexams.com

**64ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟ**

64ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟವಾಗಿದೆ. ಮರಾಠಿ ಚಿತ್ರ ಕಸಾವ್ಯೆ ಶ್ರೇಷ್ಠ ಕಥಾಚಿತ್ರ



ಪ್ರಶಸ್ತಿ ದೊರೆತಿದೆ. ಕನ್ನಡದ ಅಲ್ಲಮ್ಮ ಸೇರಿದಂತೆ ಎರಡು ಚಿತ್ರಗಳು ಪ್ರಶಸ್ತಿ ಪಡೆದಿವೆ. ರಿಸರ್ವೇಷನ್ ಹಾಗೂ ಅಲ್ಲಮ್ಮ ಚಿತ್ರಕ್ಕೆ ಪ್ರಶಸ್ತಿ ಬಂದಿದೆ. ಇದೇ ಮೊದಲ ಬಾರಿ ಬಾಲಿವುಡ್ ನಟ ಅಕ್ಷಯ್ ಕುಮಾರ್ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಗಳಿಸಿದ್ದಾರೆ.

**ಪ್ರಮುಖ ಪ್ರಶಸ್ತಿಗಳ ವಿವರ:**

**ಅತ್ಯುತ್ತಮ ಕನ್ನಡ ಚಿತ್ರ** : ರಿಸರ್ವೇಷನ್

**ಅತ್ಯುತ್ತಮ ಹಿಂದಿ ಚಿತ್ರ :** ನಿರ್ಜಾ

**ಅತ್ಯುತ್ತಮ ತಮಿಳು ಚಿತ್ರ :** ಜೋಕರ್

**ಅತ್ಯುತ್ತಮ ನಟ:** ಅಕ್ಷಯ್ ಕುಮಾರ್ ( ರುಸ್ತುಂ)

**ಅತ್ಯುತ್ತಮ ನಟಿ** : ಮಲಯಾಳಂನ ಸುರಭಿ ಲಕ್ಷ್ಮಿ

**ವಿಶೇಷ ಎಫೆಕ್ಟ್ ಚಿತ್ರ** : ಶಿವಾಯ್

**ತೀರ್ಪುಗಾರರ ಪ್ರಶಸ್ತಿ**: ಮೋಹನ್ ಲಾಲ್

**ಅತ್ಯುತ್ತಮ ಪೋಷಕ ನಟಿ** : ಜಾಯಿರಾ ವಸೀಮ್

**ಮೋಸ್ಟ್ ಫಿಲ್ಮ್ ಫ್ರೆಂಡ್ಲಿ ಸ್ಟೇಟ್:** ಉತ್ತರ ಪ್ರದೇಶ '

**ಅತ್ಯುತ್ತಮ ಆಕ್ಷನ್ ನಿರ್ದೇಶಕ** : ಪುಲಿ ಮುರುಗನ್

**ಶ್ರೇಷ್ಠ ಬಾಲ ನಟ**: ಮನೋಹರ್ ಕೆ (ಕನ್ನಡ- ರೈಲ್ವೆ ಚಿಲ್ಡ್ರನ್) ಆದೀಶ್ ಪ್ರವೀಣ್ (ಮಲೆಯಾಳಂ ಸಿನಿಮಾ ಕುಂಜು ದೈವಂ).

**2016ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಪ್ರಕಟ**



**2016ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳು ಪ್ರಕಟಗೊಂಡಿವೆ. ಕವಿತಾ ಲಂಕೇಶ್ ನೇತೃತ್ವದ ಎಂಟು ಜನ ಸದಸ್ಯರ ಆಯ್ಕೆ ಸಮಿತಿ 126 ಸಿನಿಮಾಗಳನ್ನು ವೀಕ್ಷಿಸಿ 25 ವಿಭಾಗಗಳಲ್ಲಿ ಪ್ರಶಸ್ತಿಗೆ ಆಯ್ಕೆ ಮಾಡಿದೆ.**

**ಪ್ರಶಸ್ತಿಯ ವಿವರ:**

- **ಅತ್ಯುತ್ತಮ ಚಿತ್ರ: ಅಮರಾವತಿ:**
- **ಅತ್ಯುತ್ತಮ ನಟ"  (ಸುಬ್ಬಯ್ಯ ನಾಯ್ಡು ಪ್ರಶಸ್ತಿ): ಅಚ್ಯುತ್ ಕುಮಾರ್  (ಅಮರಾವತಿ)**
- **ಅತ್ಯುತ್ತಮ ನಟಿ: ಶ್ರುತಿ ಹರಿಹರನ್ (ಬ್ಯೂಟಿಫುಲ್  ಮನಸುಗಳು)**

www.karunaduexams.com

· ಎರಡನೇ ಅತ್ಯುತ್ತಮ ಚಲನಚಿತ್ರ: ರೈಲ್ವೇ ಚಿಲ್ಡ್ರನ್

· ಮೂರನೇ ಅತ್ಯುತ್ತಮ ಚಲನಚಿತ್ರ: ಅಂತರ್ಜಲ

· ವಿಶೇಷ ಸಾಮಾಜಿಕ ಕಳಕಳಿಯ ಚಿತ್ರ: ಮೂಡ್ಲ ಸೀಮೆಯಲಿ

· ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ: ಕಿರಿಕ್ ಪಾರ್ಟಿ

· ಅತ್ಯುತ್ತಮ ಮಕ್ಕಳ ಚಿತ್ರ: ಜೀರ್ಜಿಂಬೆ

· ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ: ರಾಮಾ ರಾಮಾ ರೇ

· ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರ: ಮದಿಪು

· ಅತ್ಯುತ್ತಮ ಪೋಷಕ ನಟ (ಕೆ ಎಸ್ ಅಶ್ವತ್ಥ್ ಪ್ರಶಸ್ತಿ) : ನವೀನ್ ಡಿ ಪಡೀಲ್ (ಕುಡ್ಲಕೆಫೆ) ತುಳುಚಿತ್ರ

· ಅತ್ಯುತ್ತಮ ಪೋಷಕ ನಟಿ : ಅಕ್ಷತಾ ಪಾಂಡವಪುರ(ಚಿತ್ರ:ಪಲ್ಲಟ)

· ಅತ್ಯುತ್ತಮ ಕಥೆ : ನಂದಿತಾ ಯಾದವ್ (ಚಿತ್ರ:ರಾಜು ಎದೆಗೆ ಬಿದ್ದ ಅಕ್ಷರ)

· ಅತ್ಯುತ್ತಮ ಚಿತ್ರಕಥೆ : ಅರವಿಂದ ಶಾಸ್ತ್ರಿ (ಚಿತ್ರ:ಕಹಿ)

· ಅತ್ಯುತ್ತಮ ಸಂಭಾಷಣೆ: ಬಿ ಎಂ ಗಿರಿರಾಜ್ (ಅಮರಾವತಿ)

· ಅತ್ಯುತ್ತಮ ಛಾಯಾಗ್ರಹಣ: ಶೇಖರ್ ಚಂದ್ರ (ಮುಂಗಾರು ಮಳೆ-2)

· ಅತ್ಯುತ್ತಮ ಸಂಗೀತ ನಿರ್ದೇಶನ: ಎಂ ಆರ್ ಚರಣ್ ರಾಜ್ (ಚಿತ್ರ: ಜೀರ್ ಜಿಂಬೆ)

· ಅತ್ಯುತ್ತಮ ಸಂಕಲನ: ಮಾಸ್ಟರ್ ಸಿ ರವಿಚಂದ್ರನ್ (ಚಿತ್ರ : ಮಮ್ಮಿ)

· ಅತ್ಯುತ್ತಮ ಬಾಲ ನಟ: ಮನೋಹರ್ ಕೆ (ಚಿತ್ರ : ರೈಲ್ವೇ ಚಿಲ್ಡ್ರನ್)

· ಅತ್ಯುತ್ತಮ ಬಾಲ ನಟಿ: ಬೇಬಿ ಸಿರಿವಾನಳ್ಳಿ (ಚಿತ್ರ: ಜೀರ್ ಜಿಂಬೆ) ಬೇಬಿ ರೇವತಿ (ಬೇಟಿ)

· ಅತ್ಯುತ್ತಮ ಕಲಾ ನಿರ್ದೇಶನ: ಶಶಿಧರ ಅಡಪ (ಚಿತ್ರ :ಉಪ್ಪಿನ ಕಾಗದ)

· ಅತ್ಯುತ್ತಮ ಗೀತೆ ರಚನೆ: ಕಾರ್ತಿಕ್ ಸರಗೂರು (ಚಿತ್ರ:ಜೀರ್ ಜಿಂಬೆ)

· ಅತ್ಯುತ್ತಮ ಹಿನ್ನೆಲೆ ಗಾಯಕ: ವಿಜಯ ಪ್ರಕಾಶ್ (ಚಿತ್ರ:ಬ್ಯೂಟಿಫುಲ್ ಮನಸ್ಸುಗಳು)

· ಅತ್ಯುತ್ತಮ ಹಿನ್ನೆಲೆ ಗಾಯಕಿ : ಸಂಗೀತ ರವೀಂದ್ರನಾಥ್ (ಚಿತ್ರ: ಜಲ್ಸಾ)

· ತೀರ್ಪುಗಾರರ ವಿಶೇಷ ಪ್ರಶಸ್ತಿ: ಚಿನ್ಮಯ್ (ಸಂತೆಯಲ್ಲಿ ನಿಂತ ಕಬೀರ-ವಸ್ತ್ರಾಲಂಕಾರ ವಿಭಾಗ)

· ಅತ್ಯುತ್ತಮ ನಿರ್ಮಾಣ ನಿರ್ವಾಹಕ : ಕೆ ವಿ ಮಂಜಯ್ಯ (ಮುಂಗಾರು ಮಳೆ-2)

www.karunaduexams.com

**ತಮಿಳುನಾಡು, ಹಿಮಾಚಲ ಪ್ರದೇಶ ಮತ್ತು ತ್ರಿಪುರಗೆ 2015-16ನೇ ಸಾಲಿನ ಕೃಷಿ ಕರ್ಮನ್ ಪ್ರಶಸ್ತಿ**




2015-16ನೇ ಸಾಲಿನ ಕೃಷಿ ಕರ್ಮನ್ ಪ್ರಶಸ್ತಿ ಪ್ರಕಟಗೊಂಡಿದ್ದು, 2015-16ನೇ ಸಾಲಿನಲ್ಲಿ ಅತಿ ಹೆಚ್ಚು ಆಹಾರ ಧಾನ್ಯಗಳ ಉತ್ಪಾದನೆಗಾಗಿ ತಮಿಳುನಾಡು, ಹಿಮಾಚಲ ಪ್ರದೇಶ ಹಾಗೂ ತ್ರಿಪುರ ರಾಜ್ಯಗಳನ್ನು ಕೃಷಿ ಕರ್ಮನ್ ಪ್ರಶಸ್ತಿಗೆ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಆಯ್ಕೆಮಾಡಿದೆ. ಈ ರಾಜ್ಯಗಳಲ್ಲದೆ, ಒಟ್ಟು ಆಹಾರ ಧಾನ್ಯಗಳ ಉತ್ಪಾದನೆಗಾಗಿ ಮೇಘಾಲಯ ರಾಜ್ಯಕ್ಕೆ ಪ್ರಶಂಸನೀಯ ಪ್ರಶಸ್ತಿಯನ್ನು ನೀಡಲಾಗಿದ್ದು, ಪ್ರಶಸ್ತಿಯು ರೂ 1 ಕೋಟಿ ನಗದು ಒಳಗೊಂಡಿದೆ.

- ತಮಿಳುನಾಡು ರಾಜ್ಯವನ್ನು ದೊಡ್ಡ ಮಟ್ಟ (10 ದಶಲಕ್ಷ ಟನ್ ಗಳ ಉತ್ಪಾದನೆ) ವಿಭಾಗ, ಹಿಮಾಚಲ ಪ್ರದೇಶ ಮಧ್ಯಮ ವರ್ಗ (1 ರಿಂದ 10 ದಶಲಕ್ಷ ಟನ್ ಗಳಷ್ಟು ಉತ್ಪಾದನೆ) ಹಾಗೂ ತ್ರಿಪುರಾವನ್ನು ಸಣ್ಣ ಮಟ್ಟದ ಉತ್ಪಾದನೆ (1 ದಶಲಕ್ಷ ಟನ್ ಗಳಿಗಿಂತ ಕಡಿಮೆ) ವಿಭಾಗದಲ್ಲಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.
- ತಮಿಳುನಾಡಿನಲ್ಲಿ 2015-16ನೇ ಸಾಲಿನಲ್ಲಿ 130 ಲಕ್ಷ ಟನ್ ಆಹಾರ ಧಾನ್ಯಗಳನ್ನು ಉತ್ಪಾದಿಸಲಾಗಿದೆ. ಈ ಪ್ರಮಾಣ ಕಳೆದ ಐದು ವರ್ಷಗಳಲ್ಲೆ ಅತ್ಯಂತ ಹೆಚ್ಚು. ಇನ್ನು ಇಳುವರಿ ವಿಚಾರದಲ್ಲೂ ಸಹ ತಮಿಳುನಾಡು ರಾಷ್ಟ್ರೀಯ ಸರಾಸರಿ ಇಳುವರಿ ಪ್ರಮಾಣಕ್ಕಿಂತ ಮುಂದಿದೆ. ತಮಿಳುನಾಡಿನಲ್ಲಿ ಪ್ರತಿ ಹೆಕ್ಟೇರ್ ಗೆ 3.38 ಟನ್ ಇಳುವರಿ ಇದ್ದರೆ ರಾಷ್ಟ್ರ ಮಟ್ಟದಲ್ಲಿ ಈ ಪ್ರಮಾಣ 2.028 ರಷ್ಟಿದೆ. ವಿನೂತನ, ಪರಿಸರ-ಸ್ನೇಹಿ ಸಮಗ್ರ ಕೀಟ ನಿರ್ವಹಣೆ ಪದ್ದತಿಯನ್ನು ಅಳವಡಿಸಿಕೊಂಡಿರುವುದು ಈ ಸಾಧನೆಗೆ ಹಾದಿಯಾಗಿದೆ.
- ಈ ಸಾಧನೆಗಾಗಿ ತಮಿಳುನಾಡು ಸರ್ಕಾರಕ್ಕೆ ರೂ 5 ಕೋಟಿ ಪ್ರಶಸ್ತಿ ಲಭಿಸಲಿದೆ. ತಮಿಳುನಾಡು ಸರ್ಕಾರ ಈ ಹಿಂದೆ ಮೂರು ಬಾರಿ ಈ ಪ್ರಶಸ್ತಿಗೆ ಭಾಜನವಾಗಿತ್ತು.
- ಸಣ್ಣ ರಾಜ್ಯಗಳ ವಿಭಾಗದಲ್ಲಿ ಅತಿ ಹೆಚ್ಚು ಆಹಾರ ಧಾನ್ಯಗಳನ್ನು ಉತ್ಪಾದಿಸುವ ಮೂಲಕ ತ್ರಿಪುರ ಸರ್ಕಾರ 2015-16ನೇ ಸಾಲಿನ ಕೃಷಿ ಕರ್ಮನ್ ಪ್ರಶಸ್ತಿಗೆ ಪಾತ್ರವಾಗಿದೆ. ಪ್ರಶಸ್ತಿಯು ರೂ 5 ಕೋಟಿ ನಗದನ್ನು ಒಳಗೊಂಡಿದ್ದು, ಎರಡನೇ ಬಾರಿ ತ್ರಿಪುರ ಸರ್ಕಾರ ಈ ಪ್ರಶಸ್ತಿಯನ್ನು ಪಡೆದುಕೊಂಡತಾಗಿದೆ.

**ಕೃಷಿ ಕರ್ಮನ್ ಪ್ರಶಸ್ತಿ:**

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ 2010-11ರಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಿದೆ. ಆಹಾರ ಧಾನ್ಯಗಳ ಉತ್ಪಾದನೆ ಹಾಗೂ ಭತ್ತ, ಗೋದಿ, ಧಾನ್ಯಗಳು ಮತ್ತು ಬೇಳೆಕಾಳುಗಳ ಅಧಿಕ ಉತ್ಪಾದನೆ ಮಾಡುವ ರಾಜ್ಯಗಳಿಗೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

www.karunaduexams.com

**ಪಂಚಾಯತ್ ರಾಜ್ ಇಲಾಖೆಯಲ್ಲಿ ಮಾಹಿತಿ ತಂತ್ರಜ್ಞಾನ ಬಳಕೆಗೆ ರಾಜ್ಯಕ್ಕೆ "ಇ-ಪುರಸ್ಕಾರ"**




ಕರ್ನಾಟಕ ಪಂಚಾಯತ್ ರಾಜ್ ಇಲಾಖೆಗೆ 2015-16ನೇ ಸಾಲಿನ "ಇ-ಪುರಸ್ಕಾರ" ಪ್ರಶಸ್ತಿ ಲಭಿಸಿದೆ. ಇಲಾಖೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (ಐಸಿಟಿ) ಸಮರ್ಥ ಬಳಕೆಗಾಗಿ ಈ ಪ್ರಶಸ್ತಿ ಲಭಿಸಿದೆ. ಏಪ್ರಿಲ್ 24ರಂದು ಲಖನೌದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ

- ಸತತ ಮೂರನೇ ಬಾರಿ 'ಇ–ಪುರಸ್ಕಾರ' ರಾಜ್ಯಕ್ಕೆ ಲಭಿಸಿದೆ.
- ಪಂಚಾಯತ್ ರಾಜ್ ಇಲಾಖೆಯಲ್ಲಿ ಅಭಿವೃದ್ದಿ ಕಾಮಗಾರಿಗಳಲ್ಲಿ ಪಾರದರ್ಶಕತೆ ಸಾಧಿಸಲು "ಗಾಂಧಿ ಸಾಕ್ಷಿ ಕಾಯಕ" ಜಾರಿಗೆ ತರಲಾಗಿದೆ.
- ಇದೇ ವೇಳೆ ರಾಜ್ಯಮಟ್ಟದಲ್ಲಿ ಕೊಡಗು ಜಿಲ್ಲಾ ಪಂಚಾಯಿತಿ, ಪುತ್ತೂರು ಮತ್ತು ಸಾಗರ ತಾಲ್ಲೂಕು ಪಂಚಾಯಿತಿ ಹಾಗೂ ತೀರ್ಥಹಳ್ಳಿ ತಾಲ್ಲೂಕಿನ ಮೇಳಿಗೆ ಗ್ರಾಮ ಪಂಚಾಯಿತಿಗೆ ಇ–ಪುರಸ್ಕಾರ ಲಭಿಸಿದೆ.

**ಶಂಕರಾಭರಣಂ ವಿಶ್ವನಾಥ್ ಗೆ 2016- ದಾದಾಸಾಹೇಬ್ ಪಾಲ್ಕೆ ಪ್ರಶಸ್ತಿ**



ಖ್ಯಾತ ನಿರ್ದೇಶಕ, ನಟ ಹಾಗೂ ಧ್ವನಿ ವಿನ್ಯಾಸಕ ಕೆ. ವಿಶ್ವನಾಥ್ ಅವರನ್ನು 2016 ದಾದಾಸಾಹೇಬ್ ಫಾಲ್ಕೆ ಗೌರವಕ್ಕೆ ಆಯ್ಕೆಮಾಡಲಾಗಿದೆ. ಪ್ರಶಸ್ತಿಯು ರೂ 10 ಲಕ್ಷ ನಗದು, ಸ್ವರ್ಣ ಕಮಲ ಹಾಗೂ ಶಾಲು ಒಳಗೊಂಡಿದ್ದು, ರಾಷ್ಟ್ರಪತಿ ಪ್ರಣಭ್ ಮುಖರ್ಜಿ ಅವರು ಮೇ 3ರಂದು ಪ್ರದಾನ ಮಾಡಲಿದ್ದಾರೆ. ಹಲವು ರಾಷ್ಟ್ರ ಪ್ರಶಸ್ತಿಗಳನ್ನು ಪಡೆದುಕೊಂಡಿರುವ ಕೆ ವಿಶ್ವನಾಥ್ ಅವರು 50 ಚಿತ್ರಗಳನ್ನು ನಿರ್ದೇಶನ ಮಾಡಿದ್ದಾರೆ.

**ಪ್ರಮುಖಾಂಶಗಳು**:

- ಕೃಷ್ಣಾ ನದಿ ತೀರದ ಪೆದಪುಲಿವರ್ರು ಎಂಬ ಹಳ್ಳಿಯಲ್ಲಿ ಸುಬ್ರಹ್ಮಣ್ಯಂ ಹಾಗೂ ಸರಸ್ವತಿ ದಂಪತಿಯ ಮಗನಾಗಿ 1930ರಲ್ಲಿ ಹುಟ್ಟಿದರು.
- ಚೆನ್ನೈನ ಸ್ಟುಡಿಯೊದಲ್ಲಿ ತಂತ್ರಜ್ಞನಾಗಿ ಚಲನಚಿತ್ರ ವೃತ್ತಿ ಪ್ರಾರಂಭಿಸಿದರು. ನಿರ್ದೇಶಕರಾದ ಅದುರ್ತಿ ಸುಬ್ಬರಾವ್ ಹಾಗೂ ರಾಮನಾಥ್ ಅವರಿಗೆ ಸಹಾಯಕನಾಗಿ ಕೆಲಸ ಮಾಡಿ ಅನುಭವ ಪಡೆದುಕೊಂಡರು..
- ಅಕ್ಕಿನೇನಿ ನಾಗೇಶ್ವರ ರಾವ್ ಅಭಿನಯದ 'ಆತ್ಮಗೌರವಂ' ಮೂಲಕ ಸ್ವತಂತ್ರ ನಿರ್ದೇಶಕರಾದರು.

www.karunaduexams.com

- ಪರ್ಯಾಯ ಸಿನಿಮಾಗಳಿಗೆ ಇರುವಂಥ ಕಲಾತ್ಮಕತೆಯನ್ನು ಜನಪ್ರಿಯ ಧಾಟಿಗೆ ಒಗ್ಗಿಸುವ ಮೂಲಕ ವಿಶ್ವನಾಥ್ ತಾವು ನಂಬಿದ ಸಿನಿಮಾ ಮಾಲೆ ಕಟ್ಟತೊಡಗಿದರು. 'ಶಾರದಾ', 'ಓ ಸೀತ ಕಥಾ' ಅವರ ಪಾಲಿಗೆ ಪ್ರಯೋಗಶಾಲೆ ಆಗಿತ್ತಾದರೂ 'ಸಿರಿ ಸಿರಿ ಮುವ್ವಾ' ತೆಲುಗು ಚಿತ್ರದಲ್ಲಿ ಅವರ ಅನನ್ಯತೆ ಮೊದಲು ವ್ಯಕ್ತಗೊಂಡಿತು. ಅದು ಗೆದ್ದುದೇ ಸಂಗೀತ, ನಾಟ್ಯದಂಥ ಕಲೆಯನ್ನು ಬೆಸೆದು ಚಿತ್ರಕಥೆ ಹೊಸೆಯಲಾರಂಭಿಸಿದರು. ಭಾರತೀಯ ಶಾಸ್ತ್ರೀಯ ಸಂಗೀತವನ್ನು ಪಾಶ್ಚಾತ್ಯ ಸಂಗೀತಕ್ಕೆ ಮುಖಾಮುಖಿಯಾಗಿಸಿದ ಹರಳುಗಟ್ಟಿದ ಯತ್ನವಾಗಿ ಸದ್ದು ಮಾಡಿದ್ದು 'ಶಂಕರಾಭರಣಂ'.
- ತೆಲುಗಿನ 'ಸಪ್ತಪದಿ', 'ಓ ಸೀತ ಕಥಾ', 'ಜೀವನ ಜ್ಯೋತಿ', 'ಶುಭಲೇಖ' ಮುಂತಾದ ಜನಪ್ರಿಯ ಚಿತ್ರಗಳನ್ನು ನಿರ್ದೇಶಿಸಿ ಪ್ರಸಿದ್ಧರಾದರು.
- 'ಕಾಮ್‌ಚೋರ್', 'ಸಂಜೋಗ್', 'ಜಾಗ್ ಉಠಾ ಇನ್ಸಾನ್', 'ಈಶ್ವರ್' (ಸ್ವಾತಿಮುತ್ಯಂ ರೀಮೇಕ್), 'ಸುರ್ ಸಂಗಮ್', 'ಶುಭ್ ಕಾಮ್ನಾ', 'ಸಂಗೀತ್', 'ಧನ್‌ವಾನ್' ಅವರು ನಿರ್ದೇಶನದ ಹಿಂದಿ ಚಿತ್ರಗಳು. ಐದು ರಾಷ್ಟ್ರ ಪ್ರಶಸ್ತಿಗಳು, ಆರು ನಂದಿ ಹಾಗೂ ಹತ್ತು ಫಿಲ್ಮ್‌ಫೇರ್ ಪ್ರಶಸ್ತಿಗಳು ಅವರ ಪ್ರಭಾವಳಿಗೆ ಮೆರುಗು ನೀಡಿವೆ.
- ಇವರ ಸ್ವಾತಿ ಮುತ್ಯಂ ಚಿತ್ರ 1987ರಲ್ಲಿ ಅಕಾಡೆಮಿ ಆವಾರ್ಡ್ಸ್‌ಗೆ ನಾಮನಿರ್ದೇಶನಗೊಂಡ ಭಾರತದ ಸಿನಿಮಾ.
- 1979ರಲ್ಲಿ ತೆರೆಕಂಡ ಶಂಕರಭರಣಂ ಸಿನಿಮಾ ವಿಶ್ವನಾಥ್ ಅವರಿಗೆ ಅಪಾರ ಕೀರ್ತಿ ತಂದು ಕೊಟ್ಟಿತು. ಈ ಚಿತ್ರದಿಂದ ಜನ ಅವರನ್ನು ಶಂಕರಭರಣಂ ವಿಶ್ವನಾಥ್ ಎಂತಲೇ ಈಗಲೂ ಗುರುತಿಸುತ್ತಿದ್ದಾರೆ.

**<u>ಪ್ರಫುಲ್ಲಾ ಸಮಂತ್ರಾಗೆ ಗೋಲ್ಡ್ ಮನ್ ಎನ್ವಿರಾನ್ಮೆಂಟಲ್ ಪ್ರಶಸ್ತಿ</u>**



ಸಾಮಾಜಿಕ ಕಾರ್ಯಕರ್ತ ಪ್ರಫುಲ್ಲಾ ಸಮಂತ್ರಾ ಅವರನ್ನು ಪ್ರತಿಷ್ಠಿತ ಗೋಲ್ಡ್ ಮನ್ ಎನ್ವಿರಾನ್ಮೆಂಟಲ್ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರತಿಷ್ಠಿತ ಪ್ರಶಸ್ತಿಗೆ ಒಟ್ಟು ಆರು ಜನರನ್ನು ಆಯ್ಕೆಮಾಡಲಾಗಿದ್ದು, ಅದರಲ್ಲಿ ಪ್ರಫುಲ್ಲಾ ಅವರು ಸಹ ಒಬ್ಬರಾಗಿದ್ದಾರೆ. ಸತತವಾಗಿ 12 ವರ್ಷಗಳ ಕಾಲ ನ್ಯಾಯಾಂಗ ಹೋರಾಟ ನಡೆಸಿ ದೊಂಗ್ರಿ ಕಾಂಡ್ನ ಭೂಮಿ ಹಕ್ಕನ್ನು ಎತ್ತಿಹಿಡಿದಕ್ಕಾಗಿ ಹಾಗೂ ಅಲ್ಯೂಮಿನಿಯಂ ಗಣಿಗಾರಿಕೆಯಿಂದ ನಿಯಾಮಗಿರಿ ಬೆಟ್ಟ ಪ್ರದೇಶವನ್ನು ಸಂರಕ್ಷಿಸಲು ಶ್ರಮಿಸಿದಕ್ಕಾಗಿ ಈ ಪ್ರಶಸ್ತಿಯನ್ನು ಸಮಂತ್ರಾ ಅವರಿಗೆ ನೀಡಲಾಗಿದೆ.

www.karunaduexams.com

**ಪ್ರಶಸ್ತಿ ಗೆದ್ದ ಇತರ ಐದು ಮಂದಿ:**

ಮಾರ್ಕ್ ಲೊಪೆಝ್ (ಅಮೆರಿಕ), ಉರೋಸ್ ಮಸೆರ್ಲ್ (ಸ್ಲೋವೋನಿಯಾ), ರೊಡ್ರಿಗೊ ಟೋಟ್ (ಗ್ವಾಟೆಮಾಲ), ರೊಡ್ರಿಗೊ ಕಟೆಮ್ಬೊ (ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ) ಮತ್ತು ವೆಂಡಿ ಬೌಮನ್ (ಆಸ್ಟ್ರೇಲಿಯಾ).

**ಪ್ರಫುಲ್ಲಾ ಸಮಂತ್ರಾ:**

ಕಾನೂನು ಪದವಿಯನ್ನು ಪಡೆದಿರುವ ಪ್ರಫುಲ್ಲಾ ಸಮಂತ್ರಾ ಅವರು ಜಯಪ್ರಕಾಶ್ ನಾರಾಯಣ್ ಚಳುವಳಿ ಅವಧಿಯಿಂದಲೂ ಅವರು ಸಕ್ರಿಯವಾಗಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರೆ. ನಿಯಾಮಗಿರಿ ಪ್ರದೇಶದಲ್ಲಿ ವೇದಾಂತ ಕಂಪನಿ ಅಲ್ಯೂಮಿನಿಯಂ ಅದಿರು ಗಣಿಗಾರಿಕೆಯನ್ನು ನಡೆಸುವುದರ ವಿರುದ್ದ ಬುಡಕಟ್ಟು ಜನಾಂಗದವರು ನಡೆಸಿದ ಹೋರಾಟದ ನಾಯಕತ್ವವನ್ನು ಪ್ರಫುಲ್ಲಾ ಅವರು ವಹಿಸಿಕೊಂಡಿದ್ದರು. ಸಮಂತ್ರಾ ಅವರ ಹೋರಾಟದಿಂದಾಗಿ ನಿಯಾಮಗಿರಿ ಪ್ರದೇಶದಲ್ಲಿ ವೇದಾಂತ ಸಂಸ್ಥೆ ಅಲ್ಯೂಮಿನಿಯಂ ಅದಿರು ಗಣಿಗಾರಿಕೆಯನ್ನು ಸ್ಥಗಿತಗೊಳಿಸಿತು. ಏಪ್ರಿಲ್ 18, 2013 ರಲ್ಲಿ ಅಲ್ಯೂಮಿನಿಯಂ ಗಣಿಗಾರಿಕೆ ನಡೆಸಬೇಕೆ ಅಥವಾ ಬೇಡವೆ ಎನ್ನುವ ನಿರ್ಧಾರವನ್ನು ಗ್ರಾಮಸಭೆಯಲ್ಲಿ ನಿರ್ಧರಿಸತಕ್ಕದ್ದು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು. ಅದರಂತೆ ನಿಯಾಮಗಿರಿಯಲ್ಲಿ ಗಣಿಗಾರಿಕೆ ನಡೆಸುವುದರ ವಿರುದ್ದ ಅಲ್ಲಿನ ಗ್ರಾಮ ಸಭೆ ಠರಾವು ಹೊರಡಿಸಿತು. ಇದರಿಂದಾಗಿ 2015 ಆಗಸ್ಟ ರಲ್ಲಿ ವೇದಾಂತ ಕಂಪನಿ ಗಣಿಗಾರಿಕೆಯನ್ನು ನಿಲ್ಲಿಸುವುದಾಗಿ ತನ್ನ ತೀರ್ಮಾನವನ್ನು ಪ್ರಕಟಿಸಿತು.

- ಸಮಂತ್ರಾ ಅವರು ಈ ಪ್ರಶಸ್ತಿಯನ್ನು ಪಡೆದ ಆರನೇ ಭಾರತೀಯ. ಈ ಹಿಂದೆ ಮೇಧಾ ಪಾಟ್ಕರ್, ಎಂ ಸಿ ಮೆಹ್ತಾ, ರಶೀದ ಬಿ, ಚಂಪಾರಣ್ ಶುಕ್ಲಾ ಮತ್ತು ರಮೇಶ್ ಅಗರವಾಲ್ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

**ಗೋಲ್ಡ್ ಮನ್ ಎನ್ವಿರಾನ್ಮೆಂಟಲ್ ಪ್ರಶಸ್ತಿ:**

- ಪ್ರಶಸ್ತಿಯನ್ನು 1990 ರಲ್ಲಿ ಸ್ಥಾಪಿಸಲಾಗಿದ್ದು, ಪ್ರಾಣವನ್ನು ಒತ್ತೆ ಇಟ್ಟು ತಳಮಟ್ಟದಲ್ಲಿ ಪರಿಸರ ಸಂರಕ್ಷಣೆಗೆ ತಮ್ಮನೇ ತಾವೆ ತೊಡಗಿಸಿಕೊಳ್ಳುವ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಸ್ಯಾನ್ ಫ್ರಾನ್ಸಿಸ್ಕೊದಲ್ಲಿರುವ ಗೋಲ್ಡ್ ಮನ್ ಎನ್ವಿರಾನ್ಮೆಂಟಲ್ ಫೌಂಡೇಶನ್ ಈ ಪ್ರಶಸ್ತಿಯನ್ನು ನೀಡುತ್ತಿದೆ. ಪ್ರಶಸ್ತಿಯನ್ನು ಗ್ರೀನ್ ನೊಬೆಲ್ ಎಂತಲೂ ಕರೆಯಲಾಗುತ್ತದೆ. ಪ್ರತಿ ವರ್ಷ ಆರು ಜನರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

www.karunaduexams.com

**<u>ಹಾಂಗ್ ಕಾಂಗ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ "ನ್ಯೂಟನ್" ಚಿತ್ರಕ್ಕೆ ಪ್ರಶಸ್ತಿ</u>**



ಹಿಂದಿ ಸಿನಿಮಾ "ನ್ಯೂಟನ್"ಗೆ ಹಾಂಗ್ ಕಾಂಗ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ತೀರ್ಪುಗಾರರ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಲಭಿಸಿದೆ. ಈ ಮುಂಚೆ ಬರ್ಲಿನಾಲ್ನಲ್ಲಿ ಈ ಚಿತ್ರ ಮೊದಲ ಪ್ರದರ್ಶನ ಕಂಡಿತ್ತು. ಅಲ್ಲದೇ ಬರ್ಲಿನಾಲ್ನ ಫೋರಂ ವಿಭಾಗದಲ್ಲಿ ಅತ್ಯುತ್ತಮ ಕಲಾ ಸಿನಿಮಾ ಪ್ರಶಸ್ತಿಯನ್ನು ಪಡೆದುಕೊಂಡಿತ್ತು. 16ನೇ ವಾರ್ಷಿಕ ಟ್ರಿಬೆಕಾ ಚಲನಚಿತ್ರೋತ್ಸವಕ್ಕೆ ಸಹ ಆಯ್ಕೆಯಾಗಿತ್ತು.

- ನ್ಯೂಟನ್ ಸಿನಿಮಾ ರಾಜಕೀಯ ಹಾಸ್ಯ ಭರಿತ ಚಿತ್ರವಾಗಿದ್ದು, ಅಮಿತ್ ಮಸುರ್ಕರ್ ಅವರು ನಿರ್ದೇಶಿಸಿದ್ದಾರೆ. ಚತ್ತಿಸ್ ಘರ್ ನ ಸಂಘರ್ಷಿತ ಸ್ಥಳದಲ್ಲಿ ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಂಡ ಗುಮಾಸ್ತನೊಬ್ಬನ ಸುತ್ತಾ ಕತೆಯನ್ನು ಎಣೆಯಲಾಗಿದೆ. ಈ ಚಿತ್ರವನ್ನು ಚತ್ತಿಸ್ ಘರ್ ನ ಕಾಡಿನಲ್ಲಿ ಚಿತ್ರೀಕರಿಸಲಾಗಿದೆ.

**ಹಾಂಗ್ ಕಾಂಗ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ:**

ಹಾಂಗ್ ಕಾಂಗ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವನ್ನು 1976 ರಿಂದ ಆಯೋಜಿಸಲಾಗುತ್ತಿದೆ. ಇದು ಏಷ್ಯಾದ ಅತ್ಯಂತ ಹಳೆಯ ಚಲನಚಿತ್ರೋತ್ಸವ. ಪ್ರತಿ ವರ್ಷ ಸುಮಾರು 55 ದೇಶಗಳ 250 ಸಿನಿಮಾಗಳನ್ನು ಚಲನಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗುತ್ತದೆ.

**<u>ಭಾರತದ ಸೃಷ್ಟಿ ಕೌರ್ ಅವರಿಗೆ 2017ನೇ ಸಾಲಿನ ಮಿಸ್ ಟೀನ್ ಯೂನಿವರ್ಸ್ ಕಿರೀಟ</u>**



ನೋಯ್ಡಾದ ನಿವಾಸಿ ಸೃಷ್ಟಿ ಕೌರ್ 2017ನೇ ಸಾಲಿನ ಮಿಸ್ ಟೀನ್ ಯೂನಿವರ್ಸ್ ಪಟ್ಟವನ್ನು ಮುಡಿಗೇರಿಸಿಕೊಂಡಿದ್ದಾರೆ. ನಿಕಾರುಗ್ವ ರಾಷ್ಟ್ರದ ರಾಜಧಾನಿ ಮನಗುವಾದಲ್ಲಿ ನಡೆದ ಸ್ಪರ್ಧೆಯಲ್ಲಿ ಕೌರ ಕಿರೀಟವನ್ನು ತನ್ನದಾಗಿಸಿಕೊಂಡರು. ರಾಷ್ಟ್ರೀಯ ಉಡುಗೆ ವಿಭಾಗದಲ್ಲೂ ಸೃಷ್ಟಿ ಅವರು ಪ್ರಶಸ್ತಿಯನ್ನು ಗೆದ್ದುಕೊಂಡರು. ಭಾರತದ ರಾಷ್ಟ್ರಪಕ್ಷಿ ನವಿಲು ಚಿತ್ರವಿರುವ ಉಡುಗೆಗೆ ಪ್ರಶಸ್ತಿ ದೊರೆತಿದೆ. ಇದೇ ವರ್ಷದ ಆರಂಭದಲ್ಲಿ ಸೃಷ್ಟಿ 29 ಸ್ಪರ್ಧಿಗಳನ್ನ ಹಿಂದಿಕ್ಕಿ ಮಿಸ್ ಟೀನ್ ಟಿಯಾರಾ ಇಂಟರ್‌ನ್ಯಾಷನಲ್ ಪಟ್ಟವನ್ನ ತನ್ನದಾಗಿಸಿಕೊಂಡಿದ್ದರು.

**ಮಿಸ್ ಟೀನ್ ಯೂನಿರ್ವಸ್:**

ಈ ಸೌಂದರ್ಯ ಸ್ಪರ್ಧೆಯನ್ನ 6 ವರ್ಷಗಳ ಹಿಂದೆ ಪ್ರಾರಂಭಿಸಲಾಗಿದ್ದು 15 ರಿಂದ 19 ವರ್ಷ ವಯಸ್ಸಿನವರಿಗಾಗಿ ಮಿಸ್ ಯೂನಿವರ್ಸ್ ಸಂಸ್ಥೆ ಈ ಸ್ಪರ್ಧೆಯನ್ನ ಆಯೋಜಿಸುತ್ತದೆ.

www.karunaduexams.com

# ಪರಿಸರ

## ಕಾಡ್ಗಿಚ್ಚು ನಿರ್ವಹಣೆಗೆ ಡ್ರೋನ್ ಬಳಕೆ ಮಾಡಲಿರುವ ಉತ್ತರಖಂಡ ಸರ್ಕಾರ



ಉತ್ತರಖಂಡ ರಾಜ್ಯ ಅರಣ್ಯ ಇಲಾಖೆ ಕಾಡ್ಗಿಚ್ಚು ನೈಜ ಸಮಯದ ನಿರ್ವಹಣೆಗಾಗಿ ಮೂರು ಡ್ರೋನ್ ಗಳನ್ನು ನಿಯೋಜಿಸಿದೆ. ಕಾಡ್ಗಿಚ್ಚು ನಿರ್ವಹಣೆಗೆ ಡ್ರೋನ್ ಗಳನ್ನು ಬಳಸಿಕೊಳ್ಳುತ್ತಿರುವುದು ದೇಶದಲ್ಲೆ ಮೊದಲೆನಿಸಿದೆ. ಕೇವಲ ಕಾಡ್ಗಿಚ್ಚು ನಿರ್ವಹಣೆ ಅಲ್ಲದೆ ಹಕ್ಕಿಗಳ ಗೂಡಿನ ಸ್ಥಿತಿ, ಮೊಸಳೆ, ನೀರಕ್ಕಿಗಳು ಹಾಗೂ ವನ್ಯಜೀವಿಗಳ ಸಂರಕ್ಷಣೆಗೂ ಡ್ರೋನ್ ಗಳನ್ನು ಬಳಸಲಾಗುತ್ತಿದೆ.

**ಹಿನ್ನಲೆ**:

ಉತ್ತರಖಂಡದಲ್ಲಿ ಭಾರತದಲ್ಲೆ ಅತಿ ಹೆಚ್ಚು ಕಾಡ್ಗಿಚ್ಚು ಪ್ರಕರಣಗಳು ಕಂಡುಬರುತ್ತಿವೆ. 2016 ರಲ್ಲಿ ಸರಿಸುಮಾರು 2000ಕ್ಕೂ ಹೆಚ್ಚು ಕಾಡ್ಗಿಚ್ಚು ಪ್ರಕರಣಗಳಿಂದಾಗಿ 4500 ಹೆಕ್ಟೇರ್ ಅರಣ್ಯ ಪ್ರದೇಶ ನಾಶ ಹೊಂದಿತ್ತು. ಉತ್ತರ ಪ್ರದೇಶದ ಶೇ 71% ರಷ್ಟು ಭೌಗೋಳಿಕ ಪ್ರದೇಶ ಅರಣ್ಯದಿಂದ ಕೂಡಿದೆ. ಆಗಾಗಿ ನೈಜ ಸಮಯದಲ್ಲಿ ಕಾಡ್ಗಿಚ್ಚು ಮೇಲೆ ನಿಗಾವಹಿಸುವುದರಿಂದ ಭಾರಿ ಅನಾಹುತವನ್ನು ತಪ್ಪಿಸಬಹುದಾಗಿದೆ.

- ಉತ್ತರಖಂಡದಲ್ಲಿ ಕಂಡು ಬರುವ ಕಾಡ್ಗಿಚ್ಚು ಪ್ರಕರಣಗಳು ಮಾನವ ಪ್ರೇರಿತವಾಗಿದೆ.
- 2016 ರಲ್ಲಿ ಉತ್ತರಖಂಡ ಹಾಗೂ ಹಿಮಾಚಲ ಪ್ರದೇಶದ ಪೈನ್ (Pine) ಅರಣ್ಯದಲ್ಲಿ ಬೆಂಕಿ ಹೊತ್ತಿಕೊಂಡು ಭಾರಿ ಅರಣ್ಯ ಸಂಪತ್ತು ನಾಶವಾಗಿತ್ತು.
- ಉತ್ತರಖಂಡದ ಹೆಚ್ಚಿನ ಕಾಡ್ಗಿಚ್ಚು ಪ್ರಕರಣಗಳು ಚಿರ್ ಪೈನ್ (ಪೈನಸ್ ರೊಕ್ಸ್ಬರ್ಘಿ) ಕಾಡಿನಲ್ಲಿ ಸಂಭವಿಸುತ್ತವೆ, ಏಕೆಂದರೆ ಈ ಕೋನಿಫರ್ ಮರದ ಎಲೆಗಳಿಗೆ ಸುಲಭವಾಗಿ ಬೆಂಕಿ ಹೊತ್ತಿಕೊಳ್ಳುತ್ತದೆ.

## ಪ್ಲಾಸ್ಟಿಕ್ ತಿನ್ನುವ "ವ್ಯಾಕ್ಸ್ ವರ್ಮ್ (Wax Worm)" ಕೀಟಾಣು



ಪ್ಲಾಸ್ಟಿಕ್ ತಿಂದು ಅರಗಿಸಿಕೊಳ್ಳುವ ಕೀಟವನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಗಲ್ಲಾರೆಯಾ ಮೆಲ್ಲೊನೆಲ್ಲಾ (Galleria Mellonella) ಕೀಟದ ಲಾರ್ವೆ "ವ್ಯಾಕ್ಸ್ ವರ್ಮ್" ಪ್ಲಾಸ್ಟಿಕ್ ತಿನ್ನುವ ಕೀಟವಾಗಿದೆ. ಅತಿ ಹೆಚ್ಚಾಗಿ ಬಳಕೆಯಲ್ಲಿರುವ "ಪಾಲಿಎಥಿಲಿನ್" ಪ್ಲಾಸ್ಟಿಕ್ ಅನ್ನು ಈ ಕೀಟ ಸುಲಭವಾಗಿ ತಿಂದು ಅರಗಿಸಿಕೊಳ್ಳುತ್ತಿರುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ. ವ್ಯಾಕ್ಸ್ ವರ್ಮ್ ನ ಜೀರ್ಣಶಕ್ತಿ ಇತ್ತೀಚೆಗೆ ಸಂಶೋಧಿಸಲಾದ ಇತರೆ ಸೂಕ್ಷ್ಮಾಣುಗಳುಗಿಂತ ತುಂಬಾ ವೇಗವಾಗಿದೆ ಎನ್ನಲಾಗಿದೆ. ಕಳೆದ ವರ್ಷ ಪ್ಲಾಸ್ಟಿಕ್ ತಿನ್ನುವ ಬ್ಯಾಕ್ಟೀರಿಯಾವನ್ನು ಸಂಶೋಧಿಸಲಾಗಿತ್ತು. ಈ ಬ್ಯಾಕ್ಟೀರಿಯಾ ದಿನವೊಂದಕ್ಕೆ 0.13 ಮಿ.ಗ್ರಾಂ ಪ್ಲಾಸ್ಟಿಕ್ ತಿನ್ನುವ ಸಾಮರ್ಥ್ಯವನ್ನು ಹೊಂದಿತ್ತು.

www.karunaduexams.com

**ಸಂಶೋಧನೆಯ ಮಹತ್ವ:**

ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಅನ್ನು ಮಿತಿಮೀರಿ ಬಳಕೆ ಮಾಡುತ್ತಿರುವುದರಿಂದ ಪರಿಸರ ಮಾಲಿನ್ಯದಲ್ಲಿ ಪ್ಲಾಸ್ಟಿಕ್ ನದೆ ಸಿಂಹ ಪಾಲು ಎನಿಸಿದೆ. ಪ್ಲಾಸ್ಟಿಕ್ ಸುಲಭವಾಗಿ ಕೊಳೆಯದ ವಸ್ತುವಾಗಿರುವುದರಿಂದ ಇದರ ಸೂಕ್ತ ವಿಲೇವಾರಿ ತಲೆನೋವಾಗಿ ಪರಿಣಮಿಸಿದೆ. ವ್ಯಾಕ್ಸ್ ವರ್ಮ್ ಪಾಲಿಎಥಿಲಿನ್ ಅನ್ನು ಎಥಿಲಿನ್ ಗ್ಲೈಕೋಲ್ ಆಗಿ ಪರಿವರ್ತಿಸುತ್ತದೆ. ಆಗಾಗಿ ಇದು ಪ್ಲಾಸ್ಟಿಕ್ ವಿಲೇವಾರಿಗೆ ಒಂದು ಉತ್ತಮ ಪರಿಹಾರವಾಗಿದೆ.

**ವ್ಯಾಕ್ಸ್ ವರ್ಮ್**:

ವ್ಯಾಕ್ಸ್ ವರ್ಮ್ ಗಳು ಜೇನುಗೂಡಿನಲ್ಲಿ ಜೇನುನೊಣಗಳ ಮಧ್ಯೆ ಪರಾವಲಂಭಿಗಳಾಗಿ ವಾಸಿಸುತ್ತವೆ. ಮೀನುಗಾರಿಕೆಯಲ್ಲಿ ಮೀನುಗಳ ಆಹಾರವಾಗಿ ಇವುಗಳನ್ನು ಬಳಸಲಾಗುತ್ತದೆ. ಇವುಗಳು ಮೇಣದ ಪತಂಗ (Wax moths)ಗಳ ಲಾರ್ವೆಗಳಾಗಿವೆ. ಜೇನುಗೂಡಿನಲ್ಲಿ ಈ ಮೇಣದ ಪತಂಗಗಳು ಮೊಟ್ಟೆಯನ್ನು ಇಡುತ್ತವೆ. ಬಳಿಕ ಮೊಟ್ಟೆ ಒಡೆದು ಜೇನಿನ ಮೇಣದ ಮೇಲೆಯೆ ಬೆಳೆಯುತ್ತವೆ. ವ್ಯಾಕ್ಸ್ ವರ್ಮ್ ಗಳು ಜೇನುಹುಳಗಳ ಚರ್ಮ, ಮೊಟ್ಟೆ ಹಾಗೂ ಪರಾಗಗಳನ್ನು ತಿಂದು ಬೆಳೆಯುತ್ತವೆ.

**<u>ಮುಂಬೈ ಮತ್ತು ಎಲಿಫಾಂಟ ದ್ವೀಪ ಪ್ರದೇಶ ನಡುವೆ ದೇಶದ ಮೊದಲ ರೋಪ್ ವೇ</u>**



ದೇಶದ ಮೊದಲ ಹಾಗೂ ಅತಿ ಉದ್ದನೆಯ ರೋಪ್ ವೇ ಮುಂಬೈ ಹಾಗೂ ಎಲಿಫೆಂಟ ದ್ವೀಪ ಪ್ರದೇಶದ ನಡುವೆ ಸಂಪರ್ಕ ಕಲ್ಪಿಸಲಿದೆ. ಈ ಉದ್ದೇಶಿತ ರೋಪ್ ವೇ ಯನ್ನು ಮುಂಬೈ ಪೋರ್ಟ್ ಟ್ರಸ್ಟ ನಿರ್ಮಿಸಲಿದ್ದು, ಅರಬ್ಬಿ ಸಮುದ್ರದ ಮೇಲೆ ನಿರ್ಮಾಣಗೊಳ್ಳಲಿದೆ. ಎಲಿಫಾಂಟ ದ್ವೀಪ ಪ್ರದೇಶ ಎಲಿಫೆಂಟ ಗುಹೆಗಳಿಂದ ವಿಶ್ವ ಪ್ರಸಿದ್ದಿಯಾಗಿದೆ. ಅಲ್ಲದೇ ಇದು ಯುನೆಸ್ಕೊ ವಿಶ್ವ ಪಾರಂಪರಿಕ ತಾಣ ಸಹ ಆಗಿದೆ. 8 ಕಿಮೀ ಉದ್ದದ ರೋಪ್ ವೇ ಮುಂಬೈಯ ಪೂರ್ವ ಕರಾವಳಿಯಲ್ಲಿರುವ ಸೆವರಿಯಿಂದ ಪ್ರಾರಂಭವಾಗಲಿದೆ ಮತ್ತು ರಾಯ್ಗಡ್ ಜಿಲ್ಲೆಯ ಎಲಿಫೆಂಟ ದ್ವೀಪದಲ್ಲಿ ಕೊನೆಗೊಳ್ಳುತ್ತದೆ.

- 20 ಆಸನಗಳ ಸಾಮರ್ಥ್ಯ ಕೇಬಲ್ ಕಾರು ಮೂಲಕ 40 ನಿಮಿಷದಲ್ಲಿ ತಲುಪುಬಹುದಾಗಿದ್ದು, ಪ್ರವಾಸೋಧ್ಯಮಕ್ಕೆ ವರದಾನವಾಗಲಿದೆ.
- ಸದ್ಯ ಈ ಪ್ರದೇಶಕ್ಕೆ ಹಡುಗಗಳ ಮೂಲಕ ಮಾತ್ರ ತಲುಪಬಹುದಾಗಿದ್ದು, ಸುಮಾರು 1 ಗಂಟೆಗೂ ಹೆಚ್ಚು ಸಮಯ ಹಿಡಿಯಲಿದೆ.

**ಎಲಿಫೆಂಟ ಗುಹೆಗಳು:**

ಎಲಿಫೆಂಟಾ ಗುಹೆಗಳು ಮುಂಬಯಿ ನಗರದ ಸಮೀಪ ಸಾಗರದಲ್ಲಿರುವ ಎಲಿಫೆಂಟಾ ದ್ವೀಪದಲ್ಲಿವೆ. ಎಲಿಫೆಂಟಾ ದ್ವೀಪದ ಮೂಲ ಮರಾಠಿ ಹೆಸರು ಘಾರಾಪುರಿ. ಪೋರ್ಚುಗೀಸರು ಈ ಹೆಸರನ್ನು ಎಲಿಫೆಂಟಾಎಂದು ಬದಲಾಯಿಸಿದರು. 1987ರಲ್ಲಿ ಎಲಿಫೆಂಟಾ ಗುಹೆಗಳನ್ನು ಯುನೆಸ್ಕೋ ವಿಶ್ವ ಪರಂಪರೆಯ ತಾಣವೆಂದು ಘೋಷಿಸಿತು. ಎಲಿಫೆಂಟಾ ಗುಹೆಗಳ ಇತಿಹಾಸವು 9 ರಿಂದ 13ನೆಯ ಶತಮಾನದಲ್ಲಿದ್ದ ಸಿಲ್ಹರ ಅರಸರ ಕಾಲದ್ದೆಂದು ನಂಬಲಾಗಿದೆ. ಆದರೆ ಇಲ್ಲಿನ ಕೆಲ ಶಿಲಾಮೂರ್ತಿಗಳು

ಮಾನ್ಯಖೇಟದ ರಾಷ್ಟ್ರಕೂಟರ ಕಾಲದವೆಂದು ಸಹ ಕೆಲ ಅಭಿಪ್ರಾಯಗಳಿವೆ. ಇಲ್ಲಿ ಶಿವನ ಮೂರು ಮುಖಗಳನ್ನು ಹೊಂದಿರುವ ತ್ರಿಮೂರ್ತಿ ಸದಾಶಿವ ವಿಗ್ರಹವು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರನ್ನು ಬಲು ಮಟ್ಟಿಗೆ ಹೋಲುತ್ತದೆ. ಈ ಸದಾಶಿವ ತ್ರಿಮೂರ್ತಿಯು ರಾಷ್ಟ್ರಕೂಟರ ರಾಜಲಾಂಛನವು ಸಹ ಆಗಿತ್ತು. ನಟರಾಜ ಮತ್ತು ಅತ್ಯಾಕರ್ಷಕವಾಗಿರುವ ಅರ್ಧನಾರೀಶ್ವರ ಮೂರ್ತಿಗಳು ಸಹ ರಾಷ್ಟ್ರಕೂಟ ಶೈಲಿಯವು. ಶಿಲೆಯಲ್ಲಿ ಕೊರೆದು ರೂಪಿಸಲಾಗಿರುವ ಎಲಿಫೆಂಟಾ ಗುಹೆಗಳು ಸುಮಾರು ೬೦೦೦೦ ಚದರ ಅಡಿಗಳಷ್ಟು ವಿಸ್ತಾರವಾಗಿವೆ. ಇಲ್ಲಿ ಅನೇಕ ಮೊಗಸಾಲೆಗಳು, ಹಜಾರಗಳಿದ್ದು ಹಲವು ಗುಡಿಗಳನ್ನು ಕಾಣಬಹುದು. ಈ ಗುಡಿಗಳಲ್ಲಿ ನಾನಾ ಶಿಲಾಮೂರ್ತಿಗಳಿವೆ. ಜೊತೆಗೆ ಒಂದು ಶಿವಾಲಯವು ಸಹ ಪ್ರಧಾನವಾಗಿದೆ. ಈ ದೇವಾಲಯ ಸಂಕೀರ್ಣವು ಶಿವನ ಆವಾಸತಾಣವೆಂದು ಸ್ಥಳೀಯರ ನಂಬಿಕೆ.

www.karunaduexams.com

# ವ್ಯವಹಾರ

## <u>ಗಣಿಗಾರಿಕೆ ಮೇಲೆ ನಿಷೇಧ ಹೇರಿದ ವಿಶ್ವದ ಮೊದಲ ರಾಷ್ಟ್ರ "ಎಲ್ ಸಲ್ವಡಾರ್"</u>



ಸೆಂಟ್ರಲ್ ಅಮೆರಿಕದ ಸಣ್ಣ ರಾಷ್ಟ್ರ "ಎಲ್ ಸಲ್ವಡಾರ್" ಗಣಿಗಾರಿಕೆ ಮೇಲೆ ನಿಷೇಧ ಹೇರಿದ ವಿಶ್ವದ ಮೊದಲ ರಾಷ್ಟ್ರವೆಂಬ ಗೌರವಕ್ಕೆ ಪಾತ್ರವಾಗಿದೆ. ಚಿನ್ನ ಸೇರಿದಂತೆ ಇತರೆ ಲೋಹಗಳ ಗಣಿಗಾರಿಕೆ ಮೇಲೆ ನಿಷೇಧ ಹೇರುವ ಕಾನೂನನ್ನು ಸಲ್ವಡಾರ್ ಜಾರಿಗೆ ತಂದಿದೆ. ಸಾಮಾಜಿಕ ಬಿಕ್ಕಟ್ಟು ನಿವಾರಣೆ, ಪರಿಸರ ಸಂರಕ್ಷಣೆ ಹಾಗೂ ನೀರಿನ ಜಲಾಶಯಗಳನ್ನು ರಕ್ಷಿಸುವ ಸಲುವಾಗಿ ಹೊಸ ಕಾನೂನನ್ನು ಜಾರಿಗೆ ತರಲಾಗಿದೆ.

**ಪ್ರಮುಖಾಂಶಗಳು**:

- ತೆರೆದ ಗುಂಡಿ ಸೇರಿದಂತೆ ಎಲ್ಲಾ ರೀತಿಯ ಗಣಿಗಾರಿಕೆಯ ಮೇಲೆ ಸಂಪೂರ್ಣವಾಗಿ ನಿಷೇಧಿಸುವ ಅವಕಾಶವನ್ನು ಮಸೂದೆಯಡಿ ಕಲ್ಪಿಸಲಾಗಿದೆ.
- ಗಣಿಗಾರಿಕೆಯಲ್ಲಿ ಸೈನೆಡ್ ಹಾಗೂ ಮರ್ಕ್ಯೂರಿ ಬಳಸುವಂತಿಲ್ಲ.
- ಕಲ್ಲು ಗಣಿಗಾರಿಕೆ, ಕಲ್ಲಿದ್ದಲು ಮತ್ತು ಅಲೋಹ ಸಂಪನ್ಮೂಲಗಳಿಗೆ ಹೊಸ ಕಾಯಿದೆ ಅನ್ವಯಿಸುವುದಿಲ್ಲ.

**ಹಿನ್ನಲೆ**:

ವಿಶ್ವಸಂಸ್ಥೆಯ ಪ್ರಕಾರ ಎಲ್ ಸಲ್ವಡಾರ್ ವಿಶ್ವದ ಅತ್ಯಂತ ಹೆಚ್ಚು ಜನಸಂದಣಿ ಇರುವ ರಾಷ್ಟ್ರ. ಅಮೆರಿಕಾ ಖಂಡದಲ್ಲಿ ಹೈಟಿ ನಂತರ ದುರ್ಬಲ ಪರಿಸರ ವ್ಯವಸ್ಥೆ ಹೊಂದಿರುವ ರಾಷ್ಟ್ರ ಎನಿಸಿದೆ. ಗಣಿಗಾರಿಕೆ ಇಲ್ಲಿನ ದುರ್ಬಲ ಪರಿಸರ ವ್ಯವಸ್ಥೆಗೆ ಪ್ರಮುಖ ಕಾರಣವೆನಿಸಿದೆ.

## <u>ಭಾರತ ಮತ್ತು NDB ನಡುವೆ $350 ಮಿಲಿಯನ್ ಸಾಲ ಒಪ್ಪಂದಕ್ಕೆ ಸಹಿ</u>

New Development Bank

ಮಧ್ಯ ಪ್ರದೇಶದ ಜಿಲ್ಲಾ ರಸ್ತೆಗಳ ಅಭಿವೃದ್ಧಿ ಹಾಗೂ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ನ್ಯೂ ಡೆವಲಪ್ಮೆಂಟ್ ಬ್ಯಾಂಕ್ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಇದು ನ್ಯೂ ಡೆವೆಲ್ಪಮೆಂಟ್ ಬ್ಯಾಂಕ್ ನೊಂದಿಗೆ ಭಾರತ ಸರ್ಕಾರ ಸಹಿ ಹಾಕುತ್ತಿರುವ ಮೊದಲ ಒಪ್ಪಂದವಾಗಿದೆ. ಮಧ್ಯ ಪ್ರದೇಶ ರಾಜ್ಯದ ಪ್ರಮುಖ ಜಿಲ್ಲಾ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ರಾಜ್ಯದ ಅಂತರ ರಸ್ತೆಗಳನ್ನು ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳೊಂದಿಗೆ ಸಂಪರ್ಕ ಕಲ್ಪಿಸುವುದು ಯೋಜನೆಯ ಪ್ರಮುಖ ಉದ್ದೇಶ.

www.karunaduexams.com

- ಮಧ್ಯ ಪ್ರದೇಶದ ಸುಮಾರು 1500 ಕಿ.ಮೀ ಉದ್ದದ ರಸ್ತೆಯನ್ನು ಉನ್ನತೀಕರಿಸುವುದು ಹಾಗೂ ಅಭಿವೃದ್ಧಿಪಡಿಸುವುದು ಮತ್ತು ಸರ್ವ ಋತು ಗುಣಮಟ್ಟದ ರಸ್ತೆಗಳನ್ನಾಗಿ ಮಾರ್ಪಡಿಸುವುದು ಒಪ್ಪಂದದಡಿ ಒಳಗೊಂಡಿದೆ.

**ನ್ಯೂ ಡೆವಲಪ್ಮೆಂಟ್ ಬ್ಯಾಂಕ್:**

- ಬ್ರಿಕ್ಸ್ ರಾಷ್ಟ್ರಗಳಾದ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ರಾಷ್ಟ್ರಗಳು ಸೇರಿ ನ್ಯೂ ಡೆವೆಲ್ಪಮೆಂಟ್ ಬ್ಯಾಂಕ್ ಅನ್ನು ಸ್ಥಾಪಿಸಿವೆ.
- ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಸುಸ್ಥಿರ ಅಭಿವೃದ್ಧಿ ಕಾಯ್ದುಕೊಳ್ಳಲು ಸಾಲ ಸೌಕರ್ಯ ಕಲ್ಪಿಸುವುದು ಈ ಬ್ಯಾಂಕಿನ ಕರ್ತವ್ಯ.
- 2015ರಲ್ಲಿ ಬ್ಯಾಂಕ್ ಅನ್ನು ಸ್ಥಾಪಿಸಲಾಗಿದ್ದು, ಇದರ ಕೇಂದ್ರ ಕಚೇರಿ ಚೀನಾದ ಶಾಂಘೈನಲ್ಲಿದೆ.
- ಭಾರತದ ಖ್ಯಾತ ಬ್ಯಾಂಕಿಗ ಕೆ.ವಿ,ಕಾಮತ್ ಅವರು ಈ ಬ್ಯಾಂಕಿನ ಮೊದಲ ಅಧ್ಯಕ್ಷರು.

**<u>ದ್ವೈಮಾಸಿಕ ಹಣಕಾಸು ಪರಾಮರ್ಶೆ ವರದಿ: ರೆಪೊ ದರ ಯಥಾಸ್ಥಿತಿ</u>**




ಭಾರತೀಯ ರಿಸರ್ವ್ ಬ್ಯಾಂಕ್, 2017–18ನೆ ಹಣಕಾಸು ವರ್ಷದ ಮೊದಲ ದ್ವೈಮಾಸಿಕ ಹಣಕಾಸು ಪರಾಮರ್ಶೆ ವರದಿಯನ್ನು ಪ್ರಕಟಿಸಿದೆ. ರೆಪೊ ದರಗಳಲ್ಲಿ ಯಾವುದೇ ಬದಲಾವಣೆ ಮಾಡಿದೆ ಯಥಾಸ್ಥಿತಿಯನ್ನು ಕಾಪಾಡಲಾಗಿದೆ.

**ಪ್ರಮುಖಾಂಶಗಳು**:

- ರಿವರ್ಸ್ ರಿಪೊ ದರವನ್ನು ಶೇ.5.75 ರಿಂದ ಶೇ.6ಕ್ಕೆ ಏರಿಕೆ ಮಾಡಲಾಗಿದೆ. ಸಾಲ ನೀಡಲು ಅವಕಾಶವಿಲ್ಲದೇ ಇರುವ ಬ್ಯಾಂಕುಗಳಲ್ಲಿ ಹಣದ ಸಂಗ್ರಹ ಜಾಸ್ತಿಯಾದರೆ ಆರ್‌ಬಿಐ ಅದನ್ನು ಠೇವಣಿಯಾಗಿ ಸ್ವೀಕರಿಸುತ್ತದೆ ಇದಕ್ಕಾಗಿ ಆರ್‌ಬಿಐ ಬ್ಯಾಂಕುಗಳಿಗೆ ಬಡ್ಡಿಯನ್ನು ನೀಡುತ್ತದೆ ಈ ದರವನ್ನು ರಿವರ್ಸ್ ರಿಪೊ ದರ ಎನ್ನಲಾಗುತ್ತದೆ.
- ಗ್ರಾಹಕ ದರ ಸೂಚ್ಯಂಕ(ಸಿಪಿಐ) ಆಧರಿಸಿದ ಹಣದುಬ್ಬರ ದರದಲ್ಲಿ ಸ್ವಲ್ಪ ಏರಿಕೆ ಕಂಡು ಬಂದಿದ್ದರಿಂದ ಶೇ.6.25ರಷ್ಟಿದ್ದ ರಿಪೊ ದರವನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಲು ಆರ್ ಬಿಐ ತೀರ್ಮಾನಿಸಿದೆ.

**ರೆಪೊ ದರ**: ಬ್ಯಾಂಕ್‌ಗಳು ವಹಿವಾಟು ನಡೆಸಲು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಸಾಲ ಪಡೆಯುತ್ತವೆ. ಈ ಸಾಲಕ್ಕೆ ಆರ್‌ಬಿಐ ವಿಧಿಸುವ ಬಡ್ಡಿದರವಾಗಿದೆ.

www.karunaduexams.com

## ನಾಸ್ಕಾಂನ ನೂತನ ಅಧ್ಯಕ್ಷರಾಗಿ ರಮಣ್ ರಾಯ್ ನೇಮಕ



ನ್ಯಾಷನಲ್ ಅಸೋಸಿಯೇಷನ್ ಆಫ್ ಸಾಫ್ಟ್ ವೇರ್ ಅಂಡ್ ಸರ್ವೀಸ್ ಅಸೋಸಿಯೇಷನ್ (ನಾಸ್ಕಾಂ)ನ 2017-18ನೇ ಸಾಲಿನ ನೂತನ ಅಧ್ಯಕ್ಷರಾಗಿ ರಮಣ್ ರಾಯ್ ಅವರು ನೇಮಕಗೊಂಡಿದ್ದಾರೆ.

- ಟೆಕ್ ಮಹೀಂದ್ರಾ ಸಿಇಒ ಮತ್ತು ಎಂಡಿ ಆಗಿರುವ ಸಿಪಿ ಗುರ್ನಾಣಿ ಅವರ ಉತ್ತರಾಧಿಕಾರಿಯಾಗಿ ರಮಣ್ ರಾಯ್ ನೇಮಕಗೊಂಡಿದ್ದಾರೆ.
- ರಾಯ್ ಅವರು ಭಾರತ ಬಿಪಿಒ (ಬ್ಯುಸಿನೆಸ್ ಪ್ರೊಸೆಸ್ ಔಟ್ ಸೋರ್ಸಿಂಗ್) ವ್ಯವಹಾರದ ಅಭಿವೃದ್ಧಿಗೆ ಶ್ರಮಿಸಿದ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ.
- ರಾಯ್ ಅವರು ನಾಸ್ಕಾಂನ ಆಡಳಿತ ಮಂಡಳಿಯ ಸದಸ್ಯರಾಗಿ ಹಾಗೂ 2016-17ನೇ ಸಾಲಿನಲ್ಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

## ಲಕ್ಕಿ ಗ್ರಾಹಕ ಮತ್ತು ಡಿಜಿ ಧನ ವ್ಯಾಪಾರ ಯೋಜನೆಯ ಲಕ್ಕಿ ಗ್ರಾಹಕರ ಆಯ್ಕೆ




ಡಿಜಿಟಲ್ ವ್ಯವಹಾರವನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ “ಲಕ್ಕಿ ಗ್ರಾಹಕ” ಹಾಗೂ “ಡಿಜಿ ಧನ ವ್ಯಾಪಾರ ಯೋಜನೆಯ” ಲಕ್ಕಿ ಗ್ರಾಹಕ'ರನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಲಾಟರಿ ಎತ್ತುವ ಮೂಲಕ ಆಯ್ಕೆ ಮಾಡಿದರು. ಲಕ್ಕಿ ಗ್ರಾಹಕ ಯೋಜನೆ ಮತ್ತು ಡಿಜಿ ಧನ ವ್ಯಾಪಾರ ಯೋಜನೆಯಡಿ ಮೂವರು ಗ್ರಾಹಕರು ಹಾಗೂ ಮೂವರು ವ್ಯಾಪಾರಿಗಳನ್ನು ಆಯ್ಕೆ ಮಾಡಲಾಯಿತು. ಲಕ್ಕಿ ಡ್ರಾನಲ್ಲಿ ಆಯ್ಕೆಯಾಗುವ ಅದೃಷ್ಟಶಾಲಿಗಳನ್ನು ಏಪ್ರಿಲ್ 14 ರಂದು ಅಂಬೇಡ್ಕರ್ ಜಯಂತಿಯಂದು ಅಭಿನಂದಿಸಲಾಗುವುದು.

**ಪ್ರಮುಖಾಂಶಗಳು**:

- ನ್ಯಾಷನಲ್ ಪೇಮೆಂಟ್ ಕಾರ್ಪೋರೇಶನ್ ಆಫ್ ಇಂಡಿಯಾ ಅಭಿವೃದ್ಧಿಪಡಿಸಿರುವ ಸಾಫ್ಟ್ ವೇರ್ ಮೂಲಕ ವಹಿವಾಟು ಐಡಿಗಳನ್ನು ಲಾಟರಿ ಎತ್ತುವ ಮೂಲಕ ವಿಜೇತರನ್ನು ಆಯ್ಕೆಮಾಡಲಾಯಿತು.

**ಗ್ರಾಹಕ ವಿಭಾಗದಲ್ಲಿ**:

- ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಗ್ರಾಹಕ ರು.1 ಕೋಟಿ ಬಹುಮಾನ ಗೆದ್ದಿದ್ದಾರೆ. ಬ್ಯಾಂಕ್ ಆಫ್ ಬರೋಡದ ಗ್ರಾಹಕ ರೂ 50 ಲಕ್ಷ ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕಿನ ಗ್ರಾಹಕನಿಗೆ ರೂ 25 ಲಕ್ಷ ಬಹುಮಾನ ಲಭಿಸಿದೆ.

**ವ್ಯಾಪಾರಸ್ಥರ ವಿಭಾಗ**:

- ಡಿಜಿ–ಧನ ವ್ಯಾಪಾರ ಯೋಜನೆ' ವಿಭಾಗದಲ್ಲಿ ಮೂವರು 50 ಲಕ್ಷ, ರು 25 ಲಕ್ಷ, ರು 12 ಲಕ್ಷ ಬಹುಮಾನ ಗೆದ್ದಿದ್ದಾರೆ.

www.karunaduexams.com

**<u>ಮೋಟಾರು ವಾಹನ (ತಿದ್ದುಪಡಿ) ಮಸೂದೆ 2016: ಪ್ರಮುಖಾಂಶಗಳು</u>**



ರಸ್ತೆ ಸುರಕ್ಷತೆ, ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ಅಪಘಾತ ಪ್ರಕರಣಗಳಿಗೆ ಕಡಿವಾಣ ಹಾಕುವ ಸಲುವಾಗಿ ಜಾರಿಗೆ ಬರಲಿರುವ ಮೋಟಾರು ವಾಹನ (ತಿದ್ದುಪಡಿ) ಮಸೂದೆ 2016ಕ್ಕೆ ಲೋಕಸಭೆಯಲ್ಲಿ ಧ್ವನಿ ಮತದ ಮೂಲಕ ಅಂಗೀಕಾರ ದೊರೆತಿದೆ. ಈ ಮಸೂದೆಯು ಮೋಟಾರು ವಾಹನ ಕಾಯಿದೆ-1988ಕ್ಕೆ ತಿದ್ದುಪಡಿ ತರಲಿದೆ.

**ಮಸೂದೆಯ ಪ್ರಮುಖಾಂಶಗಳು:**

- **ರಾಷ್ಟ್ರೀಯ ಸಾರಿಗೆ ನೀತಿ:** ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳೊಂದಿಗೆ ಸಮಲೋಚಿಸಿ ರಾಷ್ಟ್ರೀಯ ಸಾರಿಗೆ ನೀತಿಯನ್ನು ರಚಿಸಬೇಕು.
- **ವಾಹನಗಳನ್ನು ಹಿಂಪಡೆಯುವುದು:** ಯಾವುದೇ ವಾಹನ ದೋಷಪೂರಿತವಾಗಿದ್ದು, ಪರಿಸರ, ಡ್ರೈವರ್ ಅಥವಾ ದಾರಿ ಹೋಕರಿಗೆ ಅದರಿಂದ ತೊಂದರೆ ಇರುವುದಾಗಿ ತಿಳಿದುಬಂದರೆ ಕೇಂದ್ರ ಸರ್ಕಾರ ಅಂತಹ ವಾಹನಗಳನ್ನು ಹಿಂಪಡೆಯಬಹುದು.
- **ಮೋಟಾರು ವಾಹನ ಅಪಘಾತ ನಿಧಿ:** ಈ ಮಸೂದೆಯಡಿ ಕೇಂದ್ರ ಸರ್ಕಾರ ಕಡ್ಡಾಯವಾಗಿ ಮೋಟಾರು ವಾಹನ ಅಪಘಾತ ನಿಧಿಯನ್ನು ಸ್ಥಾಪಿಸಬೇಕು. ಆ ಮೂಲಕ ಕಡ್ಡಾಯ ವಿಮೆ ಸೌಲಭ್ಯವನ್ನು ಪ್ರತಿಯೊಬ್ಬ ಚಾಲಕರಿಗೆ ಕಲ್ಪಿಸಬೇಕು.
- **ರಸ್ತೆ ಅಪಘಾತಗೊಳಗಾದವರಿಗೆ ಚಿಕಿತ್ಸೆ:** ಕೇಂದ್ರ ಸರ್ಕಾರ ರಸ್ತೆ ಅಪಘಾತಗೊಳಗಾದವರಿಗೆ ನಗದು ರಹಿತ ಚಿಕಿತ್ಸೆ ನೀಡಲು ಯೋಜನೆಯನ್ನು ಕಲ್ಪಿಸಲಿದೆ. ಅಪಘಾತ ನಡೆದ "ಒಂದು ಗಂಟೆ ಅವಧಿಯೊಳಗೆ (Golden Hour)" ಉಚಿತ ನಗದು ರಹಿತ ಚಿಕಿತ್ಸೆ ದೊರೆಯಲಿದೆ.
- **ಸಾವಿಗೆ ಪರಿಹಾರ**: ಹಿಟ್ ಆಂಡ್ ರನ್ ಪ್ರಕರಣದಲ್ಲಿ ಮೃತಪಟ್ಟ ವ್ಯಕ್ತಿಗೆ 2 ಲಕ್ಷ ರೂ. ಹಾಗೂ ಗಾಯಗೊಂಡರೆ 50 ಸಾವಿರ ರೂ. ಪರಿಹಾರ ಅಥವಾ ಕೇಂದ್ರ ಸರ್ಕಾರ ನಿಗಧಿಪಡಿಸಿದಷ್ಟು ಪರಿಹಾರ ಸಿಗಲಿದೆ.
- **ಉತ್ತಮ ದಯಾಳುವಿಗೆ ರಕ್ಷಣೆ:** ಅಪಘಾತಕ್ಕೆ ಒಳಗಾದವರಿಗೆ ತುರ್ತು ವೈದ್ಯಕೀಯ ಅಥವಾ ವೈದ್ಯಕೀಯೇತರ ನೆರವಿಗೆ ಧಾವಿಸುವ ದಯಾಳುಗಳಿಗೆ ಸೂಕ್ತ ರಕ್ಷಣೆ ನೀಡುವ ಅವಕಾಶವನ್ನು ಮಸೂದೆಯಲ್ಲಿ ಕಲ್ಪಿಸಲಾಗಿದೆ.
- ಅಪಘಾತವೆಸಗಿ ಪ್ರಾಣಹಾನಿ ಉಂಟು ಮಾಡಿದರೆ ಅವರ ಪೋಷಕರು ಅಥವಾ ಹೆತ್ತವರಿಗೂ ಮೂರು ವರ್ಷ ಜೈಲು ಶಿಕ್ಷೆಯ ಜತೆಗೆ ಲಕ್ಷ ರೂ.ಗಳಿಗಿಂತ ಹೆಚ್ಚಿನ ದಂಡ ಬೀಳಲಿದೆ.
- ಅಪಘಾತಕ್ಕೊಳಗಾದ ವ್ಯಕ್ತಿ ಮೃತಪಟ್ಟರೆ ಅಂಥವರ ಕುಟುಂಬಕ್ಕೆ ಅಪಘಾತ ಎಸಗಿದವರು 10 ಲಕ್ಷ ರೂ. ಹಾಗೂ ಗಂಭೀರ ಗಾಯಗಳಾದರೆ 5 ಲಕ್ಷ ರೂ. ಪರಿಹಾರ ನೀಡಬೇಕು
- ಸಂತ್ರಸ್ತರಿಗೆ 4 ತಿಂಗಳೊಳಗಾಗಿ ದಂಡ ಪಾವತಿಸುವುದು ಕಡ್ಡಾಯ
- ಮದ್ಯ ಸೇವಿಸಿ ಸಿಕ್ಕಿಬಿದ್ದರೆ ದಂಡದ ಪ್ರಮಾಣ 2ರಿಂದ 10 ಸಾವಿರ ರೂ.ಗೆ ಹೆಚ್ಚಳ

www.karunadaexams.com

## ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ಗುರಿಗಿಂತಲೂ ಹೆಚ್ಚು ಸಾಲ ವಿತರಣೆ




ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ 2016-17ನೇ ಸಾಲಿಗೆ ನಿಗದಿಪಡಿಸಲಾಗಿದ್ದ ಗುರಿಗಿಂತಲೂ ಹೆಚ್ಚು ಸಾಲವನ್ನು ವಿತರಿಸಲಾಗಿದೆ. 2016-17ನೇ ಸಾಲಿನಲ್ಲಿ ರೂ 1.8 ಲಕ್ಷ ಕೋಟಿ ಸಾಲದ ಗುರಿಯನ್ನು ಹೊಂದಲಾಗಿದ್ದು, 1,80,087 ಕೋಟಿ ಸಾಲವನ್ನು ನೀಡಲಾಗಿದೆ. ಈ ಸಾಲದಲ್ಲಿ ರೂ 1.23 ಕೋಟಿ ಸಾಲವನ್ನು ಬ್ಯಾಂಕಿನ ಮುಖಾಂತರ ವಿತರಿಸಲಾಗಿದ್ದರೆ, ರೂ 57,000 ಕೋಟಿ ಸಾಲವನ್ನು ಬ್ಯಾಂಕಿನೇತರ ಸಂಸ್ಥೆಗಳ ಮೂಲಕ ವಿತರಿಸಲಾಗಿದೆ. ಈ ವರ್ಷದ ಬಜೆಟ್ ನಲ್ಲಿ 2017-18ನೇ ಸಾಲಿನ ಆರ್ಥಿಕ ವರ್ಷದಲ್ಲಿ ರೂ 2.44 ಲಕ್ಷ ಕೋಟಿ ಗುರಿಯನ್ನು ಹೊಂದಲಾಗಿದೆ.

- ಸುಮಾರು 4 ಕೋಟಿ ಜನರು ಯೋಜನೆಯಡಿ ಸಾಲವನ್ನು ಪಡೆದಿದ್ದಾರೆ. ಇದರಲ್ಲಿ ಶೇ 70% ಮಹಿಳೆಯರು ಎಂಬುದು ಗಮನಾರ್ಹ. ಶೇ 20% ಎಸ್.ಸಿ, ಶೇ 5% ಎಸ್.ಟಿ ಜನಾಂಗಕ್ಕೆ ಸೇರಿದವರಾಗಿದ್ದಾರೆ.
- ಕಡಿಮೆ ದಾಖಲೆಗಳ ಅಗತ್ಯತೆ, ಸುಲಭವಾಗಿ ಸಾಲ ದೊರೆಯುವುದು ಹಾಗೂ ಗ್ಯಾರಂಟಿದಾರರ ಅಗತ್ಯತೆ ಇಲ್ಲದಿರುವುದು ಮುದ್ರಾ ಯೋಜನೆ ಅತ್ಯಂತ ಯಶಸ್ವಿಯಾಗಲು ಕಾರಣವಾಗಿದೆ.

**ಮುದ್ರಾ ಯೋಜನೆ:**

ಪ್ರಧಾನ ಮಂತ್ರಿ ಮುದ್ರಾ ಯೋಜನೆ (PMMY) ಭಾರತ ಸರ್ಕಾರದ ಒಂದು ಪ್ರಮುಖ ಯೋಜನೆ ಯಾಗಿದೆ. MUDRA ಎಂದರೆ Micro Unit Development and Refinance Agency ಎಂದರ್ಥ. "ಅನಿಧಿತರಿಗೆ ನಿಧಿ" ಒದಗಿಸುವುದರ ಮೂಲಕ ಉದ್ಯಮಗಳು, ಔಪಚಾರಿಕ ಆರ್ಥಿಕ ವ್ಯವಸ್ಥೆಗೆ ಉತ್ತಮ ಮುನ್ನುಡಿ ಬರೆಯುವುದು ಯೋಜನೆಯ ಉದ್ದೇಶ. ಇದು ಸಣ್ಣ ಮತ್ತು ಅತಿಸಣ್ಣ ಉದ್ಯಮದಾರರಿಗೆ ಕೃಷಿಯೇತರ ಆದಾಯದ ಚಟುವಟಿಕೆಗಳಿಗೆ ಸರ್ಕಾರಿ ವಲಯದ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು, ಖಾಸಗಿ ವಲಯದ ಬ್ಯಾಂಕ್, ವಿದೇಶಿ ಬ್ಯಾಂಕುಗಳು, ಕಿರು ಹಣಕಾಸು ಸಂಸ್ಥೆಗಳು (MFI) ಮತ್ತು ನಾನ್ ಬ್ಯಾಂಕಿಂಗ್ ಹಣಕಾಸು ಕಂಪನಿಗಳು (NBFC) ಇವುಗಳ ಮೂಲಕ ಹತ್ತು ಲಕ್ಷ ರೂಪಾಯಿ ವರಿಗೆ ಸಾಲಪಡೆಯಲು ಅವಕಾಶ ಕಲ್ಪಿಸಿದೆ. ಈ ಯೋಜನೆಯನ್ನು ಮಾನ್ಯ ಪ್ರಧಾನ ಮಂತ್ರಿಗಳು 8 ನೇ ಏಪ್ರಿಲ್, 2015 ರಂದು ಉದ್ಘಾಟಿಸಿದರು.

ಪ್ರಧಾನ ಮಂತ್ರಿ ಮುದ್ರಾ ಯೋಜನೆ ಅಡಿಯಲ್ಲಿ, ಈ ಕೆಳಗಿನ ಸಾಲ ಯೋಜನೆಗಳು ಲಭ್ಯವಿರುತ್ತದೆ:

ಶಿಶು: ರೂ . 50,000/- ವರೆಗೆ ಒಳಗೊಂಡ ಸಾಲ

ಕಿಶೋರ್: - ರೂ 50,000 /- ದಿಂದ ರೂ 5 ಲಕ್ಷ ವರೆಗೆ ಸಾಲ

ತರುಣ್: ರೂ 5 ಲಕ್ಷ ದಿಂದ ರೂ. 10 ಲಕ್ಷ ವರೆಗೆ ಸಾಲ

ಉಲ್ಲೇಖಿತ 'ಶಿಶು', 'ಕಿಶೋರ್' ಮತ್ತು 'ತರುಣ್' ಹೆಸರುಗಳು ಫಲಾನುಭವಿಗಳ /ವಾಣಿಜ್ಯೋದ್ಯಮಿ ಗಳ ಬೆಳವಣಿಗೆ / ಅಭಿವೃದ್ಧಿ ಮತ್ತು ಹಣಕಾಸು ಅಗತ್ಯಗಳನ್ನು ಹಂತ ಹಂತ ವಾಗಿ ಪ್ರತಿನಿಧಿಸುತ್ತದೆ.

www.karunadu exams.com

**12 ರಾಜ್ಯಗಳಲ್ಲಿ ಮಾದರಿ ನಗದು ರಹಿತ ಟೌನ್ ಷಿಪ್ಗೆ ಚಾಲನೆ**




ದೇಶದ ಹನ್ನೆರಡು ರಾಜ್ಯಗಳಲ್ಲಿ 81 ಮಾದರಿ ನಗದು ರಹಿತ/ಕಡಿಮೆ ನಗದು ಟೌನ್ ಷಿಪ್ ಗಳಿಗೆ ಪ್ರಧಾನಿ ಮೋದಿ ಅವರು ನಾಗಲ್ಯಾಂಡಿನಲ್ಲಿ ಚಾಲನೆ ನೀಡಿದರು. 81 ಟೌನ್ ಷಿಪ್ಗಳ ಪೈಕಿ ಗುಜರಾತಿನಲ್ಲಿ 56 ಹಾಗೂ ದೆಹಲಿ, ಗುಜರಾತ್, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಮಹಾರಾಷ್ಟ್ರ ಮತ್ತು ಬಿಹಾರ ಸೇರಿದಂತೆ 11 ರಾಜ್ಯಗಳಲ್ಲಿ ಉಳಿದ 25 ಟೌನ್ ಷಿಪ್ ಗಳು ಇರಲಿವೆ. ನಗದು ರಹಿತ/ಕಡಿಮೆ ನಗದು ಟೌನ್ ಷಿಪ್ಗಳ ಮಾದರಿಯನ್ನು ಗುಜರಾತ್ ನರ್ಮದಾ ವ್ಯಾಲಿ ಫರ್ಟಿಲೈಸರ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ (GNFC) ನೀತಿ ಆಯೋಗದ ನೆರವಿನೊಂದಿಗೆ ಈ ರಾಜ್ಯಗಳಲ್ಲಿ ಅಭಿವೃದ್ಧಿಪಡಿಸಿದೆ. ನೋಟು ಅಪಮೌಲ್ಯಗೊಳಿಸಿದ ನಂತರ ಗುಜರಾತಿನ ಭರುಚ್ ನಲ್ಲಿರುವ GNFC ಟೌನ್ ಷಿಪ್ ದೇಶದ ಮೊದಲ 100% ನಗದು ರಹಿತ ಟೌನ್ ಷಿಪ್ ಎನಿಸಿತ್ತು. ಈ 81 ನಗದು ರಹಿತ ಟೌನ್ ಷಿಪ್ ಗಳಿಂದ ಪ್ರತಿದಿನ 2.5 ಲಕ್ಷ ನಗದು ರಹಿತ ವ್ಯವಹಾರ ನಡೆಯಲಿದೆ ಎಂದು ಅಂದಾಜಿಸಲಾಗಿದೆ.

**ನಗದು ರಹಿತ ಟೌನ್ ಷಿಪ್**:

GNFC ಮಾದರಿಯ ನಗದು ರಹಿತ ಟೌನ್ ಷಿಪ್ ಅನ್ನು "ಪ್ರೈಸ್ ವಾಟರ್ ಕೂಪರ್ಸ್" ಸಂಸ್ಥೆಯ ಸಮೀಕ್ಷೆಯ ಮೇರೆಗೆ ಆಯ್ಕೆ ಮಾಡಲಾಗುತ್ತದೆ. ಈಗ ಆಯ್ಕೆ ಮಾಡಲಾಗಿರುವ 81 ಟೌನ್ ಷಿಪ್ ಗಳು ಸರ್ಕಾರ ಸ್ವಾಮ್ಯದ ಸಂಸ್ಥೆಗಳಾದ ONGC, NTPC, SAIL, BHEL, NMDC, CRPF, BSF ಹಾಗೂ ಖಾಸಗಿ ಸಂಸ್ಥೆಗಳ ಟೌನ್ ಷಿಪ್ ಗಳಾದ ರಿಲಾಯನ್ಸ್, ಎಸ್ಸಾರ್, ಅದಾನಿಗೆ ಸೇರಿವೆ.

**ನಗದು ರಹಿತ ಟೌನ್ ಷಿಪ್ ಎನಿಸಲು ಮಾನದಂಡಗಳು**:

- ಪೇಮೆಂಟ್ ಸ್ವೀಕರಿಸುವ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕು.
- ಟೌನ್ ಷಿಪ್ ನಲ್ಲಿ ವಾಸವಿರುವ ಎಲ್ಲಾ ಕುಟುಂಬಗಳಿಗೆ ನಗದು ರಹಿತ ವ್ಯವಹಾರದ ಬಗ್ಗೆ ತರಭೇತಿಯನ್ನು ನೀಡಿರಬೇಕು.
- ನಿಗಧಿ ಪಡಿಸಿದ ಅವಧಿಯಲ್ಲಿ ಶೇ 80% ವಹಿವಾಟು ಡಿಜಿಟಲ್ ಮೂಲಕ ಆಗಿರಬೇಕು.

www.karunaduexams.com

## <u>ಭಾರತದ ಸದ್ಯದ ಉಕ್ಕು ರಫ್ತು ಹಾಗೂ ಆಮದು ಮಾಹಿತಿ</u>



ಕೇಂದ್ರ ಉಕ್ಕು ಸಚಿವಾಲಯದ ಜಾಯಿಂಟ್ ಪ್ಲಾಂಟ್ ಕಮಿಟಿ (Joint Plant Committee) ವರದಿಯ ಪ್ರಕಾರ 2016-17ನೇ ಸಾಲಿನ ಅವಧಿಯಲ್ಲಿ ಭಾರತದ ಉಕ್ಕು ಆಮದು ಪ್ರಮಾಣ ಗಣನೀಯವಾಗಿ ತಗ್ಗಿದೆ. ಈ ಅವಧಿಯಲ್ಲಿ ಭಾರತದ ಒಟ್ಟಾರೆ ಉಕ್ಕು ಆಮದು ಪ್ರಮಾಣ ಶೇ 36% ಅಂದರೆ 7.4 ದಶಲಕ್ಷ ಟನ್ ಗೆ ಇಳಿದಿದೆ. ಇದೆ ಅವಧಿಯಲ್ಲಿ ಉಕ್ಕು ರಫ್ತು ಪ್ರಮಾಣ 8.2 ಮಿಲಿಯನ್ ಟನ್ ಹೆಚ್ಚಳವಾಗಿದ್ದು, ಶೇ 102%ಗೆ ಏರಿಕೆಯಾಗಿದೆ. ಇದೇ ವೇಳೆ ದೇಶದ ಉಕ್ಕು ಉತ್ಪಾದನೆಯು ಸಹ ಗಣನೀಯವಾಗಿ ಹೆಚ್ಚಿದ್ದು, ಈ ಅವಧಿಯಲ್ಲಿ ಕಚ್ಚಾ ಉಕ್ಕು ಉತ್ಪಾದನೆ 97,385 ಮಿಲಿಯನ್ ಟನ್ ಉತ್ಪಾದಿಸಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಉಕ್ಕು ಉತ್ಪಾದನೆ ಶೇ 8.5% ಹೆಚ್ಚಳವಾಗಿದೆ.

**ಉಕ್ಕು ವಲಯ**:

- ಕಚ್ಚಾ ಉಕ್ಕು ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲಿ ಮೂರನೇ ಸ್ಥಾನದಲ್ಲಿದೆ. ಚೀನಾ ಮತ್ತು ಜಪಾನ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.
- ಮುಂದಿನ ದಿನಗಳಲ್ಲಿ ಉಕ್ಕು ಉತ್ಪಾದನ ಕ್ಷೇತ್ರದಲ್ಲಿ ಎರಡನೇ ಸ್ಥಾನ ಪಡೆಯುವ ಮಹಾದಾಸೆಯನ್ನು ಭಾರತ ಹೊಂದಿದೆ. ಇದಕ್ಕಾಗಿ ರಾಷ್ಟ್ರೀಯ ಉಕ್ಕು ನೀತಿ-2017ರ ಕರಡು ಪ್ರತಿಯನ್ನು ಸಹ ಬಿಡುಗಡೆಗೊಳಿಸಲಾಗಿದೆ. ಈ ನೀತಿಯಡಿ ದೇಶದ ಉಕ್ಕು ಉತ್ಪಾದನ ಸಾಮರ್ಥ್ಯವನ್ನು 2030-31ರ ವೇಳಗೆ 300 ಮಿಲಿಯನ್ ಟನ್ಗೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ.

## <u>ರಾಷ್ಟ್ರೀಯ ಜಲಮಾರ್ಗ-1 ಅಭಿವೃದ್ಧಿಗೆ ವಿಶ್ವಬ್ಯಾಂಕಿನಿಂದ 375 ಮಿಲಿಯನ್ ಡಾಲರ್ ನೆರವು</u>



ರಾಷ್ಟ್ರೀಯ ಜಲಮಾರ್ಗ-1ರ ಸಾಮರ್ಥ್ಯವನ್ನು ಹೆಚ್ಚಿಸುವ ಮಹಾತ್ವಕಾಂಕ್ಷಿ ಯೋಜನೆಗೆ ವಿಶ್ವಬ್ಯಾಂಕ್ $375 ಮಿಲಿಯನ್ ಡಾಲರ್ ನೆರವು ಘೋಷಿಸಿದೆ. ವಿಶ್ವಬ್ಯಾಂಕಿನ ನೆರವಿನಿಂದ ಪಶ್ಚಿಮ ಬಂಗಾಳದ ಹಾಲ್ದಿಯಾದಿಂದ ಉತ್ತರಪ್ರದೇಶದ ವಾರಣಾಸಿ ನಡುವಿನ ರಾಷ್ಟ್ರೀಯ ಜಲಮಾರ್ಗ-1ರನ್ನು "ಜಲ ಮಾರ್ಗ ವಿಕಾಸ ಯೋಜನೆ"ಯಡಿ ಅಭಿವೃದ್ಧಿಪಡಿಸಲಾಗುವುದು. ಯೋಜನೆಯಿಂದ ಸುಮಾರು 1,390 ಕಿ.ಮೀ ಉದ್ದದ ಜಲಮಾರ್ಗದಲ್ಲಿ 1500-2000 ಟನ್ ತೂಕದ ಸರಕು ಹಡುಗುಗಳು ಮುಕ್ತವಾಗಿ ಸಂಚಾರ ಮಾಡಬಹುದಾಗಿದೆ. ಯೋಜನೆ ಅಂಗವಾಗಿ ಭಾರತೀಯ ಒಳನಾಡು ಜಲಮಾರ್ಗಗಳ ಪ್ರಾಧಿಕಾರ ರಾಷ್ಟ್ರೀಯ ಜಲಮಾರ್ಗ-1ರಲ್ಲಿ "ನದಿ ಮಾಹಿತಿ ಸೇವಾ ಸಂಸ್ಥೆ"ಯನ್ನು ಸ್ಥಾಪಿಸಲಿದೆ. ಈ ವ್ಯವಸ್ಥೆ ದೇಶದಲ್ಲೆ ಪ್ರಥಮ ಎನಿಸಲಿದೆ.

www.karunaduexams.com

**ಅವಶ್ಯಕತೆ:**

ಟ್ರಾಫಿಕ್ ಸಮಸ್ಯೆಯಿಂದಾಗಿ ರಸ್ತೆ ಮತ್ತು ರೈಲು ಮಾರ್ಗಗಳ ಮೂಲಕ ಸರಕು ಸಾಗಣೆ ದುಸ್ತರವಾಗಿದೆ. ಆಗಾಗಿ ರಾಷ್ಟ್ರೀಯ ಜಲಮಾರ್ಗ-1 ಅಭಿವೃದ್ದಿಯು ಪರ್ಯಾಯ, ಕಾರ್ಯಸಾಧುವಾದ, ಆರ್ಥಿಕ, ಸಮರ್ಥ ಮತ್ತು ಪರಿಸರ-ಸ್ನೇಹಿ ಸಾರಿಗೆ ವಿಧಾನಕ್ಕೆ ದಾರಿಮಾಡಿಕೊಡಲಿದೆ.

ರಾಷ್ಟ್ರೀಯ ಜಲಮಾರ್ಗ-1:

ರಾಷ್ಟ್ರೀಯ ಜಲಮಾರ್ಗ-1 ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಮೂಲಕ ಹಾದು ಹೋಗುತ್ತದೆ. ಆ ಮೂಲಕ ಈ ರಾಜ್ಯಗಳ ಪ್ರಮುಖ ನಗರಗಳಾದ ಹಾಲ್ದಿಯಾ, ಹೌರ, ಕೊಲ್ಕತ್ತ, ಭಗಲ್ಪುರ, ಪಾಟ್ನಾ, ಘಾಜಿಪುರ, ವಾರಾಣಾಸಿ ಮತ್ತು ಅಲಹಬಾದ್ ನಗರಗಳಿಗೆ ಸರಕು ಸಾಗಣೆ ಸೇವೆಯನ್ನು ಒದಗಿಸುತ್ತಿದೆ.


**ರಾಷ್ಟ್ರೀಯ ಒಳನಾಡು ಜಲಮಾರ್ಗಗಳ ಪ್ರಾಧಿಕಾರ:**

ರಾಷ್ಟ್ರೀಯ ಒಳನಾಡು ಜಲಮಾರ್ಗಗಳ ಪ್ರಾಧಿಕಾರ ಒಂದು ಶಾಸನಬದ್ದ ಸಂಸ್ಥೆಯಾಗಿದ್ದು, ಜಲಮಾರ್ಗಗಳ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಹೊಂದಿದೆ. ಇದರ ಕೇಂದ್ರ ಕಚೇರಿ ಉತ್ತರ ಪ್ರದೇಶದ ನೋಯ್ಡಾದಲ್ಲಿದೆ.

**ಜಲ ಮಾರ್ಗ ವಿಕಾಸ ಯೋಜನೆ**:

ಜಲ ಮಾರ್ಗ ವಿಕಾಸ ಯೋಜನೆಯು ಗಂಗಾನದಿಯಲ್ಲಿ ಅಲಹಾಬಾದ್ ಮತ್ತು ಹಾಲ್ದಿಯಾ ನಡುವೆ 1630 ಕಿ.ಮೀ ಉದ್ದದ ಜಲಮಾರ್ಗವನ್ನು ಅಭಿವೃದ್ದಿಪಡಿಸುವ ಉದ್ದೇಶವನ್ನು ಹೊಂದಿದೆ. ಸರಿಸುಮಾರು 1500 ಟನ್ ತೂಕದ ನೌಕೆಗಳು ವಾಣಿಜ್ಯ ಉದ್ದೇಶಕ್ಕಾಗಿ ಮುಕ್ತವಾಗಿ ಸಂಚಾರ ನಡೆಸುವಂತೆ ಅಭಿವೃದ್ದಿಪಡಿಸುವುದು ಯೋಜನೆಯ ಗುರಿ.

## ರಕ್ಷಣಾ ಕ್ಷೇತ್ರಕ್ಕೆ ವ್ಯಯಿಸುವ ರಾಷ್ಟ್ರಗಳ ಪೈಕಿ ಭಾರತಕ್ಕೆ 5ನೇ ಸ್ಥಾನ



ಮಿಲಿಟರಿ ಕ್ಷೇತ್ರಕ್ಕೆ ಖರ್ಚು ಮಾಡುವ ಜಗತ್ತಿನ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 5ನೇ ಸ್ಥಾನವನ್ನು ಪಡೆದುಕೊಂಡಿದೆ. ಸ್ಟಾಕ್ಹೋಮ್ ಇಂಟರ್ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ (SIPRI) ವರದಿಯ ಪ್ರಕಾರ 2016ರಲ್ಲಿ ಭಾರತ ಮಿಲಿಟರಿ ಕ್ಷೇತ್ರಕ್ಕೆ $55.9 ಬಿಲಿಯನ್ ಖರ್ಚು ಮಾಡಿದೆ. ಈ ಪಟ್ಟಿಯಲ್ಲಿ ಎಂದಿನಂತೆ ಅಮೆರಿಕ ಮೊದಲ ಸ್ಥಾನದಲ್ಲಿದೆ. ಚೀನಾ, ರಷ್ಯಾ ಮತ್ತು ಸೌದಿ ಅರೇಬಿಯಾ ನಂತರದ ಸ್ಥಾನದಲ್ಲಿವೆ. ಜಪಾನ್, ದಕ್ಷಿಣ ಕೊರಿಯಾ ಮತ್ತು ಆಸ್ಟ್ರೇಲಿಯಾ ಟಾಪ್ 15 ರಾಷ್ಟ್ರಗಳಲ್ಲಿ ಒಂದಾಗಿವೆ.

**ಜಾಗತಿಕ ವರದಿ:**

- ವಿಶ್ವದ ಶೇ 2.2% ಜಿಡಿಪಿ ಯನ್ನು ಮಿಲಿಟರಿ ಕ್ಷೇತ್ರಕ್ಕೆ ಖರ್ಚು ಮಾಡಲಾಗುತ್ತಿದೆ. ಜಿಡಿಪಿಯಲ್ಲಿ ಮಿಲಿಟರಿ ಕ್ಷೇತ್ರಕ್ಕೆ ಖರ್ಚು ಮಾಡುವ ಪ್ರಮಾಣ ಮಧ್ಯಪ್ರಾಚ್ಯಗಳಲ್ಲಿ ಅತಿ ಹೆಚ್ಚು ಮತ್ತು ಅಮೆರಿಕದಲ್ಲಿ ಅತಿ ಕಡಿಮೆ.

www.karunaduexams.com

- ಏಷ್ಯಾ ಮತ್ತು ಒಷೇನಿಯಾ ವಲಯದಲ್ಲಿ ಮಿಲಿಟರಿ ಖರ್ಚು ಶೇ 4.4% ಹೆಚ್ಚಾಗಿದೆ. ದಕ್ಷಿಣ ಚೀನಾ ಸಮುದ್ರದ ಮೇಲೆ ಸಾರ್ವಭೌಮತ್ವ ಸಾಧಿಸಲು ಕೆಲವು ರಾಷ್ಟ್ರಗಳು ಸೆಣಸುತ್ತಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ.
- ಜಗತ್ತಿನಲ್ಲಿ ಮಿಲಿಟರಿ ಕ್ಷೇತ್ರಕ್ಕೆ ಖರ್ಚು ಮಾಡುವ ಅತಿ ದೊಡ್ಡ ರಾಷ್ಟ್ರವಾದ ಅಮೆರಿಕದಲ್ಲಿ 2015 ಮತ್ತು 2016ರ ನಡುವೆ ಶೇ 1.7% ಹೆಚ್ಚಾಗಿದ್ದು $ 611 ಬಿಲಿಯನ್ ರಷ್ಟಿದೆ.
- ಚೀನಾ $ 215 ಬಿಲಿಯನ್ ಖರ್ಚು ಮಾಡಿದರೆ, ರಷ್ಯಾ $ 69.2 ಬಿಲಿಯನ್ ಖರ್ಚು ಮಾಡಿದೆ.
- 2015ರಲ್ಲಿ ಮೂರನೇ ಸ್ಥಾನದಲ್ಲಿ ಸೌದಿ ಅರೇಬಿಯಾ ಈ ಬಾರಿ ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿದೆ.
- ಪಾಕಿಸ್ತಾನ $ 9.93 ಬಿಲಿಯನ್ ಖರ್ಚು ಮಾಡಿದೆ ಆದರೆ ಟಾಪ್ 15 ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನವನ್ನು ಪಡೆದುಕೊಂಡಿಲ್ಲ.

**SIPRI**:ಸ್ಟಾಕ್ಹೋಮ್ ಇಂಟರ್ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ (SIPRI) ಒಂದು ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಅಂತಾರಾಷ್ಟ್ರೀಯ ಸಂಸ್ಥೆ. ಸಂಘರ್ಷ, ಶಸ್ತ್ರಾಸ್ತ್ರಗಳು, ಶಸ್ತ್ರಾಸ್ತ್ರ ನಿಯಂತ್ರಣ ಮತ್ತು ನಿರಸ್ತ್ರೀಕರಣದ ಬಗ್ಗೆ ಸಂಶೋಧನೆಗೆ ಮೀಸಲಾಗಿರುವ ಅಂತಾರಾಷ್ಟ್ರೀಯ ಸಂಸ್ಥೆಯಾಗಿದೆ.

## GNFCಗೆ ಗೋಲ್ಡನ್ ಗ್ಲೋಬ್ ಟೈಗರ್ಸ್ ಅವಾರ್ಡ್

ಗುಜರಾತ್ ನರ್ಮದಾ ವ್ಯಾಲಿ ಫರ್ಟಿಲೈಸರ್ಸ್ ಮತ್ತು ಕೆಮಿಕಲ್ಸ್ ಲಿಮಿಟೆಡ್ ಕಂಪನಿಗೆ 2017 ಗೋಲ್ಡನ್ ಗ್ಲೋಬ್ ಟೈಗರ್ಸ್ ಆವಾರ್ಡ್ ಫಾರ್ ಸಿಎಸ್ಆರ್ ಪ್ರಶಸ್ತಿ ಲಭಿಸಿದೆ. ಇ-ಪೇಮೆಂಟ್ ಲೀಡರ್ಶಿಪ್ ವಿಭಾಗದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗಿದೆ. GNFC ಟೌನ್ ಷಿಪ್ ನಲ್ಲಿ ಡಿಜಿಟಲ್ ವಹಿವಾಟನ್ನು ಅನುಷ್ಠಾನಗೊಳಿಸಿದಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಮಲೇಷಿಯಾದ ಕೌಲಾಲಂಪುರದಲ್ಲಿ ನಡೆದ ಗೋಲ್ಡನ್ ಗ್ಲೋಬ್ ಟೈಗರ್ಸ್ ನೈಟ್ -2017 ಅಲ್ಲಿ GNFC ಗೆ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. 43 ದೇಶಗಳ ಜಾಗತಿಕ ಸಿಎಸ್ಆರ್ ನಾಯಕರು ಸಮಾರಂಭದಲ್ಲಿ ಭಾಗವಹಿಸಿದ್ದರು. GNFCಗೆ ಈ ವಿಭಾಗದಲ್ಲಿ ದೊರೆತಿರುವ ಎರಡನೇ ಪ್ರಶಸ್ತಿ ಇದಾಗಿದೆ. ನಗದು ರಹಿತ ವ್ಯವಹಾರಕ್ಕಾಗಿ ಗೋಲ್ಡನ್ ಪಿಕಾಕ್ ಪ್ರಶಸ್ತಿಯನ್ನು ಈಗಾಗಲೇ ಪಡೆದುಕೊಂಡಿದೆ.

**GNFC**:

- ಗುಜರಾತ್ ನರ್ಮದಾ ವ್ಯಾಲಿ ಫರ್ಟಿಲೈಸರ್ಸ್ ಮತ್ತು ಕೆಮಿಕಲ್ಸ್ ಲಿಮಿಟೆಡ್ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದು, 1976ರಲ್ಲಿ ಸ್ಥಾಪಿಸಲಾಗಿದೆ.
- ನಗದು ರಹಿತ ಆರ್ಥಿಕ ವ್ಯವಸ್ಥೆಯನ್ನು ಅಳವಡಿಸಿಕೊಂಡ ದೇಶದ ಮೊದಲ ರಸಗೊಬ್ಬರ ಸಂಸ್ಥೆ ಇದಾಗಿದೆ.
- GNFC ಬರೂಚ್ ಟೌನ್ ಷಿಪ್ ದೇಶದ ಮೊದಲ 100% ನಗದು ರಹಿತ ಟೌನ್ ಷಿಪ್ ಎನಿಸಿದೆ.
- ಇತ್ತೀಚೆಗೆ ಪ್ರಧಾನಿ ಮೋದಿ ಅವರು 12 ರಾಜ್ಯಗಳ 81 GNFC ನಗದು ರಹಿತ ಮಾದರಿಯ ಟೌನ್ ಷಿಪ್ಗಳಿಗೆ ಚಾಲನೆ ನೀಡಿದರು.

www.karunaduexams.com

# ರಾಷ್ಟ್ರೀಯ

**ಹೊಸ ಯೂರಿಯಾ ನೀತಿ (NUP)-2015ಗೆ ತಿದ್ದುಪಡಿ ತರಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ**



ಹೊಸ ಯೂರಿಯಾ ನೀತಿ-2015ರ ಪ್ಯಾರ 5ಕ್ಕೆ ತಿದ್ದುಪಡಿ ತರಲು ಕೇಂದ್ರ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಪುನರ್ ನಿರ್ಧರಿಸಲ್ಪಟ್ಟ ಸಾಮರ್ಥ್ಯ ಮೀರಿ ಉತ್ಪಾದಿಸುವುದು ಹಾಗೂ ಹೊಸ ಪ್ಯಾರ 8 ಅನ್ನು ಸೇರ್ಪಡೆಗೊಳಿಸುವುದು ತಿದ್ದುಪಡಿಯ ಉದ್ದೇಶವಾಗಿದೆ. ಆ ಮೂಲಕ ಸ್ಥಳೀಯ ಯೂರಿಯಾ ಘಟಕಗಳನ್ನು ಪ್ರೋತ್ಸಾಹಿಸಿ ಸ್ಥಳೀಯವಾಗಿ ಯೂರಿಯಾ ಉತ್ಪಾದನೆಯನ್ನು ಹೆಚ್ಚಿಸುವುದಾಗಿದೆ.

**ಹೊಸ ಯೂರಿಯಾ ನೀತಿ-2015:**

ಹೊಸ ಯೂರಿಯಾ ನೀತಿಯನ್ನು ಮೇ 2015ರಲ್ಲಿ ಪ್ರಕಟಗೊಳಿಸಲಾಯಿತು. ಸಮಗ್ರವಾದ ನೂತನ ಯೂರಿಯಾ ನೀತಿ –2015ಕ್ಕೆ ಒಪ್ಪಿಗೆ ನೀಡಿರುವ ಕೇಂದ್ರ ಸಚಿವ ಸಂಪುಟವು, ಮುಂದಿನ ನಾಲ್ಕು ವರ್ಷಗಳಲ್ಲಿ ಸ್ಥಳೀಯವಾಗಿ ಹೆಚ್ಚಿನ ಪ್ರಮಾಣದಲ್ಲಿ ಯೂರಿಯಾ ತಯಾರಿಸಲು ಹಾಗೂ ಯೂರಿಯಾ ಘಟಕಗಳಲ್ಲಿನ ವಿದ್ಯುತ್ ಬಳಕೆಯಲ್ಲಿ ದಕ್ಷತೆ ಕಾಪಾಡಿಕೊಳ್ಳುವ ಮೂಲಕ ಸಬ್ಸಿಡಿ ಹೊರೆಯನ್ನು ಕಡಿಮೆ ಮಾಡುವುದು ನೀತಿಯ ಗುರಿಯಾಗಿದೆ. ಭಾರತ ಸದ್ಯಕ್ಕೆ 22 ಲಕ್ಷ ಟನ್ ಯೂರಿಯಾವನ್ನು ದೇಶಿಯವಾಗಿ ತಯಾರಿಸುತ್ತಿದ್ದರೆ, ವಿದೇಶಗಳಿಂದ 8 ಮೆಟ್ರಿಕ್ ಟನ್ ಆಮದು ಮಾಡಿಕೊಳ್ಳುತ್ತಿದೆ. ಹೊಸ ನೀತಿಯಿಂದಾಗಿ ರೈತರಿಗೆ ಸಕಾಲದಲ್ಲಿ ಯೂರಿಯಾ ಪೂರೈಸಬಹುದಾಗಿದೆ.

**ರಾಷ್ಟ್ರೀಯ ವಯೋಶ್ರೀ ಯೋಜನೆಗೆ ನೆಲ್ಲೂರಿನಲ್ಲಿ ಚಾಲನೆ**



ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಆಂಧ್ರ ಪ್ರದೇಶದ ನೆಲ್ಲೂರಿನಲ್ಲಿ ರಾಷ್ಟ್ರೀಯ ವಯೋಶ್ರೀ ಯೋಜನೆಗೆ ಚಾಲನೆ ನೀಡಿದೆ. ಬಿಪಿಎಲ್ ಕುಟುಂಗಬಳಿಗೆ ಸೇರಿದ ವಯಸ್ಸಾದವರಿಗೆ ವೈದ್ಯಕೀಯ ಚಿಕಿತ್ಸೆ ಹಾಗೂ ಜೀವನಕ್ಕೆ ನೆರವಾಗುವ ವೈದ್ಯಕೀಯ ಉಪಕರಣಗಳನ್ನು ಉಚಿತವಾಗಿ ನೀಡುವುದು ಯೋಜನೆಯ ಉದ್ದೇಶ.

www.karunaduexams.com

**ಯೋಜನೆಯ ಪ್ರಮುಖಾಂಶಗಳು:**

- ಬಿಪಿಎಲ್ ಕುಟುಂಬಗಳಿಗೆ ಸೇರಿದ ಹಿರಿಯ ನಾಗರಿಕರಿಗೆ ವೈದ್ಯಕೀಯ ಚಿಕಿತ್ಸೆ ಹಾಗೂ ಜೀವನಕ್ಕೆ ನೆರವಾಗುವ ವೈದ್ಯಕೀಯ ಉಪಕರಣಗಳನ್ನು ಉಚಿತವಾಗಿ ಕ್ಯಾಂಪ್ ಆಯೋಜಿಸುವ ಮೂಲಕ ನೀಡಲಾಗುವುದು.
- ಇದೊಂದು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು, ಯೋಜನೆಯ ವೆಚ್ಚವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರವೇ ಭರಿಸಲಿದೆ.
- ಸುಮಾರು 5,20,000 ಹಿರಿಯ ನಾಗರಿಕರಿಗೆ ಯೋಜನೆಯ ಉಪಯೋಗವಾಗಲಿದ್ದು, ಹಿರಿಯ ನಾಗರಿಕರ ಕಲ್ಯಾಣ ನಿಧಿಯಿಂದ ವೆಚ್ಚವನ್ನು ಭರಿಸಲಾಗುವುದು.
- **ಅನುಷ್ಠಾನ ಏಜೆನ್ಸಿ**: ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಡಿ ಕಾರ್ಯನಿರ್ವಹಿಸುವ "ಕೃತಕ ಕಾಲು ತಯಾರಕ ಮಂಡಳಿ" ಯೋಜನೆಯನ್ನು ಅನುಷ್ಠಾನಗೊಳಿಸಲಿದೆ.
- ಈ ಯೋಜನೆಯಡಿ ಜೀವನಕ್ಕೆ ನೆರವಾಗುವ ಉಪಕರಣಗಳಾದ ಊರುಗೋಲು, ವಾಕರ್, ಶ್ರವಣ ಯಂತ್ರ, ವೀಲ್ ಚೇರ್, ಕನ್ನಡಕ ಸೇರಿದಂತೆ ವಿವಿಧ ಉಪಕರಣಗಳನ್ನು ವಿತರಿಸಲಾಗುವುದು.

**ಫಲಾನುಭವಿಗಳನ್ನು ಗುರುತಿಸುವಿಕೆ:**

- ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಗಳ ಮೂಲಕ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಫಲಾನುಭವಿಗಳನ್ನು ಗುರುತಿಸಲಿವೆ. ಪ್ರತಿ ಜಿಲ್ಲೆಯಲ್ಲಿ ಶೇ 30% ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಕಡ್ಡಾಯ.

**ಹಿನ್ನಲೆ:**

2015-16ನೇ ಸಾಲಿನ ಕೇಂದ್ರ ಬಜೆಟ್ ನಲ್ಲಿ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಹಿರಿಯ ನಾಗರಿಕರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಹಾಗೂ ಜೀವನಕ್ಕೆ ನೆರವಾಗುವ ಉಪಕರಣಗಳನ್ನು ನೀಡುವ ಯೋಜನೆಯನ್ನು ಹೊರತರವುದಾಗಿ ಹೇಳಿದ್ದಾರೆ. ಅದರಂತೆ ರಾಷ್ಟ್ರೀಯ ವಯೋಶ್ರೀ ಯೋಜನೆಯನ್ನು ಜಾರಿಗೆ ತರಲಾಗಿದೆ. 2011 ಜನಗಣತಿ ಪ್ರಕಾರ ದೇಶದಲ್ಲಿ 10.38 ಕೋಟಿ ಹಿರಿಯ ನಾಗರಿಕರಿದ್ದಾರೆ. ಇವರಲ್ಲಿ ಶೇ 70% ಹಿರಿಯ ನಾಗರಿಕರು ಗ್ರಾಮೀಣ ಪ್ರದೇಶದಲ್ಲಿ ವಾಸವಿದ್ದಾರೆ.

www.karunaduexams.com

## ದೇಶದ ಅತಿ ಉದ್ದದ ಸುರಂಗ ರಸ್ತೆ ಲೋಕಾರ್ಪಣೆ



ಜಮ್ಮು– ಶ್ರೀನಗರ ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಚೆನಾನಿ–ನಶ್ರಿ ಸಂಪರ್ಕಿಸುವ 9.2 ಕಿ.ಮೀ. ಉದ್ದದ ಸುರಂಗ ರಸ್ತೆ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದರು. ಇದು ದೇಶದ ಅತಿ ಉದ್ದದ ಸುರಂಗ ರಸ್ತೆ ಮಾರ್ಗವಾಗಿದೆ.

**ಪ್ರಮುಖಾಂಶಗಳು**:

- ಸಮುದ್ರ ಮಟ್ಟದಿಂದ ಸುಮಾರು 1200 ಮೀಟರ್ ಎತ್ತರದಲ್ಲಿ ಈ ಮಾರ್ಗವನ್ನು ನಿರ್ಮಿಸಲಾಗಿದೆ.
- ಐದು ವರ್ಷಗಳ ಕಾಲ ನಡೆದಿರುವ ಈ ಕಾಮಗಾರಿಗೆ, ಸುಮಾರು ₹ 2,500 ಕೋಟಿ ವೆಚ್ಚವಾಗಿದೆ.
- ಈ ಮಾರ್ಗದಿಂದ ಜಮ್ಮು– ಶ್ರೀನಗರ ಅಂತರವು 30 ಕಿ.ಮೀ ಕಡಿಮೆಯಾಗುತ್ತದೆ. ಪ್ರಯಾಣದ ಅವಧಿಯಲ್ಲಿ ಸುಮಾರು 2 ಗಂಟೆ ಉಳಿಯುತ್ತದೆ.
- ಹಿಮಪಾತ, ಮಳೆಯಿಂದ ವಾಹನ ಸಂಚಾರಕ್ಕೆ ಆಗಾಗ ತೊಂದರೆಯಾಗುವ ಸ್ಥಳಗಳಾದ ಪಟ್ನಿಟಾಪ್, ಕುಡ್ ಮತ್ತು ಬಟೋಟೆ ಪ್ರದೇಶಗಳಿಗೆ ಬೈಪಾಸ್ ರಸ್ತೆಯಾಗಿ ಸುಗಮ ಸಂಚಾರಕ್ಕೆ ಅನುಕೂಲವಾಗುತ್ತದೆ. ಇದರಿಂದ ಪ್ರತಿದಿನ 27 ಲಕ್ಷ ಮೌಲ್ಯದ ಇಂಧನ ಉಳಿಸಬಹುದು.
- ಇದು ಪ್ರವಾಸೋದ್ಯಮಕ್ಕೆ ಹಾಗೂ ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಲಿದೆ.

## ಖ್ಯಾತ ಹಿಂದೂಸ್ತಾನಿ ಗಾಯಕಿ ಕಿಶೋರಿ ಅಮೋನ್ಕರ್ ನಿಧನ



ಖ್ಯಾತ ಹಿಂದೂಸ್ತಾನಿ ಗಾಯಕಿ ಕಿಶೋರಿ ಅಮೋನ್ಕರ್ (84) ನಿಧನರಾಗಿದ್ದಾರೆ. ಅಮೋನ್ಕರ್ ರವರು ಕೆಲಕಾಲದ ಅನಾರೋಗ್ಯದಿಂದ ಬಳಲುತ್ತಿದ್ದರು.

- ಕಿಶೋರಿ ಅಮೋನ್ಕರ್ ರವರು ಜೈಪುರ ಘರಾನಾ ಶೈಲಿಯ ಗಾಯಕಿಯಾಗಿ ಪ್ರಸಿದ್ಧರಾಗಿದ್ದರು. ಅವರು ದೇಶದ ಶ್ರೇಷ್ಠ ಹಿಂದೂಸ್ತಾನಿ ಗಾಯಕರಲ್ಲಿ ಒಬ್ಬರೆನಿಸಿಕೊಂಡಿದ್ದರು.
- ಹಿಂದೂಸ್ತಾನಿ ಪಾರಂಪರಿಕ ರಾಗಗಳಲ್ಲಿ ಖ್ಯಾಲ್ ಹಾಡುವುದರಲ್ಲಿ ಕಿಶೋರಿ ಖ್ಯಾತರಾಗಿದ್ದರು. ಜತೆಗೆ ಲಘು ಸಂಗೀತದ ಠುಮರಿ, ಭಜನ್ ಹಾಗೂ ಚಿತ್ರ ಗೀತೆಗಳ ಗಾಯನದಲ್ಲೂ ಅವರು ಹೆಸರು ಗಳಿಸಿದ್ದರು.
- ಸಂಗೀತಾ ಕ್ಷೇತ್ರಕ್ಕೆ ಅವರು ನೀಡಿರುವ ಕೊಡುಗೆಯನ್ನು ಪರಿಗಣಿಸಿ ಅವರಿಗೆ ಸರ್ವೋಚ್ಚ ಗೌರವಗಳಾದ ಪದ್ಮಭೂಷಣ (1987), ಪದ್ಮವಿಭೂಷಣ (2002) ಸೇರಿದಂತೆ ಅನೇಕ ಪ್ರಶಸ್ತಿಗಳು ಸಂದಿವೆ.

www.karunaduexams.com

**<u>ಮಧ್ಯಪ್ರದೇಶ ಸರ್ಕಾರದಿಂದ ದೀನ್ ದಯಾಳ್ ರಸೋಯಿ ಯೋಜನೆಗೆ ಚಾಲನೆ</u>**



ಬಡವರಿಗೆ ಸಬ್ಸಿಡಿ ದರದಲ್ಲಿ ಊಟ ವಿತರಿಸುವ ದೀನ್ ದಯಾಳ್ ರಸೋಯಿ ಯೋಜನೆಗೆ ಮಧ್ಯಪ್ರದೇಶ ಸರ್ಕಾರ ಚಾಲನೆ ನೀಡಿದೆ. ಬಿಜೆಪಿಯ ಧುರೀಣ ದೀನ್ ದಯಾಳ್ ಅವರ ಹೆಸರನ್ನು ಈ ಯೋಜನೆಗೆ ಇಡಲಾಗಿದೆ. ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚವ್ಹಾಣ್ ಅವರು ಯೋಜನೆಯ ಮೊದಲ ಹಂತಕ್ಕೆ ರಾಜ್ಯದ 49 ಜಿಲ್ಲಾ ಕೇಂದ್ರಗಳಲ್ಲಿ ಚಾಲನೆ ನೀಡಿದರು. ಆ ಮೂಲಕ ಜನಪ್ರಿಯ ಸಬ್ಸಿಡಿ ಆಹಾರ ವಿತರಣೆ ಕಾರ್ಯಕ್ರಮವನ್ನು ಚಾಲನೆ ನೀಡಿದ ಮೂರನೇ ರಾಜ್ಯ ಎಂಬ ಖ್ಯಾತಿಗೆ ಮಧ್ಯಪ್ರದೇಶ ಒಳಗಾಗಿದೆ. ಈಗಾಗಲೇ ತಮಿಳುನಾಡು ಹಾಗೂ ರಾಜಸ್ತಾನದಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ.

**ಪ್ರಮುಖಾಂಶಗಳು**:

- ಯೋಜನೆಯಡಿ ಬಡ ಜನರು, ಬಡ ಕುಟುಂಬಗಳು ಹಾಗೂ ಅಂತಹ ಕುಟುಂಬಗಳ ಸದಸ್ಯರಿಗೆ ರೂ 5ಕ್ಕೆ ಪೌಷ್ಠಿಕ ಭರಿತ ಊಟವನ್ನು ನೀಡಲಾಗುವುದು.
- ಯೋಜನೆಯನ್ನು ಯಶಸ್ವಿಗೊಳಿಸಲು ಜಿಲ್ಲಾ ಮಟ್ಟದಲ್ಲಿ ಕ್ಯಾಂಟೀನ್ ಗಳನ್ನು ತೆರೆಯಲಾಗುವುದು. ದೊಡ್ಡ ಜಿಲ್ಲೆಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಯಾಂಟೀನ್ ಗಳನ್ನು ಬೇಡಿಕೆಗೆ ಅನುಗುಣವಾಗಿ ತೆರೆಯಲಾಗುವುದು.
- ಈ ಕ್ಯಾಂಟೀನ್ ಗಳು ಪ್ರತಿ ದಿನ ಸುಮಾರು 2000 ಜನರಿಗೆ ರುಚಿ ಹಾಗೂ ಶುಚಿಯಾದ ಊಟದ ವ್ಯವಸ್ಥೆ ಕಲ್ಪಿಸಲಿವೆ.

**<u>ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿ ಇಂದಿರಾ ಬ್ಯಾನರ್ಜಿ ನೇಮಕ</u>**



ಮದ್ರಾಸ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಇಂದಿರಾ ಬ್ಯಾನರ್ಜಿ ಅವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಆ ಮೂಲಕ ದೇಶದಲ್ಲಿ ಮಹಿಳಾ ಮುಖ್ಯ ನ್ಯಾಯಧೀಶರನ್ನು ಹೊಂದಿರುವ ಹೈಕೋರ್ಟ್‌ಗಳ ಸಂಖ್ಯೆ ನಾಲ್ಕಕ್ಕೆ ಏರಿದೆ. ಏಕಕಾಲದಲ್ಲಿ ದೇಶದ ನಾಲ್ಕು ಹೈಕೋರ್ಟ್‌ಗಳಲ್ಲಿ ಮಹಿಳೆಯರು ಮುಖ್ಯ ನ್ಯಾಯಮೂರ್ತಿಗಳಾಗಿರುವುದು ಇದೇ ಮೊದಲು. ದೇಶದ ಎಲ್ಲಾ ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಶೇ 10ರಷ್ಟು ಮಾತ್ರ.

**ಪ್ರಮುಖಾಂಶಗಳು:**

- ಸುಪ್ರೀಂಕೋಟಿನ ಮೊದಲ ಮಹಿಳಾ ನ್ಯಾಯಮೂರ್ತಿ ಆಗಿ ನೇಮಕಗೊಂಡವರು ಫಾತಿಮಾ ಬೀವಿ. ಬೀವಿ ಅವರು ಕೇರಳದವರು. 1989ರಲ್ಲಿ ಇವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು.

www.karunaduexams.com

- 1989ರಿಂದ ಈವರೆಗೆ ಕೇವಲ ಆರು ಮಂದಿ ಮಹಿಳೆಯರಷ್ಟೇ ಸುಪ್ರೀಂ ಕೋರ್ಟ್ ನಲ್ಲಿ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಸದ್ಯ ಆರ್. ಭಾನುಮತಿ ಅವರು ಮಾತ್ರ ಸುಪ್ರೀಂ ಕೋರ್ಟ್‌ನ ಏಕೈಕ ಮಹಿಳಾ ನ್ಯಾಯಮೂರ್ತಿಯಾಗಿದ್ದಾರೆ.

**ಹೈಕೋರ್ಟಿನ ಇತರೆ ಮಹಿಳಾ ನ್ಯಾಯಮೂರ್ತಿಗಳು:**

- ಬಾಂಬೆ ಹೈಕೋರ್ಟ್: ನ್ಯಾಯಮೂರ್ತಿ ಮಂಜುಳಾ ಚೆಲ್ಲೂರು
- ನ್ಯಾಯಮೂರ್ತಿ ಜಿ.ರೋಹಿಣಿ: ದೆಹಲಿ ಹೈಕೋರ್ಟ್
- ನ್ಯಾಯಮೂರ್ತಿ ನಿಶಿತಾ ನಿರ್ಮಲ್ ಮ್ಹಾತ್ರೆ (ಹಂಗಾಮಿ ಮುಖ್ಯ ನ್ಯಾಯಮೂರ್ತಿ): ಕೋಲ್ಕತ್ತ ಹೈಕೋರ್ಟ್

<u>**ಚಂಪಾರಣ್ ಸತ್ಯಾಗ್ರಹಕ್ಕೆ 100 ವರ್ಷ: ವಸ್ತುಪ್ರದರ್ಶನ ಉದ್ಘಾಟಿಸಿದ ಮೋದಿ**</u>



ಭಾರತ ಸ್ವಾತಂತ್ರ ಹೋರಾಟದಲ್ಲಿ ಪ್ರಮುಖ ಭಾಗವೆನಿಸಿರುವ ಚಂಪಾರಣ್ ಸತ್ಯಾಗ್ರಹಕ್ಕೆ 100 ವರ್ಷ ಆದ ಕಾರಣ ಪ್ರಧಾನಿ ಮೋದಿ ಅವರು "ಸ್ವಚ್ಚಗ್ರಹ್ – ಬಾಪು ಕೊ ಕಾರ್ಯಾಂಜಲಿ – ಏಕ್ ಅಭಿಯಾನ್, ಏಕ್ ಪ್ರದರ್ಶನಿ" ಹೆಸರಿನ ಪ್ರದರ್ಶನಕ್ಕೆ ನವದೆಹಲಿಯಲ್ಲಿ ಚಾಲನೆ ನೀಡಿದರು. ಪ್ರದರ್ಶನದಲ್ಲಿ ಚಂಪಾರಣ್ ಸತ್ಯಾಗ್ರಹ ಹಾಗೂ ಅದಕ್ಕೆ ಸಂಬಂಧಿಸಿದ ತತ್ವಗಳು, ಜೊತೆಗೆ ಸ್ವಚ್ಚ ಭಾರತ ಅಭಿಯಾನದ ಬಗ್ಗೆಯು ಪ್ರದರ್ಶನಗೊಳ್ಳಲಿದೆ.

**ಚಂಪಾರಣ್ ಸತ್ಯಾಗ್ರಹ**:

- ಚಂಪಾರಣ್ ಸತ್ಯಾಗ್ರಹ ಮಹಾತ್ಮಗಾಂಧಿ ಅವರು ಕೈಗೊಂಡ ಮೊಟ್ಟಮೊದಲ ಸತ್ಯಾಗ್ರಹ. ಈಗಿನ ಬಿಹಾರ ರಾಜ್ಯದ ತಿರುಹುತ್ ವಿಭಾಗದ ಚಂಪಾರಣ್ ಜಿಲ್ಲೆಯಲ್ಲಿ ಗಾಂಧಿಯವರ ನೇತೃತ್ವದಲ್ಲಿ ಏಪ್ರಿಲ್ 1917ರಲ್ಲಿ ಈ ಸತ್ಯಾಗ್ರಹ ನಡೆಯಿತು.
- ನೀಲಿಯನ್ನು ಬೆಳೆಯುತ್ತಿದ್ದ ರೈತರ ಕಷ್ಟದ ನಿವಾರಣೆಗಾಗಿ ಈ ಸತ್ಯಾಗ್ರಹವನ್ನು ಕೈಗೊಳ್ಳಲಾಯಿತು.
- ಯೂರೋಪಿಯನ್ ತೋಟಗಾರರು ರೈತರಿಗೆ ಬಹಳ ಕಠಿಣವಾದ ನಿಬಂಧನೆಗಳ ಮೇಲೆ ಜಮೀನನ್ನು ಸಾಗುವಳಿಗೆ ಕೊಟ್ಟಿದ್ದರು. ಪ್ರತಿ ರೈತನೂ ತನಗೆ ಇಷ್ಟವಿರಲಿ ಇಲ್ಲದಿರಲಿ, ಪ್ರತಿ ಇಪ್ಪತ್ತು ಕಟ್ಟೆ (ಒಂದು ಎಕರೆ) ಜಮೀನಿನಲ್ಲಿ ಮೂರುಕಟ್ಟೆಯಷ್ಟು ನೆಲದಲ್ಲಾದರೂ ನೀಲಿಯನ್ನು ಬಿತ್ತಿ ಬೆಳೆದು ಅದನ್ನು ತೋಟಗಾರ ನಿರ್ಣಯಿಸಿದ ಬೆಲೆಗೆ ಅವನ ಕಾರ್ಖಾನೆಗೆ ಮಾರಬೇಕಾಗಿತ್ತು. ಹಾಗೆ ಮಾಡದೆ ತಪ್ಪಿದರೆ ಅವನಿಗೆ ದಂಡ ವಿಧಿಸಲಾಗುತ್ತಿತ್ತು. ಈ ಪದ್ಧತಿಗೆ ತೀನ್ ಕಠಿಯಾ ಎಂದು ಹೆಸರಿತ್ತು.
- ಗಯಾ ಕಾಂಗ್ರೆಸ್ ನಲ್ಲಿ ರಾಜಕುಮಾರ ಶುಕ್ಲನೆಂಬ ಚಂಪಾರಣ್ಯದ ಒಬ್ಬ ರೈತ ಗಾಂಧೀಜಿಯವರನ್ನು ಸಂಧಿಸಿ, ನೀಲಿ ಬೆಳೆಯುವ ರೈತರ ಕಷ್ಟಗಳನ್ನು ವಿವರಿಸಿ, ಗಾಂಧೀಜಿ

www.karunaduexams.com

ಚಂಪಾರಣ್ಯಕ್ಕೆ ಬಂದು ನೋಡಿ ಪರಿಹಾರ ಮಾರ್ಗವನ್ನು ಸೂಚಿಸಬೇಕೆಂದು ಬೇಡಿದ. ಗಾಂಧಿಯವರು ಮುಜಫರ್ ಪುರಕ್ಕೆ 1917ರ ಏಪ್ರಿಲ್ 10 ರಂದು ಹೋದರು. ಅಲ್ಲಿಯ ಪರಿಸ್ಥಿತಿಯನ್ನೂ ರೈತರ ಸಮಸ್ಯೆಯನ್ನೂ ಅವರು ಅಧ್ಯಯನ ಮಾಡಿದಾಗ, ಇದು ಸತ್ಯಾಗ್ರಹ ಮಾಡಲು ಅರ್ಹವಾದ ಸಮಸ್ಯೆ ಎಂಬುದು ಅವರಿಗೆ ಮನವರಿಕೆಯಾಯಿತು. ರೈತರ ಸ್ಥಿತಿಗತಿಗಳನ್ನು ವಿಚಾರಿಸಿ ತಿಳಿದುಕೊಳ್ಳಲು ಗಾಂಧೀಯವರು ಉದ್ದೇಶಿಸಿದರು.

- ಆದರೆ ಮಹಾತ್ಮಗಾಂಧಿ ಅವರ ವಿರುದ್ಧ ಕಾನೂನು ಉಲ್ಲಂಘನೆ ಆರೋಪ ಹೊರೆಸಿ, ಚಂಪಾರಣ್ ಬಿಡಲು ಅಲ್ಲಿನ ಕಮೀಷನರ್ ಆದೇಶಿಸಿದರು. ಆದರೆ ಗಾಂಧೀಜಿ ಅವರು ಚಂಪಾರಣ್ ತೊರೆಯಲು ನಿರಾಕರಿಸಿದರು.
- ಏಪ್ರಿಲ್ 18, 1917 ರಲ್ಲಿ ಗಾಂಧೀಜಿ ಅವರು ಮೋತಿಹರಿ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾದರು. ಸುಮಾರು 2000ಕ್ಕೂ ಹೆಚ್ಚು ಜನ ಅವರ ಬೆಂಬಲಕ್ಕೆ ಬಂದಿದ್ದರು. ತೀರ್ಪು ರೈತರ ಪರವಾಗಿ ಬಂದಿತು.
- ಅಂದಿನ ಬಿಹಾರದ ಲೆಫ್ಟಿನೆಂಟ್ ಗವರ್ನರ್ ಅವರು ಗಾಂದೀಜಿ ಅವರ ಮೇಲೆ ಹೂಡಿದ್ದ ಕೇಸನ್ನು ಹಿಂಪಡೆಯುವಂತೆ ಆದೇಶಿಸಿದರು. ಅಲ್ಲದೇ ರೈತರ ಸಂಕಷ್ಟ ಬಗ್ಗೆ ಆಲಿಸಲು ಗಾಂಧೀಜಿ ಅವರಿಗೆ ಮುಕ್ತ ಸ್ವಾತಂತ್ರ ನೀಡಲಾಯಿತು.

**ಸಂವಿಧಾನ 123ನೇ ತಿದ್ದುಪಡಿ ಮಸೂದೆ, 2017: ಲೋಕಸಭೆಯಲ್ಲಿ ಅನುಮೋದನೆ**



ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ(ಎನ್‌ಸಿಬಿಸಿ) ಸಾಂವಿಧಾನಿಕ ಸ್ಥಾನಮಾನ ನೀಡುವ ಸಂವಿಧಾನದ 123ನೇ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಅನುಮೋದನೆಗೊಂಡಿದೆ. ಮಸೂದೆಯ ಪರವಾಗಿ 360 ಮತಗಳ ಬಿದ್ದರೆ, ವಿರುದ್ಧವಾಗಿ 2 ಮತಗಳನ್ನು ಚಲಾಯಿಸಲಾಗಿದೆ.

**ಮಸೂದೆಯ ಉದ್ದೇಶ:**

- ಸಂವಿಧಾನ(123 ತಿದ್ದುಪಡಿ) ಕಾಯ್ದೆ 2017 ಹಿಂದುಳಿದ ವರ್ಗಗಳ ಆಯೋಗಕ್ಕೆ ವಿಶೇಷ ಸ್ಥಾನಮಾನಗಳನ್ನು ನೀಡಲಿದೆ.
- ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಅನ್ವಯವಾಗುವ ಪರಿಚ್ಛೇದ 338, 338ಎ ನಂತರ, 338 ಬಿ ಪರಿಚ್ಛೇದವಾಗಿ ಸೇರ್ಪಡೆಗೊಳ್ಳಲಿದೆ.
- 342-ಎ ಹೊಸ ಪರಿಚ್ಛೇದ ಸಹ ಸೇರ್ಪಡೆಗೊಳ್ಳಲಿದೆ. ಈ ಪರಿಚ್ಛೇದವು ರಾಷ್ಟ್ರಪತಿಗಳಿಗೆ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ವರ್ಗಗಳೆಂದು ಅಧಿಸೂಚನೆ ಹೊರಡಿಸುವ ಅಧಿಕಾರ ನೀಡಲಿದೆ. ರಾಜ್ಯಗಳಲ್ಲಿ ಗವರ್ನರ್ ರವರ ಸಲಹೆ ಮೇರೆಗೆ ರಾಷ್ಟ್ರಪತಿಗಳು ಅಧಿಸೂಚನೆ ಹೊರಡಿಸಲಿದ್ದಾರೆ. ಇದೇ ಪರಿಚ್ಛೇದ ಸಂಸತ್ತಿಗೆ ಕೇಂದ್ರ ಹಿಂದುಳಿದ ವರ್ಗಗಳ ಪಟ್ಟಿಗೆ ವರ್ಗಗಳ ಸೇರ್ಪಡೆ ಅಥವಾ ಕೈಬಿಡುವ ಅಧಿಕಾರ ಸಹ ನೀಡಲಿದೆ.

www.karunaduexams.com

**ಹಿನ್ನಲೆ:**

- 1993ರ ರಾಷ್ಟ್ರೀಯ ಹಿಂದುಳಿದ ವರ್ಗಗಳು, ಪಂಗಡಗಳ ರಾಷ್ಟ್ರೀಯ ಆಯೋಗ ಕಾಯ್ದೆ ರದ್ದುಗೊಳಿಸಿರುವ ಕೇಂದ್ರ ಸರ್ಕಾರ ಸಂವಿಧಾನ(123ನೇ ತಿದ್ದುಪಡಿ) ಮಸೂದೆ 2017ಯನ್ನು ಲೋಕಸಭೆಯಲ್ಲಿ ಮಂಡಿಸಿದೆ.
- ಈ ಮಸೂದೆ ಅಂಗೀಕಾರಗೊಂಡಲ್ಲಿ, ಆಯೋಗಕ್ಕೆ ಸಾಂವಿಧಾನಿಕ ಸ್ಥಾನ ದೊರೆಯಲಿದ್ದು, ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಅನ್ವಯವಾಗುವ ಪರಿಚ್ಛೇದ 338, 338ಎ ನಂತರ, 338 ಬಿ ಪರಿಚ್ಛೇದವಾಗಿ ಸೇರ್ಪಡೆಗೊಳ್ಳಲಿದೆ.
- ಹಿಂದಿನ ಎನ್‌ಸಿಬಿಸಿ ಕಾಯ್ದೆ ಪ್ರಕಾರ, ಆಯೋಗಕ್ಕೆ ಕೇವಲ ಒಬಿಸಿ ಪಟ್ಟಿಯಿಂದ ನಿರ್ದಿಷ್ಟ ಸಮುದಾಯಗಳನ್ನು ಸೇರಿಸುವಂತೆ ಇಲ್ಲವೇ ಕೈಬಿಡುವಂತೆ ಶಿಫಾರಸು ಮಾಡಲು ಅಧಿಕಾರವಿತ್ತು. ಹೊಸ ಮಸೂದೆಗೆ ಸಂಸತ್ತಿನಲ್ಲಿ ಅಂಗೀಕಾರ ದೊರೆತ ನಂತರ, ಆಯೋಗ ಹಿಂದುಳಿದ ವರ್ಗಳ ಅಭಿವೃದ್ಧಿ ಹಾಗೂ ಕಲ್ಯಾಣಕ್ಕಾಗಿ ಯೋಜನೆಗಳನ್ನು ಕೂಡ ರೂಪಿಸಬಹುದಾಗಿದೆ. ಶೈಕ್ಷಣಿಕ ಸಂಸ್ಥೆಗಳು ಹಾಗೂ ಉದ್ಯೋಗದಲ್ಲಿ ಮೀಸಲಾತಿ ನಿಯಮಗಳ ಉಲ್ಲಂಘನೆ ಕುರಿತ ದೂರುಗಳ ವಿಚಾರಣೆ ನಡೆಸಬಹುದು. ಪ್ರಸ್ತುತ ಈ ದೂರುಗಳನ್ನು ಪರಿಶಿಷ್ಟ ಜಾತಿಗಳ ಆಯೋಗವೇ ಪರಿಶೀಲಿಸುತ್ತಿದೆ. ಆಯೋಗ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಮೂರು ಸದಸ್ಯರನ್ನೊಳಗೊಂಡಿರಲಿದೆ.

## ಕೇಂದ್ರ ಪ್ರಾಯೋಜಿತ ಯೋಜನೆಗಳ ಸಂಖ್ಯೆ 28ಕ್ಕೆ ಇಳಿಕೆ

ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಕೇಂದ್ರ ಸರ್ಕಾರ 66 ರಿಂದ 28ಕ್ಕೆ ಇಳಿಸಿದೆ. 2016-17ನೇ ಸಾಲಿನಿಂದಲೇ ಈ ನಿರ್ಣಯ ಜಾರಿಗೆ ಬರಲಿದೆ. ಕೇಂದ್ರ ಪ್ರಾಯೋಜಿತ ಯೋಜನೆಗಳ ತರ್ಕಬದ್ಧತೆಗೆ ಮುಖ್ಯಮಂತ್ರಿಗಳ ಉಪಸಮಿತಿ ಶಿಫಾರಸ್ಸಿನ ಮೇರಿಗೆ ಯೋಜನೆಗಳ ಸಂಖ್ಯೆಯನ್ನು 66 ರಿಂದ 28ಕ್ಕೆ ಇಳಿಸಲಾಗಿದೆ.

**ಪ್ರಮುಖಾಂಶಗಳು**:

ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಕೋರ್ ಸ್ಕೀಂ (Core Scheme), ಕೋರ್ ಆಫ್ ದಿ ಕೋರ್ (Core of the core) ಮತ್ತು ಐಚ್ಛಿಕ ಯೋಜನೆಗಳೆಂದು ವಿಂಗಡಿಸಲಾಗಿದೆ. ಇವುಗಳಲ್ಲಿ ಕೋರ್ ಯೋಜನೆಗಳು 20, ಕೋರ್ ಆಫ್ ದಿ ಕೋರ್ 6 ಹಾಗೂ 2 ಐಚ್ಛಿಕ ಯೋಜನೆಗಳು ಸೇರಿವೆ.

- **ಕೋರ್ ಯೋಜನೆಗಳು**: ಕೋರ್ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯದ ಪಾಲು 60:40 ಇರಲಿದೆ. ಈಶಾನ್ಯ ಹಾಗೂ ಹಿಮಾಲಯ ರಾಜ್ಯಗಳಿಗೆ 90:10 ಇರಲಿದೆ.
- **ಕೋರ್ ಆಫ್ ದಿ ಕೋರ್ ಯೋಜನೆಗಳು**: ಈ ಯೋಜನೆಗಳಿಗೆ ಸಂಪೂರ್ಣ ಹಣವನ್ನು ಕೇಂದ್ರ ಸರ್ಕಾರವೇ ಭರಿಸಲಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ರಾಷ್ಟ್ರೀಯ ಸಾಮಾಜಿಕ ಸಹಾಯ ಯೋಜನೆ, ವಿಕಲಚೇತನರ ರಾಷ್ಟ್ರೀಯ ಕಾರ್ಯಕ್ರಮ ಇವು ಈ ಯೋಜನೆಯಡಿ ಬರಲಿವೆ.

www.karunaduexams.com

- **ಐಚ್ಛಿಕ ಯೋಜನೆಗಳು**: ಸಾಮಾಜಿಕ ರಕ್ಷಣೆ ಮತ್ತು ಸಾಮಾಜಿಕ ಸೇರ್ಪಡೆ ಯೋಜನೆಗಳು ಇದರಡಿ ಬರಲಿವೆ. ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯಗಳು 50:50 ಅನುಪಾತದಲ್ಲಿ ಖರ್ಚನ್ನು ಭರಿಸಲಿವೆ. ಈಶಾನ್ಯ ರಾಜ್ಯಗಳಿಗೆ ಈ ಅನುಪಾತ 80:20 ಇರಲಿದೆ.

**ಕೇಂದ್ರ ಪ್ರಾಯೋಜಿತ ಯೋಜನೆಗಳೆಂದರೇನು?**

ಕೇಂದ್ರ ಪ್ರಾಯೋಜಿತ ಯೋಜನೆಗಳೆಂದರೆ ಯೋಜನೆಯ ಬಹು ಪಾಲನ್ನು ಕೇಂದ್ರ ಸರ್ಕಾರ ಭರಿಸಿ ನಿಗದಿಪಡಿಸಿದ ಹಣವನ್ನು ರಾಜ್ಯ ಸರ್ಕಾರ ಭರಿಸಿ ಹಾಗೂ ರಾಜ್ಯ ಸರ್ಕಾರ ಅನುಷ್ಠಾನಗೊಳಿಸುವ ಯೋಜನೆಗಳಾಗಿವೆ.

**ಪ್ರತಿದಿನ ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ಪರಿಷ್ಕರಣೆ**



ಪೆಟ್ರೋಲ್ ಮತ್ತು ಡಿಸೇಲ್ ದರವನ್ನು ಮೇ 1ರಿಂದ ಪ್ರತಿದಿನವೂ ಅಂತಾರಾಷ್ಟ್ರೀಯ ಕಚ್ಚಾ ತೈಲ ಬೆಲೆಗೆ ಅನುಗುಣವಾಗಿ ಬೆಲೆ ಪರಿಷ್ಕರಣೆ ಮಾಡಲು ಸರ್ಕಾರಿ ಸ್ವಾಮ್ಯದ ತೈಲಸಂಸ್ಥೆಗಳು ನಿರ್ಧರಿಸಿವೆ. ಈ ನಿರ್ಣಯದಿಂದ ಗ್ರಾಹಕರು ಪ್ರತಿದಿನ ಹೊಸ ದರದಂತೆ ಖರೀದಿಸಬೇಕಾಗುತ್ತದೆ. ಇದು ದೇಶದ ಪ್ರಮುಖ ಐದು ನಗರಗಳಲ್ಲಿ ಮೊದಲಿಗೆ ಪ್ರಾಯೋಗಿಕವಾಗಿ ಜಾರಿಯಾಗಲಿದೆ ಎಂದು ವರದಿ ತಿಳಿಸಿದೆ. ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್(ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಹಾಗೂ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಗಳು ದೇಶಾದ್ಯಂತ ಸುಮಾರು 58 ಸಾವಿರ ಪೆಟ್ರೋಲ್ ಬಂಕ್ ಗಳನ್ನು ಹೊಂದಿದ್ದು, ಶೇ 95% ಪಾಲು ಹೊಂದಿರುವ ಈ ಸಂಸ್ಥೆಗಳು ಪ್ರಾಥಮಿಕ ಹಂತದಲ್ಲಿ ಪ್ರಾಯೋಗಿಕವಾಗಿ ದೇಶದ ಐದು ನಗರಗಳಲ್ಲಿ ಜಾರಿಗೆ ತರಲಿವೆ. ಪ್ರಾಯೋಗಿಕ ಪರೀಕ್ಷೆಯ ಫಲಿತಾಂಶವನ್ನು ಪರಿಗಣಿಸಿ ದೇಶದ ಇತರೆ ನಗರಗಳಿಗೆ ವಿಸ್ತರಿಸಲಾಗುವುದು.

**ಪ್ರಸ್ತುತ ದರ ನಿರ್ಧರಣೆ ಹೇಗೆ?**

ಪ್ರಸ್ತುತ ತೈಲ ನಿರ್ಧರಣೆಯ ಸ್ವಾತಂತ್ರವನ್ನು ತೈಲ ಸಂಸ್ಥೆಗಳು ಹೊಂದಿವೆ. ಪ್ರತಿ ತಿಂಗಳು 1ನೇ ದಿನಾಂಕ ಹಾಗೂ 16ನೇ ದಿನಾಂಕದಂದು ಅಂತಾರಾಷ್ಟ್ರೀಯ ತೈಲ ಬೆಲೆಯ ಸರಾಸರಿ ಪ್ರಮಾಣಕ್ಕೆ ಅನುಗುಣವಾಗಿ ತೈಲ ಬೆಲೆಯನ್ನು ಪರಿಷ್ಕರಿಸಲಾಗುತ್ತಿದೆ.

**ಯಾವ ನಗರಗಳು?**

ಪಾಂಡಿಚೇರಿ, ಆಂಧ್ರಪ್ರದೇಶದ ವೈಝಾಗ್, ರಾಜಸ್ಥಾನದ ಉದಯ್ ಪುರ್, ಜಾರ್ಖಂಡ್ ನ ಜೇಮ್ಶೆಡ್ಪುರ್ ಮತ್ತು ಚಂಡೀಗಢ್.

## ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್' ಸಂಸ್ಥೆಗೆ ಶಿಲಾನ್ಯಾಸ



ಪ್ರತಿಷ್ಠಿತ 'ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್' ಸಂಸ್ಥೆಗೆ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಶಿಲಾನ್ಯಾಸ ನೆರವೇರಿಸಿದರು. ಬೆಂಗಳೂರಿನ ವಿಶ್ವವಿದ್ಯಾಲಯದ ಆವರಣದಲ್ಲಿ ಈ ಸಂಸ್ಥೆ ತಲೆಯತ್ತಲಿದೆ.

**ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್' ಸಂಸ್ಥೆ:**

- ಅಂಬೇಡ್ಕರ್ ಅವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಓದಿದ ಮೊದಲ ಭಾರತೀಯ. ಆ ಕಾರಣಕ್ಕೆ ಅವರ ಹೆಸರನ್ನೇ ಸಂಸ್ಥೆಗೆ ಇಡಲಾಗಿದೆ.
- ಬೆಂಗಳೂರು ವಿಶ್ವವಿದ್ಯಾಲಯದ 43.35 ಎಕರೆ ಪ್ರದೇಶದಲ್ಲಿ ಈ ಸ್ವಾಯತ್ತ ಸಂಸ್ಥೆ ತಲೆ ಎತ್ತಲಿದೆ.
- ಮುಂದಿನ ಶೈಕ್ಷಣಿಕ ವರ್ಷದಿಂದಲೇ ತರಗತಿ ಆರಂಭವಾಗಲಿದ್ದು, ವಿಶ್ವವಿದ್ಯಾಲಯದ ಹಳೇ ಕಟ್ಟಡವನ್ನು ತಾತ್ಕಾಲಿಕವಾಗಿ ಒದಗಿಸಲಾಗಿದೆ.
- ಸ್ಕೂಲ್ ಆಫ್ ಎಕನಾಮಿಕ್ಸ್ ಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉನ್ನತ ಶಿಕ್ಷಣ ಇಲಾಖೆಗೆ ₹ 107 ಕೋಟಿ ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ₹ 17 ಕೋಟಿ ಸಂಸ್ಥೆಯ ಆರಂಭಿಕ ವೆಚ್ಚವಾಗಿ ಬಳಸಿಕೊಳ್ಳಲಾಗುತ್ತದೆ. ಉಳಿದ ₹ 90 ಕೋಟಿ ಹಣವನ್ನು ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ.

## ಮುಸ್ಲಿಂ/ಎಸ್.ಟಿ ಮೀಸಲಾತಿ ಹೆಚ್ಚಳಕ್ಕೆ ತೆಲಂಗಣ ಸರ್ಕಾರದಿಂದ ಮಸೂದೆ ಅಂಗೀಕಾರ



ಮುಸ್ಲಿಮರು ಮತ್ತು ಎಸ್.ಸಿ/ಎಸ್.ಟಿ ಜನಾಂಗಕ್ಕೆ ಶೈಕ್ಷಣಿಕ ಸಂಸ್ಥೆ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಹೆಚ್ಚಿಸುವ "ತೆಲಂಗಣ ಹಿಂದುಳಿದ ವರ್ಗ, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ (ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರಿ ಹುದ್ದೆಯಲ್ಲಿ ಸೀಟುಗಳ ಮೀಸಲಾತಿ)-2017 ಮಸೂದೆ ತೆಲಂಗಣ ವಿಧಾನಸಭೆಯಲ್ಲಿ ಅಂಗೀಕಾರಕೊಂಡಿದೆ.

- ಹೊಸ ಮಸೂದೆಯಡಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಮುಸ್ಲಿಂ ಸಮುದಾಯಕ್ಕೆ ಮೀಸಲಾತಿಯನ್ನು ಪ್ರಸ್ತುತ ಶೇ 4% ರಿಂದ ಶೇ 12% ಹೆಚ್ಚಿಸಲಾಗುವುದು.
- ಪರಿಶಿಷ್ಠ ಪಂಗಡಕ್ಕೆ ಮೀಸಲಾತಿಯನ್ನು ಶೇ 6% ರಿಂದ ಶೇ 10%ಕ್ಕೆ ಹೆಚ್ಚಿಸಲಾಗುವುದು.
- ಹೊಸ ಮಸೂದೆಯಿಂದ ಒಟ್ಟಾರೆ ಮೀಸಲಾತಿ ಸುಪ್ರೀಂ ಕೋರ್ಟ್ ವಿಧಿಸಿರುವ ಪ್ರಮಾಣ ಶೇ 50% ಮಿತಿಯನ್ನು ಮೀರಲಿದ್ದು, ಶೇ 62% ಇರಲಿದೆ.
- ಹೊಸ ಮಸೂದೆಯು ರಾಷ್ಟ್ರಪತಿಗಳ ಅನುಮೋದನೆ ಪಡೆದ ನಂತರ ಕಾನೂನು ಆಗಿ ಜಾರಿಗೆ ಬರಲಿದೆ. ಆದರೆ ಮೀಸಲಾತಿ ಪ್ರಮಾಣ ಶೇ 50% ಮೀರಿರುವ ಕಾರಣ ಮಸೂದೆಯನ್ನು

www.karunaduexams.com

ನ್ಯಾಯಾಂಗ ಪರಾಮರ್ಶೆಯಿಂದ ರಕ್ಷಿಸುವ ಸಲುವಾಗಿ ಸಂವಿಧಾನದ 9ನೇ ಭಾಗದಡಿ ಸೇರಿಸಲು ತೆಲಂಗಣ ಸರ್ಕಾರ ಕೇಂದ್ರ ಸರ್ಕಾರದ ಮೊರೆ ಹೋಗಿದೆ.

- ತಮಿಳುನಾಡು ಹಾಗೂ ಜಾರ್ಖಂಡ್ ರಾಜ್ಯಗಳಲ್ಲಿ ಈಗಾಗಲೇ ಮೀಸಲಾತಿ ಪ್ರಮಾಣ ಶೇ 50% ಮೀರಿರುವುದು ಕಾಣಬಹುದಾಗಿದೆ.

**ನಾಡಪ್ರಭು ರಾಷ್ಟ್ರೀಯ ಕೆಂಪೇಗೌಡ ಉತ್ಸವಕ್ಕೆ ರಾಷ್ಟ್ರಪತಿ ಚಾಲನೆ**



ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಕೆಂಪೇಗೌಡ ಉತ್ಸವಕ್ಕೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಚಾಲನೆ ನೀಡಿದರು.

**ಕೆಂಪೇಗೌಡ ಬಗ್ಗೆ:**

- ಹಿರಿಯ ಕೆಂಪೇಗೌಡರು (1510–1569) ಅಥವಾ ಮೊದಲನೆಯ ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜ್ಯವಾಗಿದ್ದ ಯಲಹಂಕ ನಾಡಿನ ಪಾಳೇಗಾರರಾಗಿದ್ದರು.
- ನಾಡಪ್ರಭು ಕೆಂಪನಂಜೇಗೌಡ ಹಾಗೂ ಲಿಂಗಾಂಬೆ ದಂಪತಿಗಳಿಗೆ 1510ರಲ್ಲಿ ಯಲಹಂಕದಲ್ಲಿ ಜನಿಸಿದರು.
- ಬೆಂಗಳೂರನ್ನು ನಿರ್ಮಿಸಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. ಬೆಂಗಳೂರಿನಲ್ಲಿ ಅನೇಕ ಕೆರೆಗಳು, ದೇವಸ್ಥಾನಗಳು ಹಾಗೂ ಕೋಟೆ ಮಹಾದ್ವಾರಗಳನ್ನು ನಿರ್ಮಿಸಿದರು. 1532ರಲ್ಲಿ ವಿಜಯನಗರ ಸಾಮ್ರಾಜ್ಯದ ಅಚ್ಯುತರಾಯರು ಬೆಂಗಳೂರು ನಗರವನ್ನು ಕಟ್ಟಲು ಕೆಂಪೇಗೌಡರಿಗೆ ಸೂಚಿಸಿದರು.
- ಬೆಂಗಳೂರಿನ ಪ್ರಸಿದ್ಧ ಬಸವನಗುಡಿ ಬಸವ ದೇವಸ್ಥಾನ, ಹಲಸೂರು ಸೋಮೇಶ್ವರ ದೇವಸ್ಥಾನ, ಗವಿ ಗಂಗಾಧೇಶ್ವರ ದೇವಸ್ಥಾನಗಳು ಕೆಂಪೇಗೌಡರ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಈಗಲೂ ಬಲಿಷ್ಠವಾಗಿವೆ.
- 1550 ರಲ್ಲಿ ಕೆಂಪೇಗೌಡರವರು "ಪಗೊಡ" ಎಂಬ ನಾಣ್ಯಗಳನ್ನು ಹೊರತಂದರು. ಇದು ವಿಜಯನಗರ ರಾಜರಲ್ಲಿ ಅಸಮಾಧಾನಕ್ಕೆ ಕಾರಣವಾಯಿತು.
- ಸುಮಾರು ಮೂರು ದಶಕಗಳ ಅವಿಸ್ಮರಣಿಯ ರಾಜ್ಯ ಆಳ್ವಿಕೆ ಮಾಡಿದ ಕೆಂಪೇಗೌಡರು 1569ರಲ್ಲಿ ನಿಧನರಾದರು.

www.karunaduexams.com

**<u>ವಿಸ್ತಡೋಮ್ ಗಾಜು ಲೇಪಿತ (Vistadome Glass Ceiling) ರೈಲು ಬೋಗಿಗಳಿಗೆ ಚಾಲನೆ</u>**



ದೇಶದ ಮೊದಲ ಗಾಜು ಲೇಪಿತ ರೈಲು ಬೋಗಿ ವಿಶಾಖಪಟ್ಟಣಂ-ಕಿರಂದುಲ್ ಪ್ಯಾಸೇಂಜರ್ ರೈಲಿಗೆ ರೈಲ್ವೆ ಸಚಿವ ಸುರೇಶ್ ಪ್ರಭು ಅವರು ಭುಬನೇಶ್ವರದಿಂದ ವಿಡಿಯೋ ಮೂಲಕ ಉದ್ಘಾಟನೆ ಮಾಡಿದರು. ದೇಶದಲ್ಲೆ ಮೊದಲ ಬಾರಿಗೆ ವಿಸ್ತಡೋಮ್ ಗಾಜು ಲೇಪಿತ ಬೋಗಿಯನ್ನು ರೈಲ್ವೆ ಇಲಾಖೆ ಪರಿಚಯಿಸಿದ್ದು, ಪ್ರವಾಸೋದ್ಯಮವನ್ನು ಉತ್ತೇಜಿಸುವುದು ಇದರ ಉದ್ದೇಶ. 40 ಆಸನಗಳನ್ನು ಹೊಂದಿರುವ ಈ ಬೋಗಿಯನ್ನು ಚೆನ್ನೈನ "ಇಂಟಿಗ್ರಲ್ ಕೋಚ್ ಪ್ಯಾಕ್ಟರಿ" ತಯಾರಿಸಿದೆ. ಸುಮಾರು ರೂ 3.38 ಕೋಟಿ ವೆಚ್ಚದಲ್ಲಿ ಈ ಬೋಗಿಯನ್ನು ತಯಾರಿಸಲಾಗಿದೆ. ಪ್ರಾಯೋಗಿಕವಾಗಿ ಒಂದು ಬೋಗಿಯನ್ನು ಮಾತ್ರ ಅಳವಡಿಸಲಾಗಿದ್ದು, ಮುಂದಿನ ದಿನಗಳಲ್ಲಿ ಬೇರೆ ಮಾರ್ಗಗಳ ರೈಲಿಗೂ ಅಳವಡಿಸಲಾಗುವುದು.

**ವೈಶಿಷ್ಟ್ಯತೆಗಳು:**

- ವಿಸ್ತಡೋಮ್ ಬೋಗಿ ಹಲವು ವೈಶಿಷ್ಟ್ಯತೆಗಳಿಂದ ಕೂಡಿದೆ. ಗಾಜಿನ ಚಾವಣಿ, ಎಲ್ಇಡಿ ದೀಪಗಳು, ತಿರುಗುವ ಆಸನಗಳು, ಜಿಪಿಎಸ್ ಆಧಾರಿತ ಮಾಹಿತಿ ಹಾಗೂ ಡೊಡ್ಡ ಗಾಜಿನ ಕಿಟಕಿಗಳನ್ನು ಹೊಂದಿದೆ.
- ವಿಶಾಖಪಟ್ಟಂನಿಂದ ಅರಕು ವ್ಯಾಲಿಯ ವರಗಿನ 128 ಕಿ.ಮೀ ಉದ್ದದ ರೈಲು ಮಾರ್ಗದ ಸೊಬಗನ್ನು ಸವಿಯಬಹುದಾಗಿದೆ.
- 360 ಡಿಗ್ರಿ ತಿರುಗುವ ಆಸನವನ್ನು ಹೊಂದಿರುವುದು ಬೋಗಿಯ ಪ್ರಮುಖ ವಿಶೇಷವಾಗಿದ್ದು, ಪ್ರವಾಸಿಗರಿಗೆ ಅದ್ಭುತ ಅನುಭವ ನೀಡಲಿದೆ.

**<u>ಮೇ 1 ರಿಂದ ಕೆಂಪು ದೀಪಗಳ ವಾಹನಗಳ ಬಳಕೆ ಮೇಲೆ ನಿಷೇಧ</u>**



ಕೆಂಪು ದೀಪದ ವಾಹನ ಬಳಕೆ ಮೇಲೆ ಕೇಂದ್ರ ಸಚಿವ ಸಂಪುಟ ನಿಷೇಧವೇರುವ ಮಹತ್ವದ ನಿರ್ಣಯವನ್ನು ಕೈಗೊಂಡಿದ್ದು, ಮೇ 1ರಿಂದ ಈ ನಿರ್ಧಾರ ಜಾರಿಗೆ ಬರಲಿದೆ. ರಾಷ್ಟ್ರಪತಿ, ಉಪರಾಷ್ಟ್ರಪತಿ ಹಾಗೂ ಸುಪ್ರೀಂಕೋರ್ಟಿನ ಮುಖ್ಯನ್ಯಾಯಾಧೀಶರಿಗೆ ಮಾತ್ರ ಈ ನಿಷೇಧ ಅನ್ವಯವಾಗುವುದಿಲ್ಲ. ಅಲ್ಲದೆ ತುರ್ತು ವಾಹನಿಗಳಾದ ಅಗ್ನಿಶಾಮಕ ದಳ, ಅಂಬುಲೆನ್ಸ್, ಪೊಲೀಸ್ ವಾಹನಗಳು ಕೆಂಪು ದೀಪದ ವಾಹನವನ್ನು ಬಳಸಬಹುದಾಗಿದೆ. ಪ್ರಧಾನಿ, ಕೇಂದ್ರ ಸಚಿವರು, ಮುಖ್ಯಮಂತ್ರಿಗಳು, ರಾಜ್ಯ ಸಚಿವರು, ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಾಧೀಶರುಗಳಿಗೆ ಈ ನಿಷೇಧ ಅನ್ವಯವಾಗಲಿದೆ. ದೇಶದಲ್ಲಿ ಜಾರಿಯಲ್ಲಿರುವ ವಿಐಪಿ ಸಂಸ್ಕೃತಿಯನ್ನು ತೊಡೆದುಹಾಕುವ ಸಲುವಾಗಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.


www.karunaduexams.com

**ಹಿನ್ನಲೆ**:

ಸುಪ್ರೀಂಕೋರ್ಟ್ 2013 ರಲ್ಲಿ ಮೋಟಾರು ವಾಹನ ನಿಯಮಗಳಿಗೆ ತಿದ್ದುಪಡಿ ತಂದು ಕೆಂಪು ದೀಪ ವಾಹನ ಬಳಕೆ ಮೇಲೆ ನಿಷೇಧವೇರುವಂತೆ ರಾಜ್ಯಗಳಿಗೆ ಸೂಚಿಸಿತ್ತು. ಕೇವಲ ಸಂವಿಧಾನತ್ಮಕ ಅಧಿಕಾರಿಗಳಿಗೆ ಮಾತ್ರ ಕೆಂಪು ದೀಪದ ವಾಹನ ಬಳಸಲು ಆದೇಶ ನೀಡಲಾಗಿತ್ತು. 2001ರಲ್ಲಿ ಸಂಸತ್ತಿನ ಮೇಲೆ ದಾಳಿ ನಡೆಸಿದ ನಂತರ ಕೇಂದ್ರ ಸಚಿವ ಸಂಪುಟದ ಈ ನಿರ್ಣಯ ಮಹತ್ವದಾಗಿದೆ. ಏಕೆಂದರೆ ಭಯೋತ್ಪಾದಕರು ಕೆಂಪು ದೀಪ ವಾಹನ ಬಳಸಿ ಸಂಸತ್ತಿಗೆ ಪ್ರವೇಶಿಸಿದ್ದರು.

- ಈಗಾಗಲೇ ದೆಹಲಿ, ಪಂಜಾಬ್, ಉತ್ತರ ಪ್ರದೇಶ ರಾಜ್ಯಗಳಲ್ಲಿ ಕೆಂಪು ದೀಪದ ವಾಹನ ಬಳಸುವುದನ್ನು ನಿಷೇಧಿಸಲಾಗಿದೆ.

**ಶ್ರೀಮಂತ ಶಂಕರದೇವ ಬತದ್ರವ ರವರ ಜನ್ಮಸ್ಥಳವನ್ನು ಅಭಿವೃದ್ಧಿಪಡಿಸಲು ಅಸ್ಸಾಂ ಸರ್ಕಾರ ಚಿಂತನೆ**



ಅಸ್ಸಾಂನ 15-16ನೇ ಶತಮಾನದ ಸಮಾಜ ಸುಧಾರಕ ಶ್ರೀಮಂತ ಶಂಕರದೇವ ಬತ್ರದವ ಅವರ ಜನ್ಮಸ್ಥಳವನ್ನು ಅಂತಾರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಹಾಗೂ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರವಾಸೋದ್ಯಮ ವಲಯದಲ್ಲಿ ಗುರುತಿಸುವಂತೆ ಮಾಡಲುಅಸ್ಸಾಂ ಸರ್ಕಾರ ನಿರ್ಧರಿಸಿದೆ. ಪಂಜಾಬಿನ ಅಮೃತಸರದ ಮಾದರಿಯಲ್ಲೆ ಈ ಸ್ಥಳವನ್ನು ಅಭಿವೃದ್ಧಿಪಡಿಸಲಾಗುವುದು ಹಾಗೂ ಧಾರ್ಮಿಕ ಹಾಗೂ ಸಾಂಸ್ಕೃತಿಕ ತಾಣವನ್ನಾಗಿ ಪರಿವರ್ತಿಸಲಾಗುವುದು.

**ಶ್ರೀಮಂತ ಶಂಕರದೇವ:**

- ಶ್ರೀಮಂತ ಶಂಕರದೇವ (1449-1568) ರವರು 15-16ನೇ ಶತಮಾನದ ಸಮಾಜ ಹಾಗೂ ಧಾರ್ಮಿಕ ಸುಧಾರಕ, ಕವಿ, ನಾಟಕಕಾರ ಮತ್ತು ವೈಷ್ಣವ ಪಂಥದ ಪ್ರಚಾರಕ. ಶಂಕರದೇವ ಅವರು ಕ್ರಿ.ಶ1449ರಲ್ಲಿ ಅಲಿಪುಖುರಿ-ಬೊಡೊರ್ವದಲ್ಲಿ ಜನಸಿದರು.
- ಗುರುನಾನಕ್, ರಮಾನಂದ, ಕಬೀರ, ಬಸವಣ್ಣ ಹಾಗೂ ಚೈತನ್ಯ ಮಹಾಪ್ರಭು ರಂತೆ ಶಂಕರದೇವ ಅವರು ಅಸ್ಸಾಂನಲ್ಲಿ ಭಕ್ತಿ ಚಳುವಳಿ ಆರಂಭಗೊಳ್ಳಲು ಪ್ರಮುಖರು. ಭಗವತ ಪುರಾಣ ಇವರ ತತ್ವ.
- ಇದಲ್ಲದೆ ಬೊರ್ಗಿತ್ ಹೆಸರಿನ ಹೊಸ ಸ್ವರೂಪದ ಸಂಗೀತಾ ಹಾಗೂ ಅಂಕಿತ್ ನಾಥ್, ಭೋನಾ ಹೆಸರಿನ ನಾಟಕ ಪ್ರದರ್ಶನ ಹಾಗೂ ಸತ್ರಿಯಾ ಹೆಸರಿನ ನೃತ್ಯ ರೂಪ ಮತ್ತು ಬಜ್ರವಳಿ ಸಾಹಿತ್ಯ ಭಾಷೆಯನ್ನು ಪರಿಚಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

www.karunaduexams.com

- ಶಂಕರದೇವ ರವರ ಬೋಧನೆ ಇಂದಿಗೂ ಅಸ್ಸಾಂನಲ್ಲಿ ಮನ್ನಣೆ ಹೊಂದಿದ್ದು, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರಭಾವ ಬೀರುತ್ತಿದೆ.

**<u>ರಾಷ್ಟ್ರೀಯ ಸುರಕ್ಷತಾ ಮಂಡಳಿ NSCI ಸುರಕ್ಷತಾ ಪ್ರಶಸ್ತಿ 2016</u>**



ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಖಾತೆ ಸಚಿವ ಬಂಡಾರು ದತ್ತಾತ್ರೇಯ ಅವರು 2016 ರಾಷ್ಟ್ರೀಯ ಸುರಕ್ಷತಾ ಮಂಡಳಿ NSCI ಸುರಕ್ಷತಾ ಪ್ರಶಸ್ತಿಯನ್ನು 70 ಸಂಸ್ಥೆಗಳಿಗೆ ನವದೆಹಲಿಯಲ್ಲಿ ಪ್ರಧಾನ ಮಾಡಿದರು. ಇದಲ್ಲದೆ ನಿರ್ಮಾಣ ವಲಯದ12 ಸಂಸ್ಥೆಗಳಿಗೆ ಪ್ರಶಸ್ತಿಯನ್ನು ನೀಡಲಾಯಿತು. ಪ್ರಶಸ್ತಿಯನ್ನು ಈ ಕೆಳಕಂಡ ನಾಲ್ಕು ವಿಭಾಗದಲ್ಲಿ ನೀಡಲಾಯಿತು.

- ಸರ್ವಶ್ರೇಷ್ಠ ಸುರಕ್ಷಾ ಪುರಸ್ಕಾರ
- ಶ್ರೇಷ್ಠ ಸುರಕ್ಷಾ ಪುರಸ್ಕಾರ
- ಸುರಕ್ಷಾ ಪುರಸ್ಕಾರ
- ಪ್ರಶಂಸ ಪತ್ರ

**ಉತ್ಪಾದನ ವಲಯ**: ಇಂಡಿಯನ್ ಆಯಿಲ್ ನ ದಿಗ್ಬಯಿ ತೈಲ ಶುದ್ದೀಕರಣ ಘಟಕ, ನ್ಯಾಷನಲ್ ಫರ್ಟಿಲೈಸರ್, ಪಾಣಿಪತ್, ಕರ್ನಾಟಕದ ಕೈಗಾ ವಿದ್ಯುತ್ ಉತ್ಪಾದನ ಘಟಕಕ್ಕೆ ಪ್ರಶಸ್ತಿ ಲಭಿಸಿದೆ.

**ನಿರ್ಮಾಣ ವಲಯ:** ಗೋದ್ರೆಜ್ & ಬಾಯ್ಸ್ ಮ್ಯನುಫಾಕ್ಚರಿಂಗ್ ಕೊ ಲಿಮಿಟೆಡ್. ಎಲ್ & ಟಿ ಲಿಮಿಟೆಡ್ ರಾವತ್ಬಾತ & ಚಿತ್ತೊರಘರ್

**ಲಘು, ಸಣ್ಣ ಮತ್ತು ಮಧ್ಯಮ ವಾಣಿಜ್ಯೋಧಮ**: ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್, ಥಾಣೆಗೆ ಸರ್ವಶ್ರೇಷ್ಠ ಸುರಕ್ಷಾ ಪ್ರಶಸ್ತಿ ಲಭಿಸಿದೆ.

ಪ್ರಶಸ್ತಿ ಪಡೆದಿರುವ ಮೇಲಿನ ಸಂಸ್ಥೆಗಳಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಯಾವುದೇ ಪ್ರಾಣ ಹಾನಿ ಅಪಘಾತ ಪ್ರಕರಣಗಳು ನಡೆದಿಲ್ಲ.

**<u>ಏಪ್ರಿಲ್ 24: ಪಂಚಾಯತ್ ರಾಜ್ ದಿವಸ್</u>**




ಭಾರತದಲ್ಲಿ ಪ್ರತಿ ವರ್ಷ ಪಂಚಾಯತ್ ರಾಜ್ ದಿವಸವನ್ನು ಏಪ್ರಿಲ್ 24 ರಂದು ಆಚರಿಸಲಾಗುತ್ತದೆ. ಸಂವಿಧಾನದ 73ನೇ ತಿದ್ದುಪಡಿ ಕಾಯಿದೆ,-1992, ಏಪ್ರಿಲ್ 24, 1993ರಂದು ಜಾರಿಗೆ ಬಂದ ಕಾರಣ ಈ ದಿನದಂದು ಪಂಚಾಯತ್ ರಾಜ್ ದಿವಸವನ್ನು ಆಚರಿಸಲಾಗುತ್ತದೆ. ಸಂವಿಧಾನ 73ನೇ ತಿದ್ದುಪಡಿ ಜಾರಿಗೆ ಬಂದಿದ್ದು, ಭಾರತ ಇತಿಹಾಸದಲ್ಲಿ ಒಂದು ಅವಿಸ್ಮರಣಿಯ ಸಾಧನೆ ಎಂದೇ ಹೇಳಲಾಗಿದೆ. ಈ ಕಾಯಿದೆಯಿಂದಾಗಿ ರಾಜ್ಯಗಳು ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತಿಗಳನ್ನು ರಚಿಸಿ, ಅವುಗಳ ಕಾರ್ಯನಿರ್ವಹಣೆಗೆ ಅಗತ್ಯವಿರುವ ಅಧಿಕಾರಗಳನ್ನು ಒದಗಿಸಿ ವಿಕೇಂದ್ರಿಕರಣ ಸರ್ಕಾರವನ್ನು ರಚಿಸಿವೆ. ಕೇಂದ್ರ ಪಂಚಾಯತ್ ರಾಜ್ ಸಚಿವಾಲಯ ಪ್ರತಿ ವರ್ಷ ಈ ದಿನದಂದು ರಾಷ್ಟ್ರೀಯ ಸಮಾವೇಶವನ್ನು ಆಯೋಜಿಸುವುದರೊಂದಿಗೆ ಅತ್ಯುತ್ತಮ ಸಾಧನೆ ಮಾಡಿದ ಗ್ರಾಮ

www.karunaduexams.com

ಪಂಚಾಯತಿಗಳಿಗೆ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರ/ಪಂಚಾಯತ್ ಸಶಕ್ತೀಕರಣ ಪುರಸ್ಕಾರವನ್ನು ನೀಡುತ್ತಿದೆ.

**ಹಿನ್ನಲೆ**:

- ಪ್ರಪ್ರಥಮ ರಾಷ್ಟ್ರೀಯ ಪಂಚಾಯತ್ ದಿವಸವನ್ನು 2010ರಲ್ಲಿ ಆಚರಿಸಲಾಯಿತು.
- ಸಂವಿಧಾನದ 73ನೇ ತಿದ್ದುಪಡಿ ಕಾಯಿದೆಯಡಿ ಸಂವಿಧಾನದಲ್ಲಿ ಹೊಸದಾಗಿ "ಭಾಗ IX" ಅಳವಡಿಸಲಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಿಸಿದಂತೆ "ವಿಧಿ 243 ರಿಂದ ವಿಧಿ 243 (O) ಅನ್ನು ಈ ಭಾಗ ಒಳಗೊಂಡಿದೆ.

## ಗೋವುಗಳಿಗೂ ಆಧಾರ ಮಾದರಿಯ ಗುರುತಿನ ಸಂಖ್ಯೆ ನೀಡಲು ಕೇಂದ್ರ ಸರ್ಕಾರ ನಿರ್ಧಾರ



ಗೋವುಗಳ ರಕ್ಷಣೆ ಮತ್ತು ಅಕ್ರಮ ಸಾಗಾಟವನ್ನು ತಪ್ಪಿಸಲು ಆಧಾರ್ ನಂತಹ ಗುರುತು ಸಂಖ್ಯೆಯನ್ನು ನೀಡುವಂತೆ ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಗೋವುಗಳಿಗೂ ಗುರುತಿನ ಸಂಖ್ಯೆಯನ್ನು ನೀಡುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿಗೆ ಸಲ್ಲಿಸಿದೆ. ಗೃಹ ಸಚಿವಾಲಯ ರಚಿಸಿದ್ದ ಸಮಿತಿಯು ಆಗಸ್ಟ 2016ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಅದರಂತೆ ಆಯಾ ಗೋವುಗಳ ವಯಸ್ಸು, ತಳಿ, ಲಿಂಗ, ಸ್ಥಳ, ಎತ್ತರ, ದೇಹ, ಬಣ್ಣ, ಕೊಂಬುವಿನತಹ ಇತರೆ ಮಾಹಿತಿ ಈ ಆಧಾರ್ ಕಾರ್ಡ್ ನಲ್ಲಿ ಇರಲಿದೆ. ಪಾಲಿಯುರೇಥಿನ್ ಟ್ಯಾಗ್ ರೂಪದಲ್ಲಿ ಗುರುತಿನ ಸಂಖ್ಯೆ ಇರಲಿದೆ. ಇದರ ಜೊತೆಗೆ ನೋಂದಣಿ ದಾಖಲೆಯನ್ನು ಹಸುವಿನ ಮಾಲೀಕನು ನಿರ್ವಹಿಸಬೇಕಿದ್ದು, ಮಾರಾಟದ ವೇಳೆ ಇದನ್ನು ವರ್ಗಾಯಿಸಬಹುದಾಗಿದೆ. ಅಖಿಲ ಭಾರತ ಕೃಷಿ ಗೋಸೇವಾ ಸಂಘ ಸಲ್ಲಿಸಿದ್ದ ಪಿಐಎಲ್ ಅರ್ಜಿ ವಿಚಾರಣೆ ವೇಳೆ ಕೇಂದ್ರ ಸರ್ಕಾರ ಈ ವಿಚಾರವನ್ನು ಸುಪ್ರೀಂ ಕೋರ್ಟಿಗೆ ತಿಳಿಸಿದೆ.

**ಅವಶ್ಯಕತೆ**

ಗುರುತಿನ ಸಂಖ್ಯೆಯಿಂದಾಗಿ ಭಾರತ- ಬಾಂಗ್ಲಾದೇಶದ ಗಡಿಭಾಗದಲ್ಲಿ ನಡೆಯುವ ಗೋವುಗಳ ಕಳ್ಳಸಾಗಾಣಿಕೆ, ಮಾರಾಟವನ್ನು ತಪ್ಪಿಸಬಹುದು ಎಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್ ಗೆ ಸಲ್ಲಿಸಿರುವ ವರದಿಯಲ್ಲಿ ಹೇಳಿದೆ.

## ಈಶಾನ್ಯ ಭಾರತದ ಅತಿ ದೊಡ್ಡ IT ಹಬ್ ಗೆ ತ್ರಿಪುರಾದಲ್ಲಿ ಚಾಲನೆ



ಈಶಾನ್ಯ ಭಾರತದ ಆರನೇ ಹಾಗೂ ಅತಿ ದೊಡ್ಡ ಮಾಹಿತಿ ತಂತ್ರಜ್ಞಾನ ಹಬ್ ಅನ್ನು ತ್ರಿಪುರಾದ ಅಗರ್ತಲಾದಲ್ಲಿ ಉದ್ಘಾಟಿಸಲಾಯಿತು. ಸುಮಾರು ರೂ 50 ಕೋಟಿ ವೆಚ್ಚದಲ್ಲಿ ಈ ಹಬ್ ನಿರ್ಮಾಣಗೊಂಡಿದೆ. ಉದ್ಯೋಗವಕಾಶ ಹಾಗೂ ಇ-ಆಡಳಿತವನ್ನು ಬೆಂಬಲಿಸುವುದರ ಜೊತೆಗೆ ಸಾಫ್ಟ ವೇರ್ ತಂತ್ರಜ್ಞಾನವನ್ನು ರಫ್ತು ಮಾಡುವ ಸಲುವಾಗಿ ಈ ಹಬ್ ಗೆ ಚಾಲನೆ ನೀಡಲಾಗಿದೆ. ಇದರಿಂದ ಈಶಾನ್ಯ ಭಾಗದ ಯುವ ಜನತೆಗೆ ಹೆಚ್ಚಿನ ಉದ್ಯೋಗವಕಾಶ ಸೃಷ್ಟಿಯಾಗುವುದರ ಜೊತೆಗೆ

ಈ ಭಾಗಕ್ಕೆ ಇ-ಆಡಳಿತ ವಿಸ್ತರಣೆಗೂ ಸಹಾಯವಾಗಲಿದೆ. ಈಶಾನ್ಯ ಭಾಗದಲ್ಲಿ ಇದು ಅತಿ ದೊಡ್ಡ ಐಟಿ ಹಬ್ ಆಗಿದೆ.

**ಸಾಫ್ಟ್ ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ:** ಕೇಂದ್ರ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದಡಿ ರಾಜ್ಯ ಸರ್ಕಾರಗಳಿಗೆ ಸಾಫ್ಟ್ ವೇರ್ ಹಬ್ ಗಳನ್ನು ಅಭಿವೃದ್ದಿಪಡಿಸಲು ತಂತ್ರಜ್ಞಾನ ವಿನಿಮಯವನ್ನು ಮಾಡಿಕೊಳ್ಳಲಾಗುತ್ತಿದೆ.

**ಅವಶ್ಯಕತೆ**:

ಇಂಗ್ಲೀಷ್ ಭಾಷೆ ನೈಪುಣ್ಯತೆ ಹೊಂದಿರುವ ಐಟಿ ಮಾನವ ಸಂಪನ್ಮೂಲ ತ್ರಿಪುರದಲ್ಲಿ ಹೇರಳವಾಗಿದೆ. ಆದರೆ ಸಾವಿರಾರು ಜನರು ಬೆಂಗಳೂರು, ಹೈದ್ರಾಬಾದಿನಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಪ್ರದೇಶದಲ್ಲಿ ಐಟಿ ಹಬ್ ಸ್ಥಾಪನೆಯಿಂದ ಕೇವಲ ತ್ರಿಪುರದವರಿಗೆ ಮಾತ್ರವಲ್ಲದೇ ಇತರೆ ಈಶಾನ್ಯ ರಾಜ್ಯದವರಿಗೂ ಅನುಕೂಲವಾಗಲಿದೆ.

**ಉಡಾನ್ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಚಾಲನೆ**




ಸಾಮಾನ್ಯ ಜನರಿಗೂ ಕಡಿಮೆ ದರದಲ್ಲಿ ವಿಮಾನ ಯಾನ ಸೌಲಭ್ಯ ಕಲ್ಪಿಸುವ ಕೇಂದ್ರ ಸರ್ಕಾರದ ಮಹತ್ವದ ಉಡಾನ್ ಯೋಜನೆಗೆ ಶಿಮ್ಲಾದ ಹೊರವಲಯದಲ್ಲಿರುವ ಜುಬ್ಬರಹಟ್ಟಿ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದರು. ನವದೆಹಲಿ-ಶಿಮ್ಲಾ ನಡುವಿನ ಪ್ರಪ್ರಥಮ ಉಡಾನ್ ವಿಮಾನ ಹಾರಾಟವನ್ನು ಮೋದಿ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಕಡಪಾ-ಹೈದರಾಬಾದ್ ಮತ್ತು ನಾಂದೇಡ್-ಹೈದರಾಬಾದ್ ಉಡಾನ್ ಉದ್ಘಾಟನಾ ಹಾರಾಟಕ್ಕೆ ಚಾಲನೆ ನೀಡಲಾಯಿತು.

**ಉಡಾನ್ ಯೋಜನೆ:**

ಸಾಮಾನ್ಯ ಜನರಿಗೂ ವಿಮಾನಯಾನ ಸೇವೆ ಕಲ್ಪಿಸಲು ದೇಶದ 45 ಬಳಸದ ಹಾಗೂ ಕಡಿಮೆ ಬಳಸಿರುವ ವಿಮಾನ ನಿಲ್ದಾಣಗಳಿಗೆ ಉಡಾನ್ ಯೋಜನೆಯಡಿ ಸಂಪರ್ಕ ಕಲ್ಪಿಸಲಾಗುವುದು. ಈ ಯೋಜನೆಯಡಿ ಸಂಪರ್ಕ ಕಲ್ಪಿಸಲಿರುವ ಕೆಲವು ವಿಮಾನ ನಿಲ್ದಾಣಗಳೆಂದರೆ ಭಾತಿಂದ, ಭಾವನಗರ್, ದುರ್ಗಾಪುರ, ಜೈಸ್ಲ್ಮೇರ್, ಪುದುಚೇರಿ ಮತ್ತು ಶಿಮ್ಲಾ.

ಈ ಯೋಜನೆಯಡಿ ಐದು ವಿಮಾನಯಾನ ಸಂಸ್ಥೆಗಳು 128 ಮಾರ್ಗಗಳ ಮೂಲಕ ಸೇವೆಯನ್ನು ಒದಗಿಸಲಿವೆ. ಈ ಐದು ಸಂಸ್ಥೆಗಳೆಂದರೆ ಏರ್ ಇಂಡಿಯಾ ಮತ್ತು ಅಂಗ ಸಂಸ್ಥೆಗಳು, ಏರ್ ಡೆಕ್ಕನ್, ಏರ್ ಒಡಿಶಾ, ಟರ್ಬೊ ಮೆಗಾ ಮತ್ತು ಸ್ಪೈಸ್ ಜೆಟ್. ಏರ್ ಒಡಿಶಾ -50, ಏರ್ ಡೆಕ್ಕನ್- 34, ಟರ್ಬೊ ಮೇಘಾ ಏರ್ ವೇಸ್ -18, ಏರ್ ಇಂಡಿಯಾದ ಅಲಯನ್ಸ್ ಏರ್ -15 ಮತ್ತು ಸ್ಪೈಸ್ ಜೆಟ್- 11 ವಿಮಾನ ಮಾರ್ಗಗಳಲ್ಲಿ ಕಾರ್ಯಾಚರಣೆ ನಡೆಸಲಿವೆ.

ಯೋಜನೆಯಡಿ 500 ಕಿ.ಮೀ ದೂರದ ಒಂದು ಗಂಟೆ ಪ್ರಯಾಣಕ್ಕೆ ರೂ 2500 ನಿಗದಿ ಪಡಿಸಲಾಗಿದೆ. ಇದಕ್ಕಿಂತ ದೂರದ ಪ್ರಯಾಣ ಮತ್ತು ಸಮಯಕ್ಕೆ ಬೇರೆ ಬೇರೆ ದರ ಅನ್ವಯವಾಗಲಿದೆ.

www.karunaduexams.com

ಒಬ್ಬ ವ್ಯಕ್ತಿಯು 9 ರಿಂದ 40 ಸೀಟುಗಳಿಗೆ ಟಿಕೆಟ್ ಗಳನ್ನು ಖರೀದಿಸಬಹುದಾಗಿದೆ. ಆದರೆ ಇದರಲ್ಲಿ ಶೇ 50% ಟಿಕೆಟ್ ಗಳಿಗೆ ಮಾತ್ರ ರೂ 2500/ಗಂಟೆಗೆ ಅನ್ವಯವಾಗಲಿದೆ.

**ಉಡಾನ್**:

ಉಡಾನ್ "ಉಡೇ ದೇಶ್ ಕಾ ಅಮ್ ನಾಗರೀಕ್" ಪ್ರಾದೇಶಿಕ ವಿಮಾನಯಾನ ಕಲ್ಪಿಸುವ ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾಗಿದ್ದು ಅಕ್ಟೋಬರ್ 2016 ರಂದು ಚಾಲನೆ ನೀಡಲಾಯಿತು. ಜೂನ್ 15, 2016 ರಲ್ಲಿ ಬಿಡುಗಡೆಗೊಳಿಸಿದ ರಾಷ್ಟ್ರೀಯ ನಾಗರಿಕ ವಿಮಾನಯಾನ ನೀತಿ"ಯ ಪ್ರಮುಖ ಭಾಗ ಉಡಾನ್ ಯೋಜನೆ. ಜನಸಾಮಾನ್ಯರು ವಿಮಾನಯಾನ ಸೌಲಭ್ಯವನ್ನು ಪಡೆದುಕೊಳ್ಳುವಂತೆ ಮಾಡುವುದು ಯೋಜನೆಯ ಉದ್ದೇಶ. ದೇಶದಲ್ಲಿ ಬಳಸದ ಹಾಗೂ ಅತಿ ಕಡಿಮೆ ಬಳಸಿರುವ ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸಿ ವಿಮಾನ ಯಾನವನ್ನು ಕೈಗೆಟುಕುವಂತೆ ಮಾಡಲು ಉಡಾನ್ ಯೋಜನೆಯನ್ನು ಜಾರಿಗೆ ತರಲಾಗಿದೆ.

## ಹಿರಿಯ ನಟ ವಿನೋದ್ ಖನ್ನಾ ನಿಧನ



ಹಿಂದಿ ಚಿತ್ರರಂಗದ ಹಿರಿಯ ನಟ ವಿನೋದ್ ಖನ್ನಾ (70) ನಿಧನರಾದರು. ಖನ್ನಾ ಅವರು ಪಿತ್ತಕೋಶ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. 1946ರ ಅಕ್ಟೋಬರ್ 6ರಂದು ಜನಿಸಿದ ಅವರು 1968ರಲ್ಲಿ ಸಿನಿಮಾದಲ್ಲಿ ನಟಿಸಲು ಆರಂಭಿಸಿದ್ದರು. 140ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅವರು ನಟಿಸಿದ್ದರು. ಮೇರೆ ಅಪ್ನೆ, ಇನ್ ಸಾಫ್, 'ಅಮರ್ ಅಕ್ಬರ್ ಅಂಥೋನಿ', 'ದಿ ಬರ್ನಿಂಗ್ ಟ್ರೈನ್' ಮತ್ತಿತರ ಪ್ರಸಿದ್ಧ ಚಿತ್ರಗಳಲ್ಲಿ ಅವರು ನಟಿಸಿದ್ದರು. 2015 ರಲ್ಲಿ ತೆರೆಕಂಡ ಶಾರೂಖ್ ಖಾನ್ ನಾಯಕತ್ವದ ದಿಲ್ವಾಲೆ ಅವರ ಕೊನೆಯ ಸಿನಿಮಾ. 1968ರಲ್ಲಿ ತೆರೆಕಂಡ "ಮನ್ ಕ ಮೀಟ್" ಅವರ ಮೊದಲ ಸಿನಿಮಾ.

- ಖನ್ನಾ ಅವರು ಪಂಜಾಬ್‌ನ ಗುರುದಾಸ್‌ಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಪ್ರತಿನಿಧಿಯಾಗಿದ್ದಾರೆ.
- ಪ್ರಸಿದ್ಧ ಸಿನಿಮಾಗಳಾದ ಮೇರೇ ಅಪ್ನೆ, ಮೇರಾ ಗಾಂವ್ ಮೇರಾ ದೇಶ್, ಗದರ್, ಜೈಲ್ ಯಾತ್ರಾ, ಇನ್‌ಕಾರ್, ಅಮರ್ ಅಕ್ಬರ್ ಅಂಥೋನಿ, ರಜ್‌ಪೂತ್‌ಗಳಲ್ಲಿ ಖನ್ನಾ ನಟಿಸಿದ್ದಾರೆ.
- 1997ರಲ್ಲಿ ರಾಜಕೀಯ ಪ್ರವೇಶಿಸಿದ್ದ ಅವರು ಮರುವರ್ಷ ಬಿಜೆಪಿಯಿಂದ ಟಿಕೆಟ್ ಪಡೆದು ಪಂಜಾಬ್‌ನ ಗುರುದಾಸ್‌ಪುರ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆ ಸ್ಪರ್ಧಿಸಿ ಆಯ್ಕೆಯಾಗಿದ್ದರು.
- ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ, 2002ರಲ್ಲಿ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ನಂತರ ವಿದೇಶಾಂಗ ವ್ಯವಹಾರಗಳ ರಾಜ್ಯ ಖಾತೆ ಸಚಿವರಾಗಿಯೂ ಕರ್ತವ್ಯ ನಿರ್ವಹಿಸಿದ್ದರು.
- 2009ರ ಸಾರ್ವತ್ರಿಕ ಚುನಾವಣೆಯಲ್ಲಿ ಸೋಲನುಭವಿಸಿದ ಅವರು 2014ರ ಲೋಕಸಭೆ ಚುನಾವಣೆಯಲ್ಲಿ ಮತ್ತೆ ಜಯ ಸಾಧಿಸಿದ್ದರು.

www.karunaduexams.com

## ಭುವನೇಶ್ವರ ನಗರಕ್ಕೆ ಪಿಯರೆ ಎಲ್'ಎನ್ಫಾಂಟ್ ಇಂಟರ್ನ್ಯಾಷನಲ್ ಪ್ಲಾನಿಂಗ್ ಪ್ರಶಸ್ತಿ



ಅಮೆರಿಕ ಪ್ಲಾನಿಂಗ್ ಅಸೋಸಿಯೇಷನ್ ನೀಡುವ ಪಿಯರೆ ಎಲ್'ಎನ್ಫಾಂಟ್ ಇಂಟರ್ನ್ಯಾಷನಲ್ ಪ್ಲಾನಿಂಗ್ ಪ್ರಶಸ್ತಿ (Pierre L'enfant International Planning excellence award-2017 ) ಒಡಿಶಾದ ಭುವನೇಶ್ವರ ನಗರಕ್ಕೆ ಲಭಿಸಿದೆ. ಆ ಮೂಲಕ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ ಭಾರತದ ಮೊದಲ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಉತ್ತಮ ಹಾಗೂ ಸುಧಾರಿತ ನಗರ ವಿನ್ಯಾಸಕ್ಕಾಗಿ ಈ ಪ್ರಶಸ್ತಿಯನ್ನು ಭುವನೇಶ್ವರ್ ನಗರಕ್ಕೆ ನೀಡಲಾಗಿದೆ.

**ಪ್ರಶಸ್ತಿಯ ಬಗ್ಗೆ:**

- ಪಿಯರೆ ಎಲ್'ಎನ್ಫಾಂಟ್ ಫ್ರೆಂಚ್ ಮೂಲದ ಅಮೆರಿಕದ ವಾಸ್ತುಶಿಲ್ಪಿ ಹಾಗೂ ಸಿವಿಲ್ ಎಂಜನಿಯರ್.
- ಅಮೆರಿಕದ ವಾಷಿಂಗ್ಟನ್ ಡಿ ಸಿ ನಗರದಲ್ಲಿ ರಸ್ತೆಗಳನ್ನು ವಿನ್ಯಾಸಗೊಳಿಸಿದ ಕೀರ್ತಿ ಪಿಯರೆ ಅವರಿಗೆ ಸಲ್ಲುತ್ತದೆ.
- ಅಂತಾರಾಷ್ಟ್ರೀಯ ಮನ್ನಣೆ ಪಡೆದ ನಗರ ವಿನ್ಯಾಸವನ್ನು ಗೌರವಿಸಲು ಅಮೆರಿಕ ಪ್ಲಾನಿಂಗ್ ಅಸೋಸಿಯೇಷನ್ ಈ ಪ್ರಶಸ್ತಿಯನ್ನು ಸ್ಥಾಪಿಸಿದೆ.

## ಜಮ್ಮು ಮತ್ತು ಕಾಶ್ಮೀರದಲ್ಲಿ ಮಹಿಳಾ ಬೆಟಾಲಿಯನ್ ನಿಯೋಜನೆಗೆ ಕೇಂದ್ರ ಚಿಂತನೆ



ಜಮ್ಮು ಮತ್ತು ಕಾಶ್ಮೀರದಲ್ಲಿ ವಿಶೇಷ ಮಹಿಳಾ ಬೆಟಾಲಿಯನ್ ಗಳನ್ನು ಕರ್ತವ್ಯಕ್ಕೆ ನಿಯೋಜಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇತ್ತೀಚೆಗೆ ವಿದ್ಯಾರ್ಥಿನಿಯರು ರಕ್ಷಣಾ ಪಡೆಗಳ ಕಡೆ ಕಲ್ಲು ತೂರಾಟ ನಡೆಸಿದ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ಈ ತಂತ್ರಗಾರಿಕೆಯ ಮೊರೆ ಹೋಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಕಳೆದ ವರ್ಷ 5 ಇಂಡಿಯಾ ರಿಸರ್ವ್ಡ್ ಬೆಟಾಲಿಯನ್ ಪಡೆಗಳನ್ನು ಸ್ಥಾಪನೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಒಂದೊಂದು ಬೆಟಾಲಿಯನ್ ನಲ್ಲೂ 1,000 ಮಹಿಳಾ ವಿಶೇಷ ಪಡೆಗಳಿರಲಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತಿಭಟನಕಾರರನ್ನು ನಿಯಂತ್ರಿಸುವುದು ಈ ಮಹಿಳಾ ಪಡೆಯ ಪ್ರಮುಖ ಉದ್ದೇಶ.

- ಮಹಿಳಾ ಬೆಟಾಲಿಯನ್ ಗಳ ನಿಯೋಜನೆ ಕುರಿತಂತೆ ಗೃಹ ಸಚಿವ ರಾಜನಾಥ ಸಿಂಗ್ ಅವರು ಉನ್ನತ ಮಟ್ಟದ ಸಭೆಯನ್ನು ನಡೆಸಿದ್ದು, ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.
- ಇದರಂತೆ ಐಆರ್'ಬಿಎಸ್ (ಇಂಡಿಯಾ ರಿಸರ್ವ್ಡ್ ಬೆಟಾಲಿಯನ್') ನಿಯೋಜಿಸಲು ಕೇಂದ್ರ ತೀರ್ಮಾನಿಸಿದ್ದು, ಇದರಿಂದ ಶೇ.60 ರಷ್ಟು ಸ್ಥಳೀಯ ಯುವಕರಿಗೆ ಉದ್ಯೋಗವಾಕಾಶ ದೊರಕಲಿದೆ. ಬೆಟಾಲಿಯಿನ್ ಪಡೆಗಳನ್ನು ನೋಡಿಕೊಳ್ಳಲು ರೂ.61 ಕೋಟಿ ವೆಚ್ಚ ತಗುಲಲಿದ್ದು, ಶೇ.75ರಷ್ಟನ್ನು ಕೇಂದ್ರ ಸರ್ಕಾರವೇ ನೋಡಿಕೊಳ್ಳಲಿದೆ.

www.karunadaexams.com

## ಮೇ 2 ರಂದು ಗಂಗಾ ಸ್ವಚ್ಛತಾ ಸಂಕಲ್ಪ ದಿವಸ ಆಚರಣೆಗೆ ನಿರ್ಧಾರ



ಸ್ವಚ್ಛ ಗಂಗಾ ರಾಷ್ಟ್ರೀಯ ಮಿಷನ್ ಗಂಗಾ ಸ್ವಚ್ಛತಾ ಸಂಕಲ್ಪ ದಿವಸವನ್ನು ಮೇ 2, 2017 ರಂದು ದೇಶದ 12 ನಗರಗಳಲ್ಲಿ ಆಚರಿಸಲು ನಿರ್ಧರಿಸಿದೆ. ಈ 12 ಸ್ಥಳಗಳೆಂದರೆ ಕಾನ್ಪುರ, ಅಲಹಬಾದ್, ವಾರಣಾಸಿ, ಪಾಟ್ನಾ, ಭಗಲ್ಪುರ, ಸಹಿಬ್ ಗಂಜ್, ಕೊಲ್ಕತ್ತಾ, ರಾಜ್ ಘಾಟ್, ಬಿಥೂರ್, ಶ್ರೀನಗರ (ಉತ್ತರಖಂಡ), ವಿಧೂರ್ ಕುಟಿ ಮತ್ತು ದೇವ್ ಪ್ರಯಾಗ್. ಇದಲ್ಲದೇ ಸ್ಥಳೀಯ NGO ಗಳು, ಗಂಗಾ ವಿಚಾರ ವೇದಿಕೆ ಹಾಗೂ ಸ್ವಯಂ ಬೆಂಬಲಿತರು ಇತರೆ 30 ಸ್ಥಳಗಳಲ್ಲಿ ಸ್ವಚ್ಛತಾ ಸಂಕಲ್ಪ ದಿವಸವನ್ನು ಆಚರಿಸಲಿದ್ದಾರೆ.

ಸ್ವಚ್ಛ ಗಂಗಾ ಕಾರ್ಯಕ್ರಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಈ ಕಾರ್ಯಕ್ರಮದಲ್ಲಿ ಸಮುದಾಯ ಭಾಗವಹಿಸಲು ಪ್ರೇರೆಪಿಸುವುದು ಸಂಕಲ್ಪ ದಿವಸ ಆಚರಣೆಯ ಉದ್ದೇಶ.

ಹಿನ್ನಲೆ:

ಮಾರ್ಚ್ 17, 2017 ರಂದು ಸ್ವಚ್ಛ ಗಂಗಾ ರಾಷ್ಟ್ರೀಯ ಮಿಷನ್ ಗಂಗಾ ನದಿ ಪಾತ್ರದ ಐದು ರಾಜ್ಯಗಳಲ್ಲಿ 16 ದಿನಗಳ ಕಾಲ ಅವಧಿಯ "ಗಂಗಾ ಸ್ವಚ್ಛತಾ ಪಖ್ವಾಡ" ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಭಾರಿ ಸಂಖ್ಯೆಯಲ್ಲಿ ಜನರು ಭಾಗವಹಿಸುವ ಮೂಲಕ ಈ ಕಾರ್ಯಕ್ರಮ ಯಶಸ್ವಿಯಾಗಿತ್ತು. ಈ ಕಾರ್ಯಕ್ರಮದ ಯಶಸ್ಸಿನಿಂದ ಪ್ರೇರೆಪಿತಗೊಂಡು ಇದೀಗ ಗಂಗಾ ಸ್ವಚ್ಛತಾ ಸಂಕಲ್ಪ ದಿವಸವನ್ನು ಹಮ್ಮಿಕೊಳ್ಳಲಾಗುತ್ತಿದೆ.

## ಬಸವ ಸಮಿತಿಯ ಸುವರ್ಣ ಮಹೋತ್ಸವಕ್ಕೆ ಪ್ರಧಾನಿ ಚಾಲನೆ



ಬಸವ ಜಯಂತಿ ಸಮಾರಂಭ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಬಸವ ಸಮಿತಿಯ ಸುವರ್ಣ ಮಹೋತ್ಸವಕ್ಕೆ ಚಾಲನೆ ನೀಡಿದ್ದಾರೆ.ಇದೇ ವೇಳೆ ಪ್ರಧಾನಿ ಮೋದಿ ಅವರು ಬಸವಣ್ಣನವರ "ವಚನ"ಗಳ ಭಾಷಾಂತರ ಪುಸ್ತಕವನ್ನು ಬಿಡುಗಡೆಗೊಳಿಸಿದರು. ಭಾರತದ 23 ಭಾಷೆಗಳಲ್ಲಿ ವಚನಗಳ ಪುಸ್ತಕವನ್ನು ಹೊರತರಲಾಗಿದೆ. ದಿವಂಗತ ಎಂ ಎಂ ಕಲ್ಬುರ್ಗಿ ಅವರು ವಚನಗಳನ್ನು ಸಂಪಾದಿಸಿದ್ದು, ಸುಮಾರು 200 ಜನರು ವಚನಗಳನ್ನು ಭಾಷಾಂತರಗೊಳಿಸಲು ಶ್ರಮಿಸಿದ್ದಾರೆ. ಇದೇ ವೇಳೆ ಡಿಜಿಟಲ್ ರೂಪದ ಆವೃತ್ತಿಯನ್ನು ಸಹ ಪ್ರಧಾನಿ ಅವರು ಬಿಡುಗಡೆಗೊಳಿಸಿದರು. ಇದೇ ಮೊದಲ ಬಾರಿಗೆ ಬಸವ ಜಯಂತಿಯನ್ನು ಮೊಟ್ಟ ಮೊದಲ ಬಾರಿಗೆ ರಾಷ್ಟ್ರಮಟ್ಟದಲ್ಲಿ ನವದೆಹಲಿಯಲ್ಲಿ ಆಚರಿಸಲಾಯಿತು. ಸುಮಾರು 2.5 ಕೋಟಿ ವೆಚ್ಚದಲ್ಲಿ ವಚನಗಳ ಭಾಷಾಂತರವನ್ನು ಬಸವ ಸಮಿತಿ ಕೈಗೊಂಡಿದ್ದು, ಕರ್ನಾಟಕ ಸರ್ಕಾರ ಇದಕ್ಕಾಗಿ ರೂ 1 ಕೋಟಿಯನ್ನು ನೀಡಿದೆ. ಬಸವ ಸಮಿತಿಯ ಸುವರ್ಣ ಮಹೋತ್ಸವವನ್ನು ಸಹ ಈ ವೇಳೆ ಆಚರಿಸಲಾಯಿತು. ಬಸವಣ್ಣನವರ ಸಂದೇಶವನ್ನು ವಿಶ್ವಕ್ಕೆ ಸಾರುವ ಸಲುವಾಗಿ ಮಾಜಿ ರಾಷ್ಟ್ರಪತಿ ಬಿ ಡಿ ಜತ್ತಿ ಅವರು ಬಸವ ಸಮಿತಿಯನ್ನು 1964ರಲ್ಲಿ ಸ್ಥಾಪಿಸಿದರು.

### ಬಸವಣ್ಣ:

- ಶ್ರೀ ಬಸವೇಶ್ವರ (ಶ್ರೀ ಬಸವ ಅಥವಾ ಬಸವಣ್ಣನವರು) ಶರಣ ಶರಣೆಯರ ಲಿಂಗಾಯತ ದರ್ಶನ ಪ್ರತಿಪಾದಕರು. ಬಸವಣ್ಣನವರು 12 ನೆಯ ಶತಮಾನದ ಭಕ್ತಿ ಪಂಥದ ಪ್ರಮುಖರಲ್ಲಿ ಒಬ್ಬರು. ಬಸವಣ್ಣನವರು ಮತ್ತು ಶರಣ ಶರಣೆಯರಾದ ಅಲ್ಲಮಪ್ರಭು, ಅಕ್ಕಮಹಾದೇವಿ,

www.karunaduexams.com

ಚೆನ್ನಬಸವಣ್ಣ ಮೊದಲಾದ ನೂರಾರು ಶರಣ ಶರಣೆಯರು ವಚನಗಳ ಮೂಲಕ ಭಕ್ತಿಪಥ ಮತ್ತು ಜೀವನದ ಬಗ್ಗೆ ಹೊಸ ದೃಷ್ಟಿ ಬೀರಿದರು.

- ಬಸವಣ್ಣನವರು 1134 ರಲ್ಲಿ ಈಗಿನ ಬಿಜಾಪುರ ಜಿಲ್ಲೆಯಲ್ಲಿರುವ ಬಸವನ ಬಾಗೇವಾಡಿ ಗ್ರಾಮದಲ್ಲಿ ಜನಿಸಿದರು.
- ಅವರ ದೃಷ್ಟಿಯಲ್ಲಿ ದೇವನು ಒಬ್ಬ ಮತ್ತು ಅವನು ಮಾನವನಲ್ಲಿದ್ದಾನೆಯೇ ಹೊರತು ಗುಡಿ-ಗುಂಡಾರಗಳಲ್ಲಿ ಅಲ್ಲ. ಕೆಲಸ ಮಾಡಿ ಜೀವನ ನಡೆಸಬೇಕು, ಆಲಸಿ ಜೀವನ ಸಲ್ಲ. ಸುಳ್ಳು ಹೇಳುವುದು, ವಂಚಿಸುವುದು, ಕೊಲೆ-ಸುಲಿಗೆ ಮಾಡುವುದು, ಪ್ರಾಣಿಬಲಿ ನೀಡುವುದು, ಪರಧನ ಹರಣ, ಪರಸ್ತ್ರೀ ವ್ಯಾಮೋಹ ಹೊಂದುವುದು ಘೋರ ಅಪರಾಧ.
- ಬಸವಣ್ಣನವರು ನಾಣ್ಯದ ಮೇಲೆ ಪ್ರಕಟಿಸಲ್ಪಟ್ಟವರಲ್ಲಿ ಪ್ರಥಮ ಕನ್ನಡಿಗ ರಾಗಿದ್ದಾರೆ.ಗುರು ಬಸವಣ್ಣವರ ಅಶ್ವಾರೂಢ ಮೂರ್ತಿಯನ್ನು ದೆಹಲಿಯಲ್ಲಿರುವ ಪಾರ್ಲಿಮೆಂಟ್ ನಲ್ಲಿ 24ನೇ ಎಪ್ರಿಲ್ 2003ರಲ್ಲಿ ಅನಾವರಣಗೊಳಿಸಲಾಯತು. 2015ರಲ್ಲಿ ಪ್ರಧಾನಿ ಮೋದಿ ಅವರು ಬಸವಣ್ಣನವರ ಪ್ರತಿಮೆಯನ್ನು ಲಂಡನ್ ನ ಥೇಮ್ಸ್ ನದಿಯ ದಡದಲ್ಲಿ ಉದ್ಘಾಟಿಸಿದರು.

## <u>ಮಹಾರಾಷ್ಟ್ರದ ಬಿಲಾರ್ ಗ್ರಾಮ ದೇಶದ ಮೊದಲ ಪುಸ್ತಕ ಗ್ರಾಮ</u>



ಮಹಾರಾಷ್ಟ್ರದ ಸತಾರ್ ಜಿಲ್ಲೆಯ ಪುಟ್ಟ ಗ್ರಾಮ "ಬಿಲಾರ್" ದೇಶದ ಮೊದಲ ಪುಸ್ತಕ ಗ್ರಾಮವೆಂಬ ಗೌರವವಕ್ಕೆ ಪಾತ್ರವಾಗಲಿದೆ. ಬ್ರಿಟನ್‌ನ ವೇಲ್ಸ್ ಪಟ್ಟಣದಲ್ಲಿ ಹೇ-ಆನ್-ವೈ ಎಂಬ ಪರಿಕಲ್ಪನೆಯಿಂದ ಪ್ರೇರಿತವಾಗಿ ಈ ಗ್ರಾಮದಲ್ಲಿ ಪುಸ್ತಕಗಳ ಹಳ್ಳಿ ಸ್ಥಾಪನೆಗೊಂಡಿದೆ. ಈ ವಿನೂತನ ಕಾರ್ಯಕ್ರಮದಡಿ ಪ್ರವಾಸಿಗರು ಹಾಗೂ ಸ್ಥಳೀಯರು ವಿವಿಧ ಪುಸ್ತಕಗಳು, ಕಾದಂಬರಿಗಳು, ನಿಯತಕಾಲಿಗಳು ಹಾಗೂ ಸುದ್ದಿ ಪತ್ರಿಕೆಗಳನ್ನು ಓದಬಹುದಾಗಿದೆ.

- ಮರಾಠಿ ಪುಸ್ತಕಗಳಿಗಾಗಿಯೇ ಮೀಸಲಾದ ಈ ಗ್ರಾಮಕ್ಕೆ ಪುಸ್ತಕಾಂಚೆಗಾವ್ ಎಂದು ಹೆಸರಿಡಲಾಗಿದೆ. ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಈ ಪುಸ್ತಕ ಗ್ರಾಮವನ್ನು ಲೋಕಾರ್ಪಣೆ ಮೇ 2 ರಂದು ಮಾಡಲಿದ್ದಾರೆ.
- ಮರಾಠಿ ಭಾಷೆಯ 15 ಸಾವಿರಕ್ಕೂ ಹೆಚ್ಚು ಅಪರೂಪದ ಪುಸ್ತಕಗಳು ಮತ್ತು ನಿಯತಕಾಲಿಕೆಗಳು ಒಂದೇ ವೇದಿಕೆಯಲ್ಲಿ ಲಭಿಸಲಿವೆ.
- ಇದೊಂದು ನವೀನ ಕಲ್ಪನೆಯ ಪುಸ್ತಕೋದ್ಯಮದ ಸಾಹಸ ಸಾಹಿತ್ಯ, ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸೇರಿದಂತೆ ಎಲ್ಲಾ ಕ್ಷೇತ್ರಗಳ ಪುಸ್ತಕಗಳು ಒಂದೇ ಸೂರಿನಡಿ ಲಭಿಸುತ್ತಿವೆ. ಈ ಮೂಲಕ ಮರಾಠಿ ಭಾಷೆಯ ಸಂರಕ್ಷಣೆ ಮತ್ತು ಉತ್ತೇಜನಕ್ಕೆ ನೆರವಾಗಿದೆ.

### ಬಿಲಾರ್:

ಬಿಲಾರ್ ಗ್ರಾಮ ಮಹಾರಾಷ್ಟ್ರದ ಸತಾರ ಜಿಲ್ಲೆಯಲ್ಲಿದ್ದು 2 ಕಿ.ಮೀ. ವಿಸ್ತಾರವಿರುವ ಈ ಗ್ರಾಮವು ಪ್ರಸಿದ್ದ ಪಂಚಗಣಿ ಗಿರಿಧಾಮದಿಂದ ಕೇವಲ 8 ಕಿ.ಮೀ. ದೂರದಲ್ಲಿದೆ. ಸ್ಟ್ರಾಬೆರಿ ಗೆ ಈ ಗ್ರಾಮ ಪ್ರಸಿದ್ಧಿ ಹೊಂದಿದೆ. ಹಳ್ಳಿಯ ಸಮೀಪದಲ್ಲೆ ಬ್ರಿಟಿಷರ ಕಾಲದ ಪ್ರಸಿದ್ದ ಮಹಾಬಲೇಶ್ವರ ಗಿರಿಧಾಮವಿದೆ. ಬಿಲಾರ್ ಗ್ರಾಮದಲ್ಲಿ ಪ್ರತಿವರ್ಷ 100 ಟನ್ ಸ್ಟ್ರಾಬೆರಿ ಬೆಳೆಯಲಾಗುತ್ತಿದೆ.

## ಹೆಚ್‌ಐವಿ ಪರೀಕ್ಷೆ ಮತ್ತು ಚಿಕಿತ್ಸೆ ನೀತಿಗೆ ಚಾಲನೆ



ಹೆಚ್‌ಐವಿ/ಏಡ್ಸ್ ರೋಗಕ್ಕೆ ಸೂಕ್ತ ಚಿಕಿತ್ಸೆ ನೀಡಲು ಕೇಂದ್ರ ಸರ್ಕಾರದ "ಹೆಚ್‌ಐವಿ ಪರೀಕ್ಷೆ ಮತ್ತು ಚಿಕಿತ್ಸೆ (HIV Test and Treat Policy)" ನೀತಿಗೆ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರು ಚಾಲನೆ ನೀಡಿದರು. ಹೊಸ ನೀತಿಯ ಪ್ರಕಾರ ಹೆಚ್‌ಐವಿ ಪರೀಕ್ಷೆಗೆ ಒಳಪಟ್ಟು ಹೆಚ್‌ಐವಿ ಪಾಸಿಟಿವ್ ಆಗಿದ್ದಾರೆ ಅಂತವರಿಗೆ ಉಚಿತವಾಗಿ ಚಿಕಿತ್ಸೆಯನ್ನು ನೀಡಲಾಗುವುದು. ಹೆಚ್‌ಐವಿ ಪಾಸಿಟಿವ್ ಆಗಿರುವುದು ಪತ್ತೆಯಾದರೆ ಅಂತವರಿಗೆ "ART (Anti Retroviral Therapy)" ಚಿಕಿತ್ಸೆಯನ್ನು ನೀಡಲಾಗುವುದು. ಇದು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ. ಇದರಡಿ ಹೆಚ್‌ಐವಿ ಬಾಧಿತ ಪುರುಷರು, ಮಹಿಳೆಯರು, ಯುವಕರು ಹಾಗೂ ಮಕ್ಕಳು ಉಚಿತವಾಗಿ ಚಿಕಿತ್ಸೆಯನ್ನು ಪಡೆದುಕೊಳ್ಳಬಹುದಾಗಿದೆ.

ಹೆಚ್‌ಐವಿ ಯು ಮಾನವ ದೇಹದಲ್ಲಿರುವ CD4 T ಕೋಶಗಳನ್ನು ನಾಶಪಡಿಸುವ ಮೂಲಕ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುತ್ತದೆ.

- ಯಾವುದೇ ವ್ಯಕ್ತಿಯ CD4 T ಕೋಶಗಳ ಸಂಖ್ಯೆ 200 ಕ್ಕಿಂತ ಕಡಿಮೆ ಇದ್ದಾಗ ಗಂಭೀರವಾದ ಕಾಯಿಲೆಗಳಿಗೆ ತುತ್ತಾಗುವ ಸಂಬಂಧ ಹೆಚ್ಚಿರುತ್ತದೆ.
- ಈ ನೀತಿಯಡಿ CD4 T ಕೋಶಗಳ ಸಂಖ್ಯೆ 400 ಕ್ಕಿಂತ ಕಡಿಮೆ ಇರುವಂತಹರಿಗೆ ಉಚಿತ ಚಿಕಿತ್ಸೆಯನ್ನು ನೀಡಲಾಗುವುದು.
- ಭಾರತದಲ್ಲಿ ಸುಮಾರು 21 ಲಕ್ಷ ಹೆಚ್‌ಐವಿ/ಏಡ್ಸ್ ಬಾಧಿತರು ಇರುವುದಾಗಿ ಅಂದಾಜಿಸಲಾಗಿದೆ. ಆದರೆ ಕೇವಲ 14 ಲಕ್ಷ ಜನರನ್ನು ಮಾತ್ರ ಗುರುತಿಸಲಾಗಿದೆ.

www.karunaduexams.com

# ವಿಜ್ಞಾನ-ತಂತ್ರಜ್ಞಾನ

**ಕೊರೊನರಿ ಸ್ಟೆಂಟ್ ದರ ಶೇ 2% ಹೆಚ್ಚಳಗೊಳಿಸಿದ NPPA**



ರಾಷ್ಟ್ರೀಯ ಔಷಧ ದರ ನಿಗದಿ ಪ್ರಾಧಿಕಾರವು ಹೃದಯ ಶಸ್ತ್ರ ಚಿಕಿತ್ಸೆಯಲ್ಲಿ ಬಳಸುವ ಕೊರೊನರಿ ಸ್ಟೆಂಟ್ ಗಳ ದರವನ್ನು ಶೇ 2% ರಷ್ಟು ಹೆಚ್ಚಳಗೊಳಿಸಿದೆ. ಒಟ್ಟಾರೆ ಸಗಟು ಸೂಚ್ಯಂಕವನ್ನು ಪರಿಗಣನೆಗೆ ತೆಗೆದುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ. ಅದರಂತೆ ಲೋಹದ ಸ್ಟೆಂಟ್‌ಗಳ ಬೆಲೆ ₹7,260 ರಿಂದ ₹7400 ಕ್ಕೆ ಹೆಚ್ಚಳವಾಗಲಿದೆ ಹಾಗೂ ಔಷಧ ರವಾನೆ ಮಾಡಲು ಬಳಸುವ ಸ್ಟೆಂಟ್‌ಗಳ ಬೆಲೆ ₹29,600 ರಿಂದ 30,180ಕ್ಕೆ ಹೆಚ್ಚಳವಾಗಲಿದೆ.

**ಕೊರೊನರಿ ಸ್ಟೆಂಟ್ ಎಂದರೇನು?**

- ಕೊರೊನರಿ ಸ್ಟೆಂಟ್ ಹೃದಯಕ್ಕೆ ರಕ್ತ ಸರಬರಾಜು ಮಾಡಲು ಅಪಧಮನಿಗಳಲ್ಲಿ ಅಳವಡಿಸಲಾಗುವ ಕೊಳವೆ ಆಕಾರದ ಸಣ್ಣ ಉಪಕರಣವಾಗಿದೆ.
- ಕೊರೊನರಿ ಸ್ಟೆಂಟ್ ಗಳಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ ಲೋಹದ ಸ್ಟೆಂಟ್ ಹಾಗೂ ಔಷಧಿ ರವಾನೆ ಮಾಡುವ ಸ್ಟೆಂಟ್.

**ಹಿನ್ನಲೆ**:


- ಜುಲೈ 2016 ರಲ್ಲಿರಾಷ್ಟ್ರಮಟ್ಟದಲ್ಲಿ ಅಗತ್ಯವಿರುವ ಔಷಧಗಳ ಪಟ್ಟಿಗೆ (ಎನ್‌ಎಲ್ ಇಎಂ) ಸೇರ್ಪಡೆಗೊಳಿಸಲಾಯಿತು. ಆ ಮೂಲಕ ದರ ನಿಯಂತ್ರಣದಡಿ ತರಲಾಗಿದೆ. ದರ ನಿಯಂತ್ರಣದಡಿ ತರಲಾದ ಮೊದಲ ವೈದ್ಯಕೀಯ ಉಪಕರಣ ಇದಾಗಿದೆ.

**ರಾಷ್ಟ್ರೀಯ ಔಷಧ ದರ ನಿಗದಿ ಪ್ರಾಧಿಕಾರ:**

- ರಾಷ್ಟ್ರೀಯ ಔಷಧ ದರ ನಿಗದಿ ಪ್ರಾಧಿಕಾರವು ದೇಶದಲ್ಲಿ ಔಷಧಿ ಉತ್ಪನ್ನಗಳ ದರಗಳನ್ನು ನಿಯಂತ್ರಿಸುವ ಸ್ವಾಯತತೆ ಸಂಸ್ಥೆಯಾಗಿದ್ದು, ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದೆ.
- ಔಷಧ ನೀತಿ, ಔಷಧಿಗಳ ದರ ನಿಗದಿ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಸಲಹೆ/ಸೂಚನೆ ನೀಡುವುದು ಪ್ರಾಧಿಕಾರದ ಕರ್ತವ್ಯ.

www.karunaduexams.com

**<u>ಪ್ಲಾಸ್ಟಿಕ್ ತಿನ್ನುವ ಶಿಲೀಂಧ್ರಗಳನ್ನು ಪತ್ತೆಹಚ್ಚಿದ ವಿಜ್ಞಾನಿಗಳು</u>**



ಪ್ಲಾಸ್ಟಿಕ್ ತಿನ್ನುವ ಶಿಲೀಂಧ್ರವನ್ನು ಚೀನಾ ಅಕಾಡೆಮಿ ಆಫ್ ಸೈನ್ಸ್ ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಅಸ್ಪರ್ಜಿಲ್ಲಸ್ ಟುಬಿನ್ ಜೆನ್ಸಿಸ್ (Aspergillus Tubengensis) ಹೆಸರಿನ ಶಿಲೀಂಧ್ರವು ಕಿಣ್ವಗಳನ್ನು ಬಳಸಿಕೊಂಡು ವೇಗವಾಗಿ ಪ್ಲಾಸ್ಟಿಕ್ ಅನ್ನು ವಿಭಜಿಸುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ. ಪ್ಲಾಸ್ಟಿಕ್ ತಿನ್ನುವ ಈ ಶಿಲೀಂಧ್ರಗಳನ್ನು ಪಾಕಿಸ್ತಾನದ ಇಸ್ಲಮಬಾದಿನಲ್ಲಿ ಪತ್ತೆಹಚ್ಚಲಾಗಿದೆ. ಪ್ಲಾಸ್ಟಿಕ್ ನಿಂದ ಪರಿಸರದ ಮೇಲೆ ಮಾರಕವಾಗಿ ಹಾನಿಯಾಗುತ್ತಿದ್ದು, ಈ ಸಂಶೋಧನೆಯಿಂದ ಪರಿಸರದ ಮೇಲಾಗುವ ಮಾರಕವನ್ನು ತಪ್ಪಿಸಬಹುದಾಗಿದೆ.

**ಪ್ರಮುಖಾಂಶಗಳು**:

- ಭೂಮಿಯ ಮೇಲೆ ಸಾಮಾನ್ಯವಾಗಿ ಕಂಡು ಬರುವ "ಅಸ್ಪರ್ಜಿಲ್ಲಸ್ ಟುಬಿನ್ ಜೆನ್ಸಿಸ್" ಪ್ಲಾಸ್ಟಿಕ್ ಮೇಲೆಯೂ ಬೆಳೆಯುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ.
- ಪ್ಲಾಸ್ಟಿಕ್ ಮೇಲೆ ಬೆಳೆಯುವಾಗ ಈ ಶಿಲೀಂಧ್ರವು ಪ್ಲಾಸ್ಟಿಕ್ ಮೇಲ್ಮೈ ಮೇಲೆ ಕಿಣ್ವವೊಂದನ್ನು ಸ್ರವಿಸುವ ಮೂಲಕ ಪ್ಲಾಸ್ಟಿಕ್ ನಲ್ಲಿರುವ ರಾಸಾಯನಿಕ ಬಾಂಡ್ ಗಳನ್ನು ವಿಭಜನೆಗೊಳಿಸುತ್ತದೆ.

**ಸಂಶೋಧನೆಯ ಮಹತ್ವ**:

ಪ್ಲಾಸ್ಟಿಕ್ ಪದಾರ್ಥಗಳು ಕೊಳೆಯದೆ ಇರುವ ಕಾರಣ ಬಹು ಕಾಲ ವಾತಾವರಣದಲ್ಲಿ ಉಳಿದುಕೊಂಡು ಬಿಡುತ್ತವೆ. ಭೂಮಿಯಲ್ಲಿ ಮುಚ್ಚುವುದು, ಮರು ಬಳಕೆ ಮಾಡುವುದು ಹಾಗೂ ಸುಡುವ ಮೂಲಕ ಪ್ಲಾಸ್ಟಿಕ್ ಪದಾರ್ಥಗಳನ್ನು ವಿಲೇವಾರಿ ಮಾಡಲಾಗುತ್ತಿದೆ. ಆದರೆ ಈ ವಿಧಗಳು ಅಷ್ಟೇನೂ ಸೂಕ್ತವಲ್ಲದ ಕಾರಣ ವಿಷಯುಕ್ತ ಪದಾರ್ಥಗಳನ್ನು ಪರಿಸರದಲ್ಲೆ ಬಿಡುವುದಲ್ಲದೆ, ಮನುಷ್ಯನ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಈ ಹೊಸ ಸಂಶೋಧನೆಯಿಂದ ಪ್ಲಾಸ್ಟಿಕ್ ವಿಲೇವಾರಿಗೆ ಸರಳ ವಿಧಾನವನ್ನು ಕಂಡುಕೊಳ್ಳುವುದಲ್ಲದೆ, ಪರಿಸರ ಮತ್ತು ಆರೋಗ್ಯದ ಮೇಲೂ ಯಾವುದೇ ಪರಿಣಾಮವನ್ನು ಬೀರುವುದಿಲ್ಲ.

**<u>ಶುಕ್ರ ಗ್ರಹವನ್ನು ಹೋಲುವ ಗ್ರಹವನ್ನು ಪತ್ತೆಹಚ್ಚಿರುವ ಖಗೋಳಶಾಸ್ತ್ರಜ್ಞರು</u>**



ನಾಸಾದ ಕೆಪ್ಲರ್ ಬಾಹ್ಯಕಾಶ ದೂರದರ್ಶಕವನ್ನು ಬಳಸಿ ಶುಕ್ರ ಗ್ರಹವನ್ನು ಹೋಲುವ ಹೊಸ ಗ್ರಹವನ್ನು ಖಗೋಳಶಾಸ್ತ್ರಜ್ಞರು ಪತ್ತೆಹಚ್ಚಿದ್ದಾರೆ. ಈ ಹೊಸ ಗ್ರಹವು ಮಬ್ಬು ಬೆಳಕು ಹೊರಸೂಸುವ ಕೆಪ್ಲರ್-1649 ಎಂಬ ನಕ್ಷತ್ರದ ಸುತ್ತ ಸುತ್ತುತ್ತಿದೆ. ಈ ಹೊಸ ಗ್ರಹವು ಸೂರ್ಯನ ಸುತ್ತಳತೆಯಲ್ಲಿ 1/5 ರಷ್ಟಿದ್ದು, ಭೂಮಿಗಿಂತ ಸ್ವಲ್ಪ ದೊಡ್ಡದಾಗಿದೆ ಹಾಗೂ ಭೂಮಿಯಿಂದ 219 ಜ್ಯೋತಿರ್ ವರ್ಷಗಳಷ್ಟು ದೂರದಲ್ಲಿದೆ.

www.karunaduexams.com

**ಪ್ರಮುಖಾಂಶಗಳು**:


- ಶುಕ್ರ ಗ್ರಹವನ್ನು ಹೋಲುವ ಈ ಹೊಸ ಗ್ರಹವು ಕೆಪ್ಲರ್-1649 ಅನ್ನು ಪ್ರತಿ ಒಂಬತ್ತು ದಿನಗೊಳಿಗೊಮ್ಮೆ ಪ್ರದಕ್ಷಿಣೆ ಹಾಕುತ್ತಿದೆ.
- ಹೊಸ ಸಂಶೋಧನೆಯು M Dwarf Stars ನ ಪ್ರದಕ್ಷಿಣೆ ಹಾಕುವ ಗ್ರಹಗಳ ಸ್ವಭಾವವನ್ನು ಅರಿಯಲು ಹಾಗೂ ಸಂಶೋಧಿಸಲು ಅತ್ಯಂತ ಸಹಾಯಕಾರಿ ಆಗಲಿದೆ.

**ಶುಕ್ರ ಗ್ರಹದ ಬಗ್ಗೆ:**

- ಶುಕ್ರ ಗ್ರಹವು ಸೂರ್ಯನಿಗೆ ಎರಡನೇ ಅತಿ ಸಮೀಪದ ಗ್ರಹ. ಈ ಗ್ರಹವು ಸೂರ್ಯನನ್ನು 224.7 ಭೂಮಿ ದಿನಗಳಿಗೊಮ್ಮೆ ಪರಿಭ್ರಮಿಸುತ್ತಿದೆ.
- 4.6 ಗೋಚರ ಪ್ರಮಾಣವಿರುವ ಶುಕ್ರವು, ಚಂದ್ರನ ನಂತರ ರಾತ್ರಿಯ ಆಗಸದಲ್ಲಿ ಅತ್ಯಂತ ಪ್ರಕಾಶಮಾನವಾದ ಕಾಯ. 47.8° ಗರಿಷ್ಠ ನೀಳತೆಯನ್ನು ಹೊಂದಿರುವ ಶುಕ್ರಗ್ರಹವು ಮುಂಜಾನೆ/ಮುಸ್ಸಂಜೆಗಳಲ್ಲಿ ಚೆನ್ನಾಗಿ ಕಾಣುತ್ತದೆ. ಇದನ್ನು "ಹಗಲು ನಕ್ಷತ್ರ" ಮತ್ತು "ಸಂಜೆ ನಕ್ಷತ್ರ" ಎಂದೂ ಕರೆಯಲಾಗುತ್ತದೆ.
- ಇದು ಭೂಮಿಯ ವಿರುದ್ಧ ದಿಕ್ಕಿನಲ್ಲಿ ಸುತ್ತುತ್ತದೆ.ಇದರ ವಾತಾವರಣದಲ್ಲಿ ಇಂಗಾಲಾಮ್ಲ ಹೆಚ್ಚಾಗಿರುವುದರಿಂದ ಈ ಗ್ರಹದಲ್ಲಿ ಜೀವಿಗಳು ಇಲ್ಲ.ಇದರ ಮೇಲ್ಮೈ ಸೀಸವನ್ನೂ ಕರಗಿಸಬಲ್ಲಷ್ಟು ಶಾಖದಿಂದ ಕೂಡಿದೆ.
- ಘನರೂಪಿಯಾದ ಶುಕ್ರವು ಭೂಮಿಯ ಗಾತ್ರ ಮತ್ತು ರಚನೆಯನ್ನು ಹೋಲುವುದರಿಂದ ಇದನ್ನು ಭೂಮಿಯ "ಸಹೋದರ ಗ್ರಹ"ವೆಂದೂ ಕರೆಯಲಾಗುತ್ತದೆ. ಶುಕ್ರವು ಚೆನ್ನಾಗಿ ಬೆಳಕನ್ನು ಪ್ರತಿಫಲಿಸುವ ಮೋಡಗಳಿಂದ ಆವೃತವಾಗಿದ್ದು, ಅದರ ಮೇಲ್ಮೈ ಸೂರ್ಯನ ಬೆಳಕಿರುವಾಗ ಕಾಣುವುದಿಲ್ಲ. ಶುಕ್ರದ ಮೇಲ್ಮೈಯಲ್ಲಿ ವಾಯು ಒತ್ತಡವು ಭೂಮಿಯ ಮೇಲಿನ ಒತ್ತಡಕ್ಕಿಂತ 90 ಪಟ್ಟು ಅಧಿಕ.
- ಶುಕ್ರದ ಮೇಲ್ಮೈನ ವಿವರವಾದ ನಕ್ಷೆಯನ್ನು ಕಳೆದ 20 ವರ್ಷಗಳಾಲ್ಲಿ ಮಾತ್ರ ತಯಾರಿಸಲಾಗಿದೆ. ವ್ಯಾಪಕವಾಗಿ ಜ್ವಾಲಾಮುಖಿಗಳು ಕಂಡುಬರುವ ಈ ಮೇಲ್ಮೈನಲ್ಲಿ ಇಂದಿಗೂ ಕೆಲವು ಜ್ವಾಲಾಮುಖಿಗಳು ಜೀವಂತವಾಗಿರಬಹುದು.

www.karunaduexams.com

## ಶನಿಯ ಚಂದ್ರ ಎನ್ಸೆಲಾಡಸ್ ವಾಸಕ್ಕೆ ಯೋಗ್ಯ: ನಾಸಾ



ಶನಿಯ ಆರನೇ ಅತಿದೊಡ್ಡ ಉಪಗ್ರಹ ಎನ್ಸೆಲಾಡಸ್ (Enceladus) ಹಾಗೂ ಗುರು ಗ್ರಹದ ನಾಲ್ಕನೇ ಅತಿ ದೊಡ್ಡ ಉಪಗ್ರಹ ಯುರೋಪ ಜೀವಿಗಳು ವಾಸಿಸಲು ಬೇಕಾದ ಅಂಶಗಳಿಂದ ಕೂಡಿದ್ದು, ವಾಸಕ್ಕೆ ಯೋಗ್ಯವೆಂದು ನಾಸಾ ಹೇಳಿದೆ. ಜೀವನಾಧರಕ್ಕೆ ಅಗತ್ಯವಿರುವ ನೀರು, ಚಯಾಪಚಯಕ್ಕೆ ಶಕ್ತಿ ಮೂಲ, ಕಾರ್ಬನ್, ಹೈಡ್ರೋಜನ್, ನೈಟ್ರೋಜನ್, ಆಮ್ಲಜನಕ, ಸಲ್ಫರ್ ಸೇರಿದಂತೆ ಅಗತ್ಯ ರಾಸಾಯನಿಕ ಪದಾರ್ಥಗಳನ್ನು ಈ ಉಪಗ್ರಹಗಳು ಹೊಂದಿವೆ ಎನ್ನಲಾಗಿದೆ. ಕ್ಯಾಸ್ಸಿನಿ ಹೈಗೆನ್ಸ್ ಮಾನವರಹಿತ ಬಾಹ್ಯಕಾಶ ನೌಕೆ ಮತ್ತು ಹಬಲ್ಸ್ ದೂರದರ್ಶಕ ಬಳಸಿ ಈ ಸಂಶೋಧನೆಯನ್ನು ಮಾಡಲಾಗಿದೆ. ಶನಿ ಗ್ರಹ ಮತ್ತು ಅದರ ಉಂಗುರ ರಚನೆಯನ್ನು ತಿಳಿಯಲು ಕ್ಯಾಸ್ಸಿನಿ ಹೈಗೆನ್ಸ್ ಮಾನವರಹಿತ ಬಾಹ್ಯಕಾಶ ನೌಕೆಯನ್ನು 1997ರಲ್ಲಿ ಹಾರಿಬಿಡಲಾಗಿತ್ತು.

**ಪ್ರಮುಖಾಂಶಗಳು**:

- ಗುರು ಗ್ರಹದ ಯುರೋಪ ಉಪಗ್ರಹಗಿಂತ ಶನಿ ಗ್ರಹದ ಎನ್ಸೆಲಾಡಸ್ ಉಪಗ್ರಹ ಜೀವಿಗಳ ಉಗಮಕ್ಕೆ ಹೆಚ್ಚು ಸೂಕ್ತವಾಗಿದೆ ಎಂದು ಸಂಶೋಧನೆಯಲ್ಲಿ ಹೇಳಲಾಗಿದೆ.
- ಎನ್ಸೆಲಾಡಸ್ ಒಂದು ಚಿಕ್ಕ ಹಿಮಾವೃತವಾಗಿರುವ ಉಪಗ್ರಹವಾಗಿದ್ದು, ಅತಿ ಹೆಚ್ಚು ಹೈಡ್ರೋಜನ್ ಕಣಗಳನ್ನು ಹೊಂದಿದೆ.
- ಶೇ 98% ರಷ್ಟು ಅನಿಲವು ನೀರು ಹಾಗೂ ಶೇ 1% ರಷ್ಟು ಜಲಜನಕದಿಂದ ಕೂಡಿದ್ದು, ಇಂಗಾಲದ ಡೈ ಆಕ್ಸೈಡ್ , ಮಿಥೇನ್ ಮತ್ತು ಅಮೋನಿಯ ಅಣುಗಳ ಮಿಶ್ರಣಗಳ ಕೂಡಿದೆಯೆಂದು ಹೇಳಲಾಗಿದೆ.

## ಲೀಥಿಯಂ ಐಯಾನ್ ಬ್ಯಾಟರಿಗಳ ತಯಾರಿಕೆಗೆ ಇಸ್ರೋ ತಂತ್ರಜ್ಞಾನ



ಎಲೆಕ್ಟ್ರಾನಿಕ್ ವಾಹನಗಳಲ್ಲಿ ಬಳುಸವ ಲೀಥಿಯಂ ಐಯಾನ್ ಬ್ಯಾಟರಿಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಲು ತಂತ್ರಜ್ಞಾನ ಒದಗಿಸುವಂತೆ ಇಸ್ರೋಗೆ ಕೇಂದ್ರ ಸರ್ಕಾರ ಸೂಚಿಸಿದೆ. ಇಸ್ರೋದ ವಿಕ್ರಮ್ ಸಾರಭಾಯಿ ಬಾಹ್ಯಕಾಶ ಕೇಂದ್ರ ತ್ರಿಚಕ್ರ ಹಾಗೂ ದ್ವಿಚಕ್ರ ವಾಹನಗಳಲ್ಲಿ ಬಳಸುವ ಲೀಥಿಯಂ ಐಯಾನ್ ಬ್ಯಾಟರಿಗಳನ್ನು ಅಭಿವೃದ್ಧಿಪಡಿಸಿದೆ. ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ ಈ ಬ್ಯಾಟರಿಗಳ ಪರೀಕ್ಷಾರ್ಥ ಪ್ರಯೋಗ ನಡೆಸಿದ್ದು, ತಂತ್ರಜ್ಞಾನ ಉತ್ತಮವಾಗಿದೆ ಎನ್ನಲಾಗಿದೆ. ದೇಶದ ಆಟೋಮೊಬೈಲ್ ಕ್ಷೇತ್ರಕ್ಕೆ ಇದೊಂದು ಮಹತ್ವದ ಬೆಳವಣಿಗೆಯಾಗಿದೆ. ಈಗಾಗಲೇ ಹುಂಡೈ, ನಿಸಾನ್, ಟಾಟಾ ಮೋಟಾರ್ಸ್

www.karunaduexams.com

ಸೇರಿದಂತೆ ದೇಶದ ಪ್ರಮುಖ ಸಂಸ್ಥೆಗಳು ಸ್ಥಳೀಯವಾಗಿ ಲೀಥಿಯ ಐಯಾನ್ ಬ್ಯಾಟರಿಗಳನ್ನು ಅಭಿವೃದ್ಧಿಪಡಿಸುವ ತಂತ್ರಜ್ಞಾನ ವಿನಿಮಯ ಮಾಡಿಕೊಳ್ಳುವಂತೆ ಇಸ್ರೋದ ಮೊರೆ ಹೋಗಿವೆ ಎನ್ನಲಾಗಿದೆ.

**ಅವಶ್ಯಕತೆ:**

ಬ್ಯಾಟರಿ ಎಲೆಕ್ಟ್ರಾನಿಕ್ ವಾಹನಗಳ ಪ್ರಮುಖ ಭಾಗ. ಪ್ರಸ್ತುತ ಲೀಥಿಯಾಂ ಐಯಾನ್ ಬ್ಯಾಟರಿಗಳನ್ನು ಭಾರತ ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದು, ದುಬಾರಿ ಎನಿಸಿದೆ. ಸಾಂಪ್ರದಾಯಿಕ ಬ್ಯಾಟರಿಗಳಿಗೆ ಹೋಲಿಸಿದರೆ ಲೀಥಿಯಂ ಬ್ಯಾಟರಿಗಳು ಕಡಿಮೆ ತೂಕ, ಅತಿ ಹೆಚ್ಚು ಸಾಮರ್ಥ್ಯ ಹಾಗೂ ಕಡಿಮೆ ಗಾತ್ರವನ್ನು ಹೊಂದಿವೆ. ಆದ್ದುದರಿಂದ ಈ ಬ್ಯಾಟರಿಗಳಿಗೆ ಬಹು ಬೇಡಿಕೆ. ದೊಡ್ಡ ಪ್ರಮಾಣದಲ್ಲಿ ಬ್ಯಾಟರಿಗಳನ್ನು ಉತ್ಪಾದಿಸುವುದರಿಂದ ಶೇ 80% ಉತ್ಪಾದನ ವೆಚ್ಚ ಕಡಿಮೆಯಾಗಲಿದೆ ಎಂದು ಸರ್ಕಾರ ಅಂದಾಜಿಸಿದೆ.

**ಬ್ರಬೊ (BRABO): ಪ್ರಪ್ರಥಮ ಸ್ವದೇಶಿ ನಿರ್ಮಿತ ಕೈಗಾರಿಕ ರೋಬೋಟ್**

ಟಾಟಾ ಮೋಟಾರ್ಸ್ನ ಅಂಗ ಸಂಸ್ಥೆಯಾದ "ಟಿಎಎಲ್ ಮ್ಯನುಫಾಕ್ಚರಿಂಗ್ ಸಲ್ಯೂಶನ್" ಬ್ರಬೊ ಕೈಗಾರಿಕ ರೋಬೋಟ್ ಅನ್ನು ಅಭಿವೃದ್ಧಿಪಡಿಸಿದೆ. ಬ್ರಬೊ ಸ್ವದೇಶಿಯವಾಗಿ ವಿನ್ಯಾಸಗೊಳಿಸಿ ಹಾಗೂ ಅಭಿವೃದ್ಧಿಪಡಿಸಿರುವ ದೇಶದ ಮೊದಲ ಕೈಗಾರಿಕ ರೋಬೋಟ್ ಆಗಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗಾಗಿ ಈ ರೋಬೋಟ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಅಧಿಕ ಶ್ರಮದ ಅಗತ್ಯವಿರುವ, ಅಪಾಯ ಹಾಗೂ ಹೆಚ್ಚು ಸಮಯ ಹಿಡಿಯುವ ಕೆಲಸಗಳನ್ನು ಈ ರೋಬೋಟ್ ಸಲೀಸಾಗಿ ನಿರ್ವಹಿಸಲಿದೆ. ಕಚ್ಚಾ ಪದಾರ್ಥಗಳಿಂದ, ಪ್ಯಾಕೇಜ್ ಮಾಡಿ ಸಿದ್ದ ಉತ್ಪನ್ನಗಳನ್ನು ತಯಾರಿಸುವವರೆಗೆ ರೋಬೋಟ್ ಅನ್ನು ಬಳಸಬಹುದಾಗಿದೆ.

- ಬ್ರಬೊ ಅನ್ನು ಪುಣೆಯ ಟಿಎಎಲ್ ಫ್ಯಾಕ್ಟರಿ ಅಭಿವೃದ್ಧಿಪಡಿಸಿದೆ. ರೋಬೋ ಕೈಯಲ್ಲಿ ಬಳಸುವ ಮೋಟಾರ್ ಮತ್ತು ಡ್ರೈವ್ಸ್ ಹೊರತುಪಡಿಸಿ ಮಿಕ್ಕ ಎಲ್ಲಾ ಭಾಗಗಳನ್ನು ಭಾರತದಲ್ಲಿಯೇ ತಯಾರಿಸಲಾಗಿದೆ.
- ಬ್ರಬೊ ರೋಬೋಟ್ ಕಾರ್ಯಾಚರಣೆ ಸುಲಭವಾಗಿದ್ದು, ಸಿಂಗಲ್ ಫೇಸ್ ವಿದ್ಯುತ್ ನಲ್ಲಿ ಕಾರ್ಯನಿರ್ವಹಿಸಲಿದೆ.
- ಕೈಗಾರಿಕ ರೋಬೋಟ್ ಗಳು ಉತ್ಪಾದನೆಯ ವೆಚ್ಚವನ್ನು ತಗ್ಗಿಸಲಿವೆ. ಅಲ್ಲದೆ ಉತ್ಪಾದನೆಯ ಗುಣಮಟ್ಟ ಹಾಗೂ ಉತ್ಪಾದನ ಸಾಮರ್ಥ್ಯ ಸಹ ಹೆಚ್ಚಾಗಲಿದೆ.

www.karunaduexams.com

## ಎಲೆಕ್ಟ್ರಾನಿಕ್ ಮತಯಂತ್ರದ ಜೊತೆಗೆ VVPAT ಬಳಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ



ಎಲೆಕ್ಟ್ರಾನಿಕ್ ಮತ ಯಂತ್ರ(ಇವಿಎಂ)ಗಳ ಜತೆಗೆ ಮತ ಪರಿಶೀಲನಾ ವ್ಯವಸ್ಥೆಯನ್ನು (VVPAT (Voter Verifiable Paper Audit Trial)) ಅಳವಡಿಸುವ ಚುನಾವಣಾ ಆಯೋಗದ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. 2019ರಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಈ ಮತಯಂತ್ರಗಳನ್ನು ಬಳಸಲಾಗುವುದು. ಸುಮಾರು 16,15,000 ಮತಯಂತ್ರಗಳನ್ನು ಖರೀದಿಸಲು ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದ್ದು, ಇದಕ್ಕಾಗಿ ರೂ 3,173.45 ಕೋಟಿ ತಗುಲಲಿದೆ. ಬೆಂಗಳೂರು ಮೂಲದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಹಾಗೂ ಹೈದ್ರಾಬಾದಿನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್ (ECIL) ಸಂಸ್ಥೆಗಳನ್ನು ಮತಯಂತ್ರಗಳ ತಯಾರಿಗೆ ಕೇಂದ್ರ ಸರ್ಕಾರ ಆಯ್ಕೆಮಾಡಿದೆ. 16 ಲಕ್ಷ ವಿವಿಪ್ಯಾಟ್ ನಿರ್ಮಿಸಲು ಇಸಿಐಎಲ್ ಮತ್ತು ಬಿಇಎಲ್ ಸಂಸ್ಥೆಗಳಿಗೆ 30 ತಿಂಗಳ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ.

**ಹಿನ್ನಲೆ**:

ಎಲ್ಲ ಮತ ಕೇಂದ್ರಗಳಲ್ಲಿ ವಿವಿಪ್ಯಾಟ್ ಯಂತ್ರಗಳನ್ನು ಬಳಸಲು ಅಗತ್ಯವಿರುವ ಸಮಯದ ಬಗ್ಗೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಕೇಳಿತ್ತು. 2019ರಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ವಿವಿಪ್ಯಾಟ್ ಗಳನ್ನು ಬಳಸಿ ಚುನಾವಣೆ ನಡೆಸುವಂತೆ ಸುಪ್ರೀಂಕೋರ್ಟ್ ಚುನಾವಣಾ ಆಯೋಗಕ್ಕೆ ಸೂಚಿಸಿತ್ತು. ಈ ಮುಂಚೆ 2013ರಲ್ಲಿ ಸುಪ್ರೀಂಕೋರ್ಟ್ ಎಲೆಕ್ಟ್ರಾನಿಕ್ ವಿವಿಪ್ಯಾಟ್ ಮತಯಂತ್ರಗಳನ್ನು 2014ರ ಚುನಾವಣೆಯಲ್ಲಿ ವಿವಿಧ ಹಂತಗಳಲ್ಲಿ ಅಳವಡಿಸಿಕೊಳ್ಳುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿತ್ತು. ಅಲ್ಲದೆ ಮತದಾನದಲ್ಲಿ ಪಾರದರ್ಶಕತೆ ತರಲು ಕಾಗದ ಮತ ಪತ್ರಗಳ ಬಳಕೆ ತರುವಂತೆ 16 ಪಕ್ಷಗಳು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದವು.

## ಬಾಹ್ಯಕಾಶದಲ್ಲಿ ಹೊಸ ದಾಖಲೆ ಬರೆದ ಪೆಗ್ಗಿ ವಿಟ್ಸನ್



ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಅತಿ ಹೆಚ್ಚು ಕಾಲ ಕಳೆದ ಮಹಿಳೆ ಎಂಬ ಹೆಗ್ಗಳಿಕೆಗೆ ಅಮೆರಿಕದ ಗಗನಯಾತ್ರಿ ಪೆಗ್ಗಿ ವಿಟ್ಸನ್ ಪಾತ್ರರಾಗಿದ್ದಾರೆ. ಪೆಗ್ಗಿ ಅವರು 577 ದಿನಗಳನ್ನು ಬಾಹ್ಯಾಕಾಶ ನಿಲ್ದಾಣದಲ್ಲಿ ಕಳೆದಿದ್ದಾರೆ. ಆ ಮೂಲಕ ಈ ಹಿಂದೆ ಗಗನಯಾತ್ರಿ ಜೆಫ್ ವಿಲಿಯಮ್ಸ್ ಅವರು 534 ದಿನ ಬಾಹ್ಯಾಕಾಶ ನಿಲ್ದಾಣದಲ್ಲಿ ಉಳಿದು ನಿರ್ಮಿಸಿದ ದಾಖಲೆಯನ್ನು ಅಳಿಸಿ ಹಾಕಿದ್ದಾರೆ. ಪೆಗ್ಗಿ ಅವರ ಈ ಸಾಧನೆಯನ್ನು ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಎಕ್ಸಿಪಿಡಿಶನ್-51 ರಲ್ಲಿ ಸ್ಪೇಸ್ ಕಮಾಂಡರ್ ಆಗಿ ಪೆಗ್ಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನವೆಂಬರ್ 2016ರಲ್ಲಿ ಅಂತಾರಾಷ್ಟ್ರೀಯ ಬಾಹ್ಯಕಾಶ ನಿಲ್ದಾಣಕ್ಕೆ ರಷ್ಯಾದ ಸೊಯುಝ್ ನೌಕೆ ಮೂಲಕ ಅವರನ್ನು ಕಳುಹಿಸಿ ಕೊಡಲಾಗಿತ್ತು. ಇದಕ್ಕೂ ಮೊದಲು 377 ದಿನ ಬಾಹ್ಯಾಕಾಶ

ನಿಲ್ದಾಣದಲ್ಲಿ ಕಳೆದಿದ್ದರು. ಭೂಮಿಗೆ ಮರಳುವ ವೇಳೆಗೆ ಬಾಹ್ಯಾಕಾಶ ನಿಲ್ದಾಣದಲ್ಲಿ ಅವರು ಕಳೆದ ದಿನಗಳು 650ಅನ್ನೂ ಮೀರಲಿದೆ ಎಂದು ನಾಸಾ ತಿಳಿಸಿದೆ.

- 2008ರಲ್ಲಿ ಬಾಹ್ಯಾಕಾಶ ನಿಲ್ದಾಣದ ಸಾರಥ್ಯ ವಹಿಸಿಕೊಳ್ಳುವ ಮೂಲಕ ಈ ಗೌರವ ಪಡೆದ ಮೊದಲ ಮಹಿಳೆ ಎನಿಸಿಕೊಂಡಿದ್ದಾರೆ. ಎರಡು ಬಾರಿ ಈ ಹುದ್ದೆಯನ್ನು ಅಲಂಕರಿಸಿರುವುದು ಸಹ ದಾಖಲೆ ಎನಿಸಿದೆ.
- ಪೆಗ್ಗಿ, 53 ಗಂಟೆಗೂ ಹೆಚ್ಚು ಕಾಲ ಬಾಹ್ಯಾಕಾಶ ನಡಿಗೆ ನಡೆಸಿದ ದಾಖಲೆಯನ್ನೂ ಮಾರ್ಚ್‌ನಲ್ಲಿ ತಮ್ಮದಾಗಿಸಿಕೊಂಡಿದ್ದರು.
- ಭಾರತ ಮೂಲದ ಅಮೆರಿಕದ ನಿವಾಸಿ ಸುನಿತಾ ವಿಲಿಯಮ್ಸ್ ಅವರು 50 ಗಂಟೆ 40 ನಿಮಿಷದ ಅವಧಿಯಲ್ಲಿ ಒಟ್ಟು ಏಳು ಬಾರಿ ಬಾಹ್ಯಾಕಾಶ ನಡಿಗೆ ಮಾಡಿದ್ದರು.
- 1980ರಲ್ಲಿ ನಾಸಾದಲ್ಲಿ ವೃತ್ತಿ ಬದುಕು ಆರಂಭಿಸಿದ ಪೆಗ್ಗಿ, ಸಂಶೋಧನೆ ಸಂಬಂಧಿತ ವಿವಿಧ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. 1992ರಲ್ಲಿ ಷಟ್ಲ್ ಮಿರ್ ಕಾರ್ಯಕ್ರಮದ ಯೋಜನಾ ವಿಜ್ಞಾನಿಯಾಗಿ ನೇಮಕವಾಗಿದ್ದರು. 2002ರಲ್ಲಿ ಅವರು ಮೊದಲ ಬಾರಿಗೆ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿದ್ದರು. ಆಗ 184 ದಿನಗಳಲ್ಲಿ ಅಲ್ಲಿ ಕಳೆದಿದ್ದರು.
- 57ನೇ ವರ್ಷದವರಾದ ಇವರು ಬಾಹ್ಯಕಾಶಕ್ಕೆ ತೆರಳಿದ ಹಿರಿಯ ಮಹಿಳೆ ಸಹ ಆಗಿದ್ದಾರೆ.

**<u>ಶನಿ ಗ್ರಹದ ಉಂಗುರುಗಳ ನಡುವೆ ಯಶಸ್ವಿಯಾಗಿ ಸಂಚರಿಸಿದ ಕ್ಯಾಸಿನಿ ನೌಕೆ</u>**



ನಾಸಾದ ಕ್ಯಾಸಿನಿ ಬಾಹ್ಯಕಾಶ ನೌಕೆ ಶನಿ ಗ್ರಹ ಮತ್ತು ಅದರ ಉಂಗುರಗಳ ನಡುವೆ ಅತಿ ಕಿರು ಅಂತರದಲ್ಲಿ ನುಸುಳಿಕೊಂಡು ಹೋಗುವ ತನ್ನ ಪ್ರಪ್ರಥಮ ಪ್ರಯತ್ನದಲ್ಲಿ ಕ್ಯಾಸಿನಿ ಯಶಸ್ವಿಯಾಗಿದೆ. ಕ್ಯಾಸಿನಿ ಬಾಹ್ಯಕಾಶ ನೌಕೆ 22 ಕಕ್ಷೆಯಲ್ಲಿ ಅಂತಿಮ ಕಕ್ಷೆಯಲ್ಲಿ ಸಂಚಾರ ಪ್ರಾರಂಭಿಸಿದೆ. ಸೆಪ್ಟೆಂಬರ್ 15, 2017ರಂದು ಶನಿಗ್ರಹವನ್ನು ಸಂಪರ್ಕಸಲಿದ್ದು, 20 ವರ್ಷಗಳ ಪ್ರಯಾಣವನ್ನು ಅಂತಿಮಗೊಳಿಸಲಿದೆ. ಕ್ಯಾಸಿನಿ ಉಪಗ್ರಹ ಈಗಾಗಲೇ ಶನಿ ಗ್ರಹ ಮತ್ತು ಅದರ ಉಂಗುರಗಳ ನಡುವೆ ಯಶಸ್ವಿಯಾಗಿ ಸಂಚರಿಸಿದೆ. ಈ ಹಿಂದೆ ಯಾವುದೇ ಬಾಹ್ಯಕಾಶ ನೌಕೆ ಈ ಸಾಧನೆಯನ್ನು ಮಾಡಿರಲಿಲ್ಲ. ಇನ್ನು 21 ಬಾರಿ ಶನಿ ಮತ್ತು ಅದರ ಉಂಗುರಗಳ ನಡುವೆ ಹಾದುಹೋಗಲಿದ್ದು, ಈ ಸಂದರ್ಭದಲ್ಲಿ ಶನಿ ಮತ್ತು ಅದರ ಉಂಗುರ ರಚನೆಗಳ ಬಗ್ಗೆ ಮಾಹಿತಿಯನ್ನು ರವಾನಿಸಲಿದೆ.

**ಕ್ಯಾಸಿನಿ ಬಾಹ್ಯಕಾಶ ನೌಕೆ:**

- ಕ್ಯಾಸ್ಸಿನಿ ಬಾಹ್ಯಾಕಾಶ ನೌಕೆಗೆ 17 ನೇ ಶತಮಾನದ ಖಗೋಳಶಾಸ್ತ್ರಜ್ಞ ಜಿಯೊವನ್ನಿ ಕ್ಯಾಸ್ಸಿನಿ ಅವರ ಹೆಸರನ್ನಿಡಲಾಗಿದೆ.

- ಅಕ್ಟೋಬರ್ 1997ರಲ್ಲಿ ಬಾಹ್ಯಾಕಾಶಕ್ಕೆ ಈ ನೌಕೆಯನ್ನು ಹಾರಿಬಿಡಲಾಯಿತು . ಇದು ನಾಸಾ, ಯುರೋಪಿಯನ್ ಸ್ಪೇಸ್ ಏಜೆನ್ಸಿ (ಇಎಸ್ಎ) ಮತ್ತು ಇಟಾಲಿಯನ್ ಸ್ಪೇಸ್ ಏಜೆನ್ಸಿ, ಏಜೆನ್ಜಿಯಾ ಸ್ಪಾಸಿಯಾಲ್ ಇಟಲಿನಾ (ಎಎಸ್ಐ)ಯ ಜಂಟಿ ಪ್ರಯತ್ನವಾಗಿದೆ.
- ಶನಿ ಗ್ರಹಕ್ಕೆ ಭೇಟಿ ನೀಡಿದ ನಾಲ್ಕನೇ ಬಾಹ್ಯಕಾಶ ನೌಕೆ ಹಾಗೂ ಶನಿ ಗ್ರಹದ ಕಕ್ಷೆಯನ್ನು ಪ್ರವೇಶಿಸಿದ ಮೊದಲ ಬಾಹ್ಯಕಾಶ ನೌಕೆಯಾಗಿದೆ.

**<u>ಅಗ್ನಿ-3 ಖಂಡಾಂತರ ಕ್ಷಿಪಣಿ ಪರೀಕ್ಷೆ ಯಶಸ್ವಿ</u>**



ಅಣ್ವಸ್ತ್ರ ಒಯ್ಯಬಲ್ಲ ಸಾಮರ್ಥ್ಯದ ಮಧ್ಯಂತರ ಶ್ರೇಣಿಯ ಖಂಡಾಂತರ ಕ್ಷಿಪಣಿ ಅಗ್ನಿ–3 ಅನ್ನು ಒಡಿಶಾ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಲ್ಲಿ ಭಾರತ ಯಶಸ್ವಿಯಾಗಿ ಪರೀಕ್ಷಾರ್ಥ ಉಡಾವಣೆ ಮಾಡಿದೆ. ಸೇನೆಯ ಕ್ಷಿಪಣಿ ನಿರ್ವಹಣಾ ಘಟಕ 'ಸ್ಟ್ರಾಟೆಜಿಕ್ ಫೋರ್ಸಸ್ ಕಮಾಂಡ್' ಹಾಗೂ ಡಿಆರ್ ಡಿಒ ಸಹಯೋಗದಲ್ಲಿ ಈ ಪರೀಕ್ಷೆ ನಡೆಸಲಾಯಿತು. ಅಗ್ನಿ ಕ್ಷಿಪಣಿಯ ಕಾರ್ಯಾಚರಣೆ ಸಾಮರ್ಥ್ಯವನ್ನು ಧೃಡಪಡಿಸಿಕೊಳ್ಳುವ ಸಲುವಾಗಿ ಈ ಪರೀಕ್ಷೆಯನ್ನು ಕೈಗೊಳ್ಳಲಾಗಿತ್ತು. ಅಗ್ನಿ-III ಕ್ಷಿಪಣಿಯನ್ನು ಜೂನ್ 2011ರಲ್ಲಿ ಸೇನೆಗೆ ಸೇರ್ಪಡೆಗೊಳಿಸಲಾಗಿದೆ.

**ವೈಶಿಷ್ಟ್ಯತೆ:**

- ಅಗ್ನಿ-III ಕ್ಷಿಪಣಿ ಎರಡು ಹಂತದ ಘನ ನೋದಕ ವ್ಯವಸ್ಥೆಯನ್ನು ಹೊಂದಿದೆ. ಅತಿ ವೇಗದಲ್ಲಿ ವಾತಾವರಣವನ್ನು ಪುನರ್ ಪ್ರವೇಶಿಸುವ ಸಾಮರ್ಥ್ಯವನ್ನು ಹೊಂದಿದೆ. 17 ಮೀಟರ್ ಉದ್ದ ಹಾಗೂ 2 ಮೀಟರ್ ವ್ಯಾಸ ಹೊಂದಿರುವ ಇದು 2,200 ಕಿ.ಗ್ರಾಂ ತೂಕವಿದೆ. 3000ಕಿ.ಮೀ.ಗಿಂತಲೂ ದೂರದ ಗುರಿ ತಲುಪಬಲ್ಲ ಈ ಕ್ಷಿಪಣಿ 1.5 ಟನ್ ತೂಕದ ಪರಮಾಣು ಸಿಡಿತಲೆಯನ್ನೂ ಸಹ ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದೆ.
- ಅಣ್ವಸ್ತ್ರ ಒಯ್ಯಬಲ್ಲ ಸಾಮರ್ಥ್ಯವನ್ನು ಹೊಂದಿರುವ ಈ ಕ್ಷಿಪಣಿ 3000 – 5000 ಕಿ.ಮೀ ವರೆಗೆ ಸಾಗಲಿದೆ.

www.karunaduexams.com

# ಕ್ರೀಡೆ

**ಪಿ. ವಿ. ಸಿಂಧು ಮುಡಿಗೆ ಇಂಡಿಯಾ ಓಪನ್ ಸೂಪರ್ ಸರಣಿ ಪ್ರಶಸ್ತಿ**



ಒಲಂಪಿಕ್ ಪದಕ ವಿಜೇತೆ ಭಾರತದ ಉದಯೋನ್ಮುಖ ಆಟಗಾರ್ತಿ ಪಿ.ವಿ. ಸಿಂಧು ಅವರು ಇಂಡಿಯಾ ಓಪನ್ ಸೂಪರ್ ಸರಣಿಯ ಕಿರೀಟವನ್ನು ತಮ್ಮ ಮುಡಿಗೇರಿಸಿಕೊಂಡರು. ಸಿರಿಫೋರ್ಟ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಿ.ವಿ. ಸಿಂಧು ಅವರು 21–19, 21–16ರ ನೇರ ಗೇಮ್‌ಗಳಿಂದ ಸ್ಪೇನ್‌ನ ಕ್ಯಾರೊಲಿನಾ ಮರಿನ್ ಅವರ ವಿರುದ್ಧ ಜಯಿಸಿದರು.

**ಪುರುಷರ ಸಿಂಗಲ್ಸ್ ನಲ್ಲಿ ವಿಕ್ಟರ್‌ಗೆ ಪ್ರಶಸ್ತಿ:**

ಪುರುಷರ ವಿಭಾಗದ ಸಿಂಗಲ್ಸ್‌ನಲ್ಲಿ ಡೆನ್ಮಾರ್ಕಿನ ವಿಕ್ಟರ್ ಅಕ್ಸೆಲ್ಸನ್ 21–13, 21–10 ನೇರ ಗೇಮ್ ಗಳಿಂದ ಚೈನಿಸ್ ತೈಪೆಯ ಟೀನ್ ಚೆನ್ ಚೌ ಅವರನ್ನು ಸೋಲಿಸಿದರು.

**ಡಬಲ್ಸ್ಪ್ರಶಸ್ತಿ:**

ಪುರುಷರ ಡಬಲ್ಸ್‌ನಲ್ಲಿ ಇಂಡೋನೇಷ್ಯಾದ ಜೋಡಿ ಮಾರ್ಕಸ್ ಫರ್ನಾಲ್ಡಿ ಗಿಡಾನ್ ಮತ್ತು ಕೆವಿನ್ ಸಂಜಯಾ ಸುಕಾಮುಲ್ಜೊ 21–11, 21–15ರಿಂದ ಆರನೇ ಶ್ರೇಯಾಂಕದ ರಿಕಿ ಕರುಂದಾಸುವಾರ್ಡಿ ಮತ್ತು ಅಂಗಾ ಪ್ರತಾಮಾ ವಿರುದ್ಧ ಜಯ ಗಳಿಸಿದರು.

**ಮಹಿಳೆಯರಡಬ್ಬಲ್ಸ್:**

ಮಹಿಳೆಯರ ಡಬಲ್ಸ್ ಫೈನಲ್‌ನಲ್ಲಿ ಜಪಾನ್ ಜೋಡಿ ಶಿಹೊ ತನಾಕಾ ಮತ್ತು ಕೊಹರು ಯೊನೆಮೊಟೊ 16–21, 21–19, 21–10ರಿಂದ ಮೂರನೇ ಶ್ರೇಯಾಂಕದ ಫುಕುಮನ್ ಮತ್ತು ಕುರುಮಿ ಯೊನಾವೊ ವಿರುದ್ಧ ಗೆದ್ದರು.

**ಮಿಶ್ರ ಡಬ್ಬಲ್ಸ್**:

ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಚೀನಾದ ಸೀವಿ ಝೆಂಗ್ ಮತ್ತು ಕಿಂಗ್‌ಚೆನ್ ಚೆನ್ ಅವರು 22–24, 21–14, 21–17 ರಿಂದ ತಮ್ಮದೇ ದೇಶದ ಲೂ ಕೈ ಮತ್ತು ಹುವಾಂಗ್ ಯಾಕಿಯಾಂಗ್ ವಿರುದ್ಧ ಗೆದ್ದರು.

www.karunaduexams.com

## ಮಿಯಾಮಿ ಓಪನ್ ಟೆನ್ನಿಸ್: ಜೊಹಾನ್ನಾ ಕೊಂಥಾ, ಫೆಡರರ್ ಗೆ ಪ್ರಶಸ್ತಿ

**ಮಹಿಳೆಯ ಸಿಂಗಲ್ಸ್:**



ಆಸ್ಟ್ರೇಲಿಯಾ ಮೂಲದ ಜೊಹಾನ್ನಾ ಕೊಂಥಾ ಅವರು ಮಿಯಾಮಿ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಮಹಿಳಾ ವಿಭಾಗದ ಫೈನಲ್ ಪಂದ್ಯದಲ್ಲಿ ಕೊಂಥಾ 6–4, 6–3ರಲ್ಲಿ ಡೆನ್ಮಾರ್ಕ್‌ನ ಕ್ಯಾರೋಲಿನ್ ವೋಜ್ನಿಯಾಕಿ ಎದುರು ಗೆಲುವು ಪಡೆದು ಡಬ್ಲ್ಯುಟಿಎ ಟೂರ್ನಿಯಲ್ಲಿ ಚೊಚ್ಚಲ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಹಿಂದಿನ 40 ವರ್ಷಗಳ ಅವಧಿಯಲ್ಲಿ ಬ್ರಿಟನ್‌ನ ಆಟಗಾರ್ತಿಯೊಬ್ಬರು ದೊಡ್ಡ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿರಲಿಲ್ಲ. 1977ರಲ್ಲಿ ವರ್ಜಿನಿಯಾ ವೇಡ್ ವಿಂಬಲ್ಡನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದು ಬ್ರಿಟನ್ ಆಟಗಾರ್ತಿಯ ಹಿಂದಿನ ಶ್ರೇಷ್ಠ ಸಾಧನೆ ಎನಿಸಿತ್ತು.

**ಪುರುಷರ ಸಿಂಗಲ್ಸ್**:

ಮಿಯಾಮಿ ಓಪನ್ ಟೆನಿಸ್ ಪಂದ್ಯಾವಳಿಯ ಪುರುಷರ ವಿಭಾಗದಲ್ಲಿ ಫೈನಲ್ ಪಂದ್ಯದಲ್ಲಿ ಸ್ವಿಟ್ಜರ್‌ಲೆಂಡ್‌ನ ರೋಜರ್ ಫೆಡರರ್ ಗೆಲುವು ಸಾಧಿಸಿದರು. ರಫೆಲ್ ನಡಾಲ್ ವಿರುದ್ಧ 6–3, 6–4 ಅಂತರದ ನೇರ ಸೆಟ್‌ಗಳ ಗೆಲುವು ದಾಖಲಿಸಿ ಮಿಯಾಮಿ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

## ಸಾಗರ್ ಬಹೇತಿ: ಬೋಸ್ಟನ್ ಮ್ಯಾರಥಾನ್ ನಲ್ಲಿ ಸ್ಪರ್ಧಿಸಲಿರುವ ಭಾರತದ ಮೊದಲ ದೃಷ್ಟಿಹೀನ ರನ್ನರ್



ಪ್ರತಿಷ್ಠಿತ ಬೋಸ್ಟನ್ ಮ್ಯಾರಥಾನಲ್ಲಿ ಸ್ಪರ್ಧಿಸಿದ ಭಾರತದ ಮೊದಲ ದೃಷ್ಟಿಹೀನ ರನ್ನರ್ ಎಂಬ ಖ್ಯಾತಿಗೆ ಸಾಗರ್ ಬಹೇತಿ ಅವರು ದಾಖಲೆ ಬರೆದಿದ್ದಾರೆ. 31 ವರ್ಷದ ಬೆಂಗಳೂರು ಮೂಲದ ಬಹೇತಿ ಅವರು 42.16 ಕಿ.ಮೀ ದೂರವನ್ನು ನಾಲ್ಕು ಗಂಟೆಗಳಲ್ಲಿ ಕ್ರಮಿಸಿದರು. ಸುಮಾರು 30 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಮ್ಯಾರಥಾನಲ್ಲಿ ಬಹೇತಿ ಅವರು 121ನೇ ಆವೃತ್ತಿಯ ಮ್ಯಾರಥಾನ್ನಲ್ಲಿ ಭಾಗವಹಿಸಿದ್ದರು.

- ಸಾಗರ್ ಅಂಧ ಹಾಗೂ ದೃಷ್ಟಿಹೀನ ಸಂಸ್ಥೆಯಾದ ಮೆಸಾಚುಸೆಟ್ಸ್ ಅಸೋಸಿಯೇಷನ್ ಫಾರ್ ಬ್ಲೈಂಡ್ ಬೆಂಬಲದೊಂದಿಗೆ ಮ್ಯಾರಥಾನ್‌ನಲ್ಲಿ ಪಾಲ್ಗೊಂಡರು.
- ವೃತ್ತಿಯಲ್ಲಿ ಉದ್ಯಮಿಯಾಗಿರುವ ಸಾಗರ್ ಅವರು ಚಿಕ್ಕ ವಯಸ್ಸಿನಲ್ಲಿಯೇ ಕಣ್ಣಿನ ಅಕ್ಷಿಪಟಲದ ಸಮಸ್ಯೆ ಎದುರಿಸಿದ್ದರು, 2013ರ ವೇಳೆಗೆ ಸಂಪೂರ್ಣವಾಗಿ ಅಂಧರಾಗಿ ಬಿಟ್ಟಿದ್ದರು.

www.karunaduexams.com

- ಬಿಬ್ ನಂಬರ್ 26652 ಧರಿಸಿ ಓಡಿದ್ದ ಸಾಗರ್, ಭಾರತದ ತ್ರಿವರ್ಣ ಧ್ವಜವನ್ನು ಹಿಡಿದು ಅಂತಿಮ ಗೆರೆ ಮುಟ್ಟಿದ್ದರು.

**ಬೋಸ್ಟನ್ ಯಾಕೆ ಕಠಿಣ?**

ವಿಶ್ವದ ಇತರೆಡೆ ನಡೆಯುವ ಮ್ಯಾರಥಾನ್‌ಗಳಲ್ಲಿ ಸ್ಪರ್ಧಿಸಬೇಕೆಂದರೆ ನೋಂದಣಿ ಮಾಡಿಕೊಂಡರೆ ಸಾಕು. ಆದರೆ, ಬೋಸ್ಟನ್ ಮ್ಯಾರಥಾನ್‌ನಲ್ಲಿ ಸ್ಪರ್ಧಿಸಲು ಅರ್ಹತಾ ಸಮಯ ಮುಖ್ಯವಾಗಿತ್ತದೆ. 18 ರಿಂದ 34 ವರ್ಷದ ಪುರುಷರಿಗೆ 3 ಗಂಟೆ 5 ನಿಮಿಷದ ಅರ್ಹತಾ ಸಮಯದ ಮಾನದಂಡವಿದ್ದರೆ, ದೃಷ್ಟಿಹೀನ ಪುರುಷ ಹಾಗೂ ಮಹಿಳಾ ರನ್ನರ್‌ಗಳು ಮ್ಯಾರಥಾನ್‌ಗೆ ಅರ್ಹತೆ ಪಡೆಯಬೇಕಾದಲ್ಲಿ 5 ಗಂಟೆಯ ಒಳಗಾಗಿ ರೇಸ್ ಕ್ರಮಿಸಿರಬೇಕು.

**<u>ರಾಷ್ಟ್ರೀಯ ಯುವ ಅಥ್ಲೇಟಿಕ್ಸ್ ಕ್ರೀಡಾಕೂಟ: ಹರಿಯಾಣ ಚಾಂಪಿಯನ್</u>**



ರಾಷ್ಟ್ರೀಯ ಯುವ ಅಥ್ಲೇಟಿಕ್ಸ್ ಕ್ರೀಡಾಕೂಟದಲ್ಲಿ ಕೇರಳವನ್ನು ಹಿಂದಿಕ್ಕಿ ಹರಿಯಾಣ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಕಳೆದ ಐದು ವರ್ಷಗಳಿಂದ ಕೇರಳ ಮೊದಲ ಸ್ಥಾನವನ್ನು ಕಾಯ್ದುಕೊಂಡಿತ್ತು. ಈ ಬಾರಿ 116.5 ಸಮಗ್ರ ಅಂಕಗಳೊಂದಿಗೆ ಹರಿಯಾಣ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಕೇರಳ ರನ್ನರ್ ಆಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

- ಬಾಲಕಿಯರ ವಿಭಾಗದಲ್ಲಿ ಕೇರಳ ಮೊದಲ ಸ್ಥಾನ ಪಡೆದುಕೊಂಡರೆ, ಬಾಲಕರ ವಿಭಾಗದಲ್ಲಿ ಹರಿಯಾಣ ಮೊದಲ ಸ್ಥಾನವನ್ನು ತನ್ನದಾಗಿಸಿಕೊಂಡಿತು.
- ರಾಷ್ಟ್ರೀಯ ಯುವ ಅಥ್ಲೇಟಿಕ್ಸ್ ಕ್ರೀಡಾಕೂಟ GMC ಬಾಲಯೋಗಿ ಅಥ್ಲೇಟಿಕ್ ಸ್ಟೇಡಿಯಂ, ಗಚ್ಚಿಬೋಲಿಯಲ್ಲಿ ಆಯೋಜನೆಗೊಂಡಿತ್ತು. ಏಪ್ರಿಲ್ 21 ರಿಂದ 23 ರವರೆಗೆ ನಡೆದ ಕ್ರೀಡಾಕೂಟದಲ್ಲಿ 505 ಅಥ್ಲೇಟಿಕ್ ಗಳು ಭಾಗವಹಿಸಿದ್ದರು.
- ರಾಷ್ಟ್ರೀಯ ಯುವ ಅಥ್ಲೇಟಿಕ್ಸ್ ಕ್ರೀಡಾಕೂಟ ಮೇ ನಲ್ಲಿ ನಡೆಯಲಿರುವ ಮುಂಬರುವ ಏಷ್ಯಾ ಚಾಂಪಿಯನ್ ಷಿಪ್ ಹಾಗೂ ಜುಲೈನಲ್ಲಿ ನೈರೊಬಿನಲ್ಲಿ ನಡೆಯಲಿರುವ ವಿಶ್ವ ಯುವ ಚಾಂಪಿಯನ್ ಷಿಪ್ ಗೆ ಅಥ್ಲೇಟಿಕ್ಸ್ ಗಳನ್ನು ಆಯ್ಕೆಮಾಡಲು ಪ್ರಮುಖ ಪಾತ್ರವಹಿಸಲಿದೆ.

www.karunaduexams.com

# ಇತರೆ: ಚೂರು ಪಾರು

- **ಗಿಲ್ಬರ್ಟ್ ಬೇಕರ್ ನಿಧನ**: ಸಲಿಂಗಕಾಮಿ ಸಮುದಾಯದ ಸಂಕೇತವಾಗಿ ಕಾಮನಬಿಲ್ಲಿನ ಬಣ್ಣಗಳ ಬಾವುಟ ತಯಾರಿಸಿದ್ದ ಕಲಾವಿದ ಗಿಲ್ಬರ್ಟ್ ಬೇಕರ್ ಮರಣ ಹೊಂದಿದ್ದಾರೆ. ಸಲಿಂಗಕಾಮಿಗಳ ಸ್ವಾತಂತ್ರ್ಯ ದಿನದ ಆಚರಣೆಗಾಗಿ 1978ರಲ್ಲಿ ಅವರು ಎಂಟು ಬಣ್ಣಗಳಿರುವ ಬಾವುಟ ವಿನ್ಯಾಸಗೊಳಿಸಿದ್ದರು. ಬಳಿಕ ಅದನ್ನು ಆರು ಬಣ್ಣಗಳಿಗೆ ಬದಲಿಸಲಾಗಿತ್ತು. ಸಲಿಂಗಕಾಮಿಗಳ ಹಕ್ಕಿನ ಪರವಾಗಿ ಹೋರಾಟ ನಡೆಸಿದ್ದ ಬೇಕರ್, 'ಲೈಂಗಿಕತೆ ಮಾನವನ ಹಕ್ಕು' ಎಂದು ಪ್ರತಿಪಾದಿಸಿದ್ದರು.
- **ಹೈದ್ರಾಬಾದ್ ದೇಶದ ಮೊದಲ ಗಿಗಾ ವೇಗದ ಇಂಟರ್ನೆಟ್ ಹೊಂದಿರುವ ನಗರ:** ಹೈದ್ರಾಬಾದ್ ದೇಶದ ಮೊದಲ ಗಿಗಾ ವೇಗದ ಇಂಟರ್ನೆಟ್ ಹೊಂದಿರುವ ನಗರವೆಂಬ ಖ್ಯಾತಿಗೆ ಒಳಗಾಗಿದೆ. ಬೆಂಗಳೂರು ಮೂಲದ ಎಟ್ರಿಯಾ ಕರ್ನರ್ಜನ್ಸ್ ಟೆಕ್ನಾಲಾಜಿಸ್ ಪೈಬರ್ ನೆಟ್ ಪ್ರತಿ ಸೆಕೆಂಡಿಗೆ ಒಂದು ಗಿಗಾಬೈಟ್ ವೇಗದ ಇಂಟರ್ನೆಟ್ ವ್ಯವಸ್ಥೆಯನ್ನು ಹೈದ್ರಾಬಾದಿನಲ್ಲಿ ಅನಾವರಣಗೊಳಿಸಿದೆ. ಫೈಬರ್ ಆಪ್ಟಿಕ್ ತಂತ್ರಜ್ಞಾನದಿಂದ ಕಾರ್ಯನಿರ್ವಹಿಸುವ ಇಂಟರ್ನೆಟ್ ಸಾಮಾನ್ಯ ನೆಟ್ ವ್ಯವಸ್ಥೆಗಿಂತ 400 ಪಟ್ಟು ಹೆಚ್ಚು ವೇಗವನ್ನು ಹೊಂದಿದೆ.
- **ಸಿಬಿಇಸಿ ಅಧ್ಯಕ್ಷರಾಗಿ ವನಜಾ ಸರ್ನ ನೇಮಕ**: ಕೇಂದ್ರ ಅಬಕಾರಿ ಮತ್ತು ಸುಂಕ ಮಂಡಳಿ (ಸಿಬಿಇಸಿ)ಯ ಅಧ್ಯಕ್ಷರಾಗಿ ವನಜಾ ಎನ್ ಸರ್ನ ಅವರು ನೇಮಕಗೊಂಡಿದ್ದಾರೆ. ನಜೀಬ್ ಖಾನ್ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಸರ್ನ ಅವರನ್ನು ನೇಮಕ ಮಾಡಲಾಗಿದೆ. ಸರ್ನ ಅವರು 1980ನೇ ಬ್ಯಾಚಿನ ಐಎಎಸ್ ಅಧಿಕಾರಿ. ಸಿಬಿಇಸಿ ಪರೋಕ್ಷ ತೆರಿಗೆಗಳ ನೋಡಲ್ ಏಜೆನ್ಸಿ ಆಗಿದ್ದು, ಸುಂಕ, ಕೇಂದ್ರ ಅಬಕಾರಿ, ಸೇವಾ ತೆರಿಗೆ ನಿಯಂತ್ರಿಸುವ ಅಧಿಕಾರ ಹೊಂದಿದೆ.
- **ವಿಶ್ವ ಆಟಿಸಂ ಜಾಗೃತಿ ದಿನ**: ಏಪ್ರಿಲ್ 2 ರಂದು ವಿಶ್ವ ಆಟಿಸಂ ಜಾಗೃತಿ ದಿನವನ್ನು ಆಚರಿಸಲಾಗುತ್ತದೆ. ಆಟಿಸಂ ಮತ್ತು ಅದರಿಂದಾಗವು ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು ಈ ದಿನದ ಉದ್ದೇಶ.
- **ಮುಂಬೈನಲ್ಲಿ NBAದ ಮೊದಲ ಶಾಲೆ**: ಅಮೆರಿಕ ಮೂಲದ ನ್ಯಾಷನಲ್ ಬ್ಯಾಸ್ಕೆಟ್ ಬಾಲ್ ಅಸೋಸಿಯೇಷನ್ ಭಾರತದಲ್ಲಿ ತನ್ನ ಮೊದಲ ತರಬೇತಿ ಶಾಲೆಯನ್ನು ಮುಂಬೈನಲ್ಲಿ ಸ್ಥಾಪಿಸಿದೆ. NBAದ ಪ್ರಸ್ತುತ ಹಾಗೂ ಮಾಜಿ ತರಬೇತುದಾರರ ಅನುಭವದಂತೆ ಪಠ್ಯಕ್ರಮವನ್ನು ಸಿದ್ದಪಡಿಸಲಾಗುವುದು.

- **ವಿಶ್ವಸಂಸ್ಥೆಯ ಶಾಂತಿ ದೂತೆಯಾಗಿ ಮಲಾಲ ನೇಮಕ:** ನೊಬೆಲ್ ಪ್ರಶಸ್ತಿ ಪುರಸ್ಕೃತೆ ಪಾಕಿಸ್ತಾನ ಮೂಲದ ಮಾನವ ಹಕ್ಕು ಹೋರಾಟಗಾರ್ತಿ ಮಲಾಲ ಯೂಸಫ್ ಜಾಯಿ ಅವರನ್ನು ವಿಶ್ವಸಂಸ್ಥೆಯ ಶಾಂತಿ ದೂತೆಯನ್ನಾಗಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟೆರಸ್ ಅವರು ನೇಮಕ ಮಾಡಿದ್ದಾರೆ. ಆ ಮೂಲಕ ವಿಶ್ವಸಂಸ್ಥೆಯ ಅತ್ಯಂತ ಕಿರಿಯ ಶಾಂತಿ ದೂತೆ ಎಂಬ ಖ್ಯಾತಿಗೆ ಮಲಾಲ ಪಾತ್ರರಾಗಿದ್ದಾರೆ.
- **ಥಾಯ್ಲೆಂಟ್ ಇಂಟರ್ನ್ಯಾಷನಲ್ ನಲ್ಲಿ ಚಿನ್ನ ಗೆದ್ದ ಬಾಕ್ಸರ್ ಶ್ಯಾಮ್ ಕುಮಾರ್:** ಭಾರತದ ಬಾಕ್ಸರ್ ಶ್ಯಾಮ್ ಕುಮಾರ್ ಅವರು ಥಾಯ್ಲೆಂಡ್ ಇಂಟರ್ನ್ಯಾಷನಲ್ ಟೂರ್ನಮೆಂಟ್ ನಲ್ಲಿ 49 ಕೆ.ಜಿ ವಿಭಾಗದಲ್ಲಿ ಚಿನ್ನ ಗೆದ್ದುಕೊಂಡಿದ್ದಾರೆ. ಶ್ಯಾಮ್ ಕುಮಾರ್ ಅವರಿಗೆ ಇದು ಎರಡನೇ ಚಿನ್ನದ ಪದಕ. ಈ ಹಿಂದೆ 2015ರಲ್ಲಿ ಪ್ರಶಸ್ತಿಯನ್ನು ಗೆದ್ದಿದ್ದರು.
- **ಹರಿಯಾಣದಲ್ಲಿ ಏರಿಕೆ ಕಂಡ ಲಿಂಗಾನುಪಾತ:** ಹರಿಯಾಣದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಲಿಂಗಾನುಪಾತ 950ಕ್ಕೆ ಏರಿಕೆಯಾಗಿದೆ. ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖತ್ತರ್ ಅವರು ಈ ವಿಷಯವನ್ನು ದೃಡಿಕರಿಸಿದೆ. "ಬೇಟಿ ಬಚಾವೋ ಬೇಟಿ ಪಡವೋ" ಕಾರ್ಯಕ್ರಮದಿಂದ ಲಿಂಗಾನುಪಾತ ಏರಿಕೆಗೆ ಕಾರಣವಾಗಿದೆ ಎನ್ನಲಾಗಿದೆ.
- **ಬರೇಲಿಯಲ್ಲಿ ಉತ್ತರ ಭಾರತದ ಮೊದಲ ವನ್ಯಜೀವಿ ಡಿಎನ್ಎ ಬ್ಯಾಂಕ್:** ಉತ್ತರ ಭಾರತದ ಮೊದಲ ವನ್ಯಜೀವಿ ಡಿಎನ್ಎ ಬ್ಯಾಂಕ್ ಭಾರತೀಯ ಪಶು ಸಂಶೋಧನಾ ಸಂಸ್ಥೆ (IVRI)ಯಲ್ಲಿ ಸ್ಥಾಪಿಸಲಾಗಿದೆ. ಎಲ್ಲಾ ವನ್ಯಜೀವಿಗಳ ಡಿಎನ್ಎ ಯನ್ನು ಇಲ್ಲಿ ಸಂಗ್ರಹಿಸಿಡಲಾಗುವುದು. ಕಳ್ಳಭೇಟಿ ತಡೆಯಲು ಹಾಗೂ ವನ್ಯಜೀವಿಗಳ ಬಗ್ಗೆ ಸಂಶೋಧನೆ ನಡೆಸಲು ಇದರಿಂದ ಅನುಕೂಲವಾಗಲಿದೆ.

- **ಬೆಂಗಳೂರಿನಲ್ಲಿ ಲಂಡನ್ ಮಾದರಿಯ ಕಂಟ್ರೋಲ್ ರೂಂ**: ಬೆಂಗಳೂರಿನಲ್ಲಿ ಲಂಡನ್ ಮಾದರಿಯ ಲ್ಲಿ ₹ 50 ಕೋಟಿ ವೆಚ್ಚದಲ್ಲಿ ಕಂಟ್ರೋಲ್ ರೂಂ ನಿರ್ಮಿಸಲಾಗುತ್ತಿದೆ. ಗೃಹ ಸಚಿವ ಪರಮೇಶ್ವರ್ ಅವರು ಈ ವಿಷಯವನ್ನು ತಿಳಿಸಿದ್ದಾರೆ. ತಾಂತ್ರಿಕವಾಗಿ ಪೊಲೀಸ್ ಇಲಾಖೆಯನ್ನು ಇನ್ನಷ್ಟು ಸಶಕ್ತಗೊಳಿಸಲು ಸರ್ಕಾರ ಮುಂದಾಗಿದೆ. ಇದರಿಂದ ಪೊಲೀಸರು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿದೆ.
- **ಶಿವಕುಮಾರ ಸ್ವಾಮೀಜಿಗೆ 'ಶ್ರೀ ಭಗವನ್ ಮಹಾವೀರ ಶಾಂತಿ ಪ್ರಶಸ್ತಿ":** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೊದಲ ಬಾರಿಗೆ ನೀಡುತ್ತಿರುವ 'ಶ್ರೀ ಭಗವನ್ ಮಹಾವೀರ ಶಾಂತಿ ಪ್ರಶಸ್ತಿ'ಗೆ ಸಿದ್ದಗಂಗಾಮಠದ ಡಾ.ಶಿವಕುಮಾರ ಸ್ವಾಮೀಜಿ ಆಯ್ಕೆಯಾಗಿದ್ದಾರೆ. 'ಅಕ್ಕಮಹಾದೇವಿ ಪ್ರಶಸ್ತಿ'ಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಮಲ್ಲಿಕಾ ಘಂಟಿ ಭಾಜನರಾಗಿದ್ದಾರೆ. ಈ ಎರಡೂ ಪ್ರಶಸ್ತಿಗಳು ತಲಾ ₹ ಮೂರು ಲಕ್ಷ ನಗದು ಮತ್ತು ಫಲಕಗಳನ್ನು ಒಳಗೊಂಡಿವೆ. ಇತಿಹಾಸ ತಜ್ಞ ಷ.ಶೆಟ್ಟರ್ ಅಧ್ಯಕ್ಷತೆಯ ಆಯ್ಕೆ ಸಮಿತಿ ಸ್ವಾಮೀಜಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ.

www.karunaduexams.com

- **ಟ್ವೀಟರ್ ನಿಂದ ಟ್ವೀಟರ್ ಲೈಟ್**: ಸಾಮಾಜಿಕ ಸಂಪರ್ಕ ಜಾಲ ತಾಣ ಟ್ವೀಟರ್‌ಲಘು ಮಾದರಿಯಲ್ಲಿ ಇರುವ 'ಟ್ವೀಟರ್ ಲೈಟ್'ಗೆ ದೇಶದಲ್ಲಿ ಚಾಲನೆ ನೀಡಲಾಗಿದೆ.ಟ್ವೀಟರ್ ಆ್ಯಪ್‌ಗೆ ಹೋಲಿಸಿದರೆ, ಶೇ 70 ರಷ್ಟು ಕಡಿಮೆ ಡೇಟಾ ಬಳಸುವ ಮತ್ತು ಶೇ 30ರಷ್ಟು ವೇಗವಾಗಿ ಕಾರ್ಯನಿರ್ವಹಿಸುವ ಈ ತಾಣವು ಕನ್ನಡವೂ ಸೇರಿದಂತೆ ಒಟ್ಟು 42 ಭಾಷೆಗಳಲ್ಲಿ ಲಭ್ಯ ಇರಲಿದೆ. ಹಿಂದಿ, ಬಂಗಾಲಿ, ತಮಿಳು, ಗುಜರಾತಿ ಮತ್ತು ಮರಾಠಿ ಭಾಷೆಗಳಲ್ಲೂ ಟ್ವೀಟ್ ಮಾಡುವ ಸೌಲಭ್ಯ ಇರಲಿದೆ.
- **327 ದಿನಗಳಲ್ಲಿ ಸುಮಾರು 6,065 ಪ್ರಕರಣಗಳನ್ನು ವಿಲೇವಾರಿ ಮಾಡಿ ದಾಖಲೆ: ಮುಜಾಫರ್‌ನಗರದ** ಕೌಟುಂಬಿಕ ನ್ಯಾಯಾಲಯ 327 ದಿನಗಳಲ್ಲಿ ಸುಮಾರು 6,065 ಪ್ರಕರಣಗಳನ್ನು ವಿಲೇವಾರಿ ಮಾಡಿದೆ. ಆ ಮೂಲಕ ಮೂಲಕ ಗಿನ್ನಿಸ್ ದಾಖಲೆ ಸೇರಿದೆ. 'ಕೌಟುಂಬಿಕ ನ್ಯಾಯಾಲಯದಲ್ಲಿ 903 ದಂಪತಿಗಳು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಮತ್ತೆ ಒಂದಾಗಿದ್ದಾರೆ'.
- **ಭಾರತ ಬಾಕ್ಸಿಂಗ್ ಫೆಡರೇಷನ್ ಗೆ ಐಒಎ ಮಾನ್ಯತೆ**: ಭಾರತ ಬಾಕ್ಸಿಂಗ್ ಫೆಡರೇಷನ್‌ಗೆ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮಾನ್ಯತೆ ಪಡೆಯುವಲ್ಲಿ ಯಶಸ್ವಿಯಾಗಿದೆ. 'ಬಾಕ್ಸಿಂಗ್ ಫೆಡರೇಷನ್‌ಗೆ ಮಾನ್ಯತೆ ನೀಡುವಂತೆ ಫೆಬ್ರುವರಿ 7ರಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಪತ್ರ ಬರೆದಿತ್ತು. ಈಗ ಐಒಎ ಕೂಡ ಮಾನ್ಯತೆ ಕೊಟ್ಟಿದೆ. ಇದರಿಂದ ಭಾರತದ ಬಾಕ್ಸರ್‌ಗಳು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ರಾಷ್ಟ್ರಧ್ವಜದ ಅಡಿ ಸ್ಪರ್ಧಿಸಲು ಅವಕಾಶ ಸಿಕ್ಕಿದೆ.
- **ಚೀನಾ ಗ್ರ್ಯಾಂಡ್ ಪ್ರಿ ಫಾರ್ಮುಲಾ–1 ರೇಸ್‌ನಲ್ಲಿ ಹ್ಯಾಮಿಲ್ಟನ್ ಗೆ ಪ್ರಶಸ್ತಿ**: ಮರ್ಸಿಡೀಸ್ ತಂಡದ ಮೋಟಾರು ಕಾರು ಸಾಹಸಿ ಲೂಯಿಸ್ ಹ್ಯಾಮಿಲ್ಟನ್ ಅವರು ಚೀನಾ ಗ್ರ್ಯಾಂಡ್ ಪ್ರಿ ಫಾರ್ಮುಲಾ–1 ರೇಸ್‌ನಲ್ಲಿ ಪ್ರಶಸ್ತಿ ಪಡೆದುಕೊಂಡರು. ಈ ಮೂಲಕ ಶಾಂಘೈನಲ್ಲಿ ಐದನೇ ಕಿರೀಟ ಮುಡಿಗೇರಿಸಿಕೊಂಡ ಸಾಧನೆಗೂ ಭಾಜನರಾಗಿದ್ದಾರೆ. ಹ್ಯಾಮಿಲ್ಟನ್ ಅವರು ವೃತ್ತಿ ಬದುಕಿನಲ್ಲಿ ಗೆದ್ದ 54ನೇ ರೇಸ್ ಇದಾಗಿದೆ.
- **ಹರಿಯಾಣ ಸರ್ಕಾರದಿಂದ ಆಪರೇಷನ್ ದುರ್ಗಾ:** ಉತ್ತರ ಪ್ರದೇಶದ "ಆಂಟಿ ರೋಮಿಯೊ" ಪಡೆಯಂತೆ ಹರಿಯಾಣ ಸರ್ಕಾರ ಮಹಿಳೆಯರ ಸುರಕ್ಷತೆಗಾಗಿ "ಆಪರೇಷನ್ ದುರ್ಗಾ"ಗೆ ಚಾಲನೆ ನೀಡಿದೆ. ಈ ಕಾರ್ಯಾಚರಣೆಯಡಿ ಮುಖ್ಯಮಂತ್ರಿಗಳ ಫ್ಲೈಯಿಂಗ್ ಪಡೆ ರಚಿಸಿರುವ ತಂಡಗಳು ಶಾಲೆ, ಕಾಲೇಜು, ರೈಲ್ವೆ ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಗಸ್ತು ತಿರುಗಲಿದ್ದು, ಮಹಿಳೆಯರನ್ನು ಚೇಡಿಸುವುದು, ಲೈಂಗಿಕ ಕಿರುಕುಳ ನೀಡುವುದು ಹಾಗೂ ಅವರೊಂದಿಗೆ ಅಸಭ್ಯವಾಗಿ ವರ್ತನೆ ಮಾಡುವವರ ಮೇಲೆ ನಿಗಾವಹಿಸುವ ಕಾರ್ಯ ಮಾಡಲಿದೆ.

www.karunaduexams.com

- **ಜಾರ್ಖಂಡ್ ಪೊಲೀಸರಿಂದ "ತಾರೇ ಜಮೀನ್ ಪರ್" ಅಭಿಯಾನ:** ಜಾರ್ಖಂಡಿನ ಪಲಮ ಜಿಲ್ಲೆ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಮಕ್ಕಳಲ್ಲಿ ಭಯ ತೊಲಗಿಸಿ ನಂಬಿಕೆಯನ್ನು ಸೃಜಿಸುವ ಸಲುವಾಗಿ ಜಾರ್ಖಂಡ್ ಪೊಲೀಸರು "ತಾರೆ ಜಮೀನ್ ಪರ್" ಅಭಿಯಾನವನ್ನು ಆರಂಭಿಸಿದ್ದಾರೆ. ಅಭಿಯಾನದ ಅಂಗವಾಗಿ ಮಕ್ಕಳಿಗೆ ಬ್ಯಾಗ್, ಬಟ್ಟೆ, ಶೋ ಮತ್ತು ಪುಸ್ತಕಗಳನ್ನು ಕೊಡುಗೆಯಾಗಿ ನೀಡುವಂತೆ ಸ್ಥಳೀಯರ ಮನವೊಲಿಸಲಿದ್ದಾರೆ.
- **ಗಿರೀಶ್ ಚಂದ್ರ ಸಕ್ಸೆನಾ ನಿಧನ:** ಜಮ್ಮು ಮತ್ತು ಕಾಶ್ಮೀರದ ಮಾಜಿ ಗವರ್ನರ್ ಗಿರೀಶ್ ಚಂದ್ರ ಸಕ್ಸೆನಾ ಅವರು ನಿಧನರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು. ಸಕ್ಸೆನಾ ಅವರು 1950ನೇ ಬ್ಯಾಚಿನ ಉತ್ತರ ಪ್ರದೇಶ ಕ್ಯಾಡೆರ್ ಐಪಿಎಸ್ ಅಧಿಕಾರಿ.
- **ಪಂಜಾಬಿನಲ್ಲಿ ವಿಐಪಿ ಸಂಸ್ಕೃತಿಗೆ ವಿದಾಯ:** ಶಿಲಾನ್ಯಾಸ ಫಲಕಗಳಲ್ಲಿ ಎಂಎಲ್ಎ ಮತ್ತು ಎಂಪಿಗಳ ಹೆಸರನ್ನು ಅಳವಡಿಸಿದಂತೆ ಪಂಜಾಬ್ ಸರ್ಕಾರ ನಿಷೇಧ ಹೇರಿದೆ. ಆ ಮೂಲಕ ವಿಐಪಿ ಸಂಸ್ಕೃತಿಗೆ ವಿದಾಯ ಹೇಳುವ ಮಹತ್ವದ ನಿರ್ಣಯವನ್ನು ಕೈಗೊಂಡಿದೆ.
- **ಕೇರಳದ ಶಾಲೆಗಳಲ್ಲಿ ಮಲೆಯಾಳಂ ಕಡ್ಡಾಯ:** ಕೇರಳ ರಾಜ್ಯದ ಎಲ್ಲಾ ಶಾಲೆಗಳಲ್ಲಿ 10ನೇ ತರಗತಿ ವರೆಗೆ ಮಲಯಾಳ ಕಡ್ಡಾಯಗೊಳಿಸಿ ಕೇರಳ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ. ಎಲ್ಲಾ ಸರ್ಕಾರಿ, ಅನುದಾನಿತ, ಅನನುದಾನಿತ, ಆರ್ಥಿಕ ಸ್ವಾವಲಂಬಿ ಶಿಕ್ಷಣ ಸಂಸ್ಥೆಗಳು ಹಾಗೂ ಸಿಬಿಎಸ್ಇ ಮತ್ತು ಐಸಿಎಸ್ಇ ಪಠ್ಯಕ್ರಮ ಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ಇದು ಅನ್ವಯವಾಗಲಿದ್ದು ಮುಂದಿನ ಶೈಕ್ಷಣಿಕ ವರ್ಷದಿಂದ ಈ ಸುಗ್ರೀವಾಜ್ಞೆ ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.
- **ಚಾಂಪಿಯನ್ಸ್ ಟ್ರೋಫಿಗೆ ಹರಭಜನ್ ಸಿಂಗ್ ರಾಯಭಾರಿ:** ಇಂಗ್ಲೆಂಡ್ ಹಾಗೂ ವೇಲ್ಸನಲ್ಲಿ ಜೂನ್ 1ರಿಂದ 18ರವರೆಗೆ ನಡೆಯಲಿರುವ 2017 ಚಾಂಪಿಯನ್ಸ್ ಟ್ರೋಫಿಗೆ ಭಾರತದ ಬೌಲರ್ ಹರಭಜನ್ ಸಿಂಗ್ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಐಸಿಸಿ ಎಂಟು ಅಂತರ ರಾಷ್ಟ್ರೀಯ ಆಟಗಾರರನ್ನು ರಾಯಭಾರಿಗಳನ್ನಾಗಿ ನೇಮಕಮಾಡಿದ್ದು, ಸಿಂಗ್ ಅವರಲ್ಲಿ ಒಬ್ಬರು. ಭಾರತದ ಹರ್ಭಜನ್ ಸೇರಿದಂತೆ, ಪಾಕಿಸ್ತಾನದ ಶಾಹಿದ್ ಅಫ್ರಿದಿ, ಬಾಂಗ್ಲಾದೇಶದ ಹಬೀಬುಲ್ ಬಾಶರ್, ಇಂಗ್ಲೆಂಡ್‌ನ ಇಯಾನ್ ಬೆಲ್, ನ್ಯೂಜಿಲೆಂಡ್ ತಂಡದ ಶೇನ್ ಬಾಂಡ್, ಆಸ್ಟ್ರೇಲಿಯಾದ ಮೈಕ್ ಹಸ್ಸಿ, ಶ್ರೀಲಂಕಾದ ಕುಮಾರ ಸಂಗಕ್ಕಾರ, ದಕ್ಷಿಣ ಆಫ್ರಿಕಾದ ಗ್ರೇಮ್ ಸ್ಮಿತ್ ಕೂಡ ಸೇರಿದ್ದಾರೆ.
- **ವಿಶ್ವದ ಹಿರಿಯಜ್ಜಿ ಎಮ್ಮಾ ಮೊರಾನೊ (117) ನಿಧನ:** ವಿಶ್ವದ ಅತಿ ಹಿರಿಯ ವ್ಯಕ್ತಿ, ಇಟಲಿಯ 117 ವರ್ಷದ ಮಹಿಳೆ ಎಮ್ಮಾ ಮೊರಾನೊ ನಿಧನರಾಗಿದ್ದಾರೆ.

www.karunaduexams.com

ಎಮ್ಮಾ ಅವರು 1899ರ ನವೆಂಬರ್ 29ರಂದು ಜನಿಸಿದ್ದರು. ದೀರ್ಘಕಾಲ ಜೀವಿಸಿದ ವ್ಯಕ್ತಿಯಾಗಿ ಅವರ ಹೆಸರು ಗಿನ್ನಿಸ್ ದಾಖಲೆಯಲ್ಲಿ ಸೇರ್ಪಡೆಗೊಂಡಿದೆ.

- **ಪಂಕಜ್ ಅಡ್ವಾಣಿ ಮುಡಿಗೆ ಏಷ್ಯನ್ ಬಿಲಿಯರ್ಡ್ಸ್ ಚಾಂಪಿಯನ್ ಷಿಪ್ ಪ್ರಶಸ್ತಿ:** ಪಂಕಜ್ ಅಡ್ವಾಣಿ ಅವರ ಏಷ್ಯನ್ ಬಿಲಿಯರ್ಡ್ಸ್ ಚಾಂಪಿಯನ್ ಷಿಪ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಫೈನಲ್ ಪಂದ್ಯದಲ್ಲಿ ಪಂಕಜ್ 6–3 ಫ್ರೇಮ್‌ಗಳಲ್ಲಿ ಭಾರತದವರೇ ಆದ ಸೌರವ್ ಕೊಠಾರಿ ಅವರನ್ನು ಸೋಲಿಸಿ ಆರನೇ ಬಾರಿಗೆ ಪ್ರಶಸ್ತಿ. ಒಟ್ಟಾರೆ ಏಷ್ಯನ್ ಚಾಂಪಿಯನ್ ಷಿಪ್‌ನಲ್ಲಿ ಪಂಕಜ್ ಗೆದ್ದ ಏಳನೇ ಪ್ರಶಸ್ತಿ ಇದಾಗಿದೆ. ಹೋದ ವರ್ಷ 6ರೆಡ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಚಾಂಪಿಯನ್ ಆಗಿದ್ದರು.
- **ಕರ್ಣಾಟಕ ಬ್ಯಾಂಕಿಗೆ ಪ್ರಶಸ್ತಿ:** ಭಾರತೀಯ ಲಘು, ಸಣ್ಣ ಮತ್ತು ಮಧ್ಯಮ ವಾಣಿಜ್ಯೋದ್ಯಮ ಸಂಸ್ಥೆ ಕೊಡಮಾಡುವ ಅತ್ಯುತ್ತಮ ಎಂಎಸ್‌ಎಂಇ ಬ್ಯಾಂಕಿಂಗ್ ಪ್ರಶಸ್ತಿಯನ್ನು ಕರ್ಣಾಟಕ ಬ್ಯಾಂಕ್ ಪಡೆದಿದೆ.ಸಮುದಾಯ ದಾಯಿತ್ವ ಯೋಜನೆ ಮತ್ತು ವ್ಯಾವಹಾರಿಕ ಹೊಣೆಗಾರಿಕೆ ವಿಭಾಗದಲ್ಲಿ ಕರ್ಣಾಟಕ ಬ್ಯಾಂಕ್ ರನ್ನರ್ ಅಪ್ ಪ್ರಶಸ್ತಿ ಪಡೆದಿದೆ. ಭಾರತೀಯ ಲಘು, ಸಣ್ಣ ಮತ್ತು ಮಧ್ಯಮ ವಾಣಿಜ್ಯೋದ್ಯಮ ಸಂಸ್ಥೆಯು, ಹಣಕಾಸು ನೆರವಿನ ಮೂಲಕ ಉದ್ಯಮಗಳ ಅಭಿವೃದ್ಧಿಗೆ ನೆರವಾಗುವ ವ್ಯಕ್ತಿಗಳು, ಬ್ಯಾಂಕ್‌ಗಳು ಹಾಗೂ ವೃತ್ತಿಪರರಿಗೆ ಈ ಪ್ರಶಸ್ತಿ ನೀಡುತ್ತಿದೆ.

- **ಹುಣಸವಾಡಿ ರಾಜನ್ ಗೆ ಖಾದ್ರಿ ಶಾಮಣ್ಣ ಪ್ರಶಸ್ತಿ**: ಪತ್ರಿಕೋದ್ಯಮ ಪ್ರಶಸ್ತಿ'ಗೆ ಸಂಯುಕ್ತ ಕರ್ನಾಟಕ ದಿನಪತ್ರಿಕೆ ಸಂಪಾದಕ ಹುಣಸವಾಡಿ ರಾಜನ್ ಆಯ್ಕೆಯಾಗಿದ್ದಾರೆ. 'ಪ್ರಶಸ್ತಿಯು ₹15 ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.
- **ಬಿಸ್ವಾ ಶರ್ಮಾ ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ (ಬಿಎಐ) ಹಂಗಾಮಿ ಅಧ್ಯಕ್ಷ**: ಹಿರಿಯ ಕ್ರೀಡಾ ಆಡಳಿತಗಾರ ಹಿಮಾಂತ ಬಿಸ್ವಾ ಶರ್ಮಾ ಅವರು ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ (ಬಿಎಐ) ಹಂಗಾಮಿ ಅಧ್ಯಕ್ಷರಾಗಿ ನೇಮಕವಾಗಿದ್ದಾರೆ. ಅಖಿಲೇಶ್ ದಾಸ್ ಗುಪ್ತಾ ಅವರ ನಿಧನದಿಂದಾಗಿ ಅಧ್ಯಕ್ಷ ಹುದ್ದೆ ತೆರವಾಗಿತ್ತು. ಅಸ್ಸಾಂ ಬ್ಯಾಡ್ಮಿಂಟನ್ ಸಂಸ್ಥೆಯ ಅಧ್ಯಕ್ಷರಾಗಿರುವ ಹಿಮಾಂತ 2018ರ ವರೆಗೂ ಅಧ್ಯಕ್ಷರಾಗಿರಲಿದ್ದಾರೆ.
- **ರಫೆಲ್ ನಡಾಲ್ಗೆ ಮಾಂಟೆ ಕಾರ್ಲೊ ಮಾಸ್ಟರ್ಸ್ ಟೆನಿಸ್ ಟೂರ್ನಿ ಪ್ರಶಸ್ತಿ**: ಸ್ಪೇನ್‌ನ ಅಗ್ರಗಣ್ಯ ಆಟಗಾರ ರಫೆಲ್ ನಡಾಲ್ ಅವರು ಮಾಂಟೆ ಕಾರ್ಲೊ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ಹತ್ತನೇ ಪ್ರಶಸ್ತಿ ಗೆದ್ದುಕೊಂಡರು. ಈ ಹಿಂದೆ ಇಲ್ಲಿ ನಡಾಲ್ ಒಂಬತ್ತು ಬಾರಿ ಚಾಂಪಿಯನ್ ಆಗಿದ್ದರು. ಹತ್ತು ಬಾರಿ ಪ್ರಶಸ್ತಿ

www.karunaduexams.com

ಗೆದ್ದ ಮೊದಲ ಆಟಗಾರ ಎಂಬ ಹೆಗ್ಗಳಿಕೆಯನ್ನೂ ಅವರು ತಮ್ಮದಾಸಿಕೊಂಡರು. ಫೈನಲ್ ಹಣಾಹಣಿಯಲ್ಲಿ ನಡಾಲ್ 6–1, 6–3ರ ನೇರ ಸೆಟ್‌ಗಳಿಂದ ಆಲ್ಬರ್ಟ್ ರಾಮೋಸ್ ವಿನೋಸ್ ಅವ ರನ್ನು ಮಣಿಸಿ ಈ ಸಾಧನೆ ಮಾಡಿದರು.

- **CRPF ನೂತನ ಡೈರೆಕ್ಟರ್ ಜನರಲ್ ರಾಜೀವ್ ರಾಯ್ ಭಟ್ನಾಗರ್ ನೇಮಕ:** ಐಪಿಎಸ್ ಅಧಿಕಾರಿ ರಾಜೀವ್ ರಾಯ್ ಭಟ್ನಾಗರ್ ಅವರು ಕೇಂದ್ರ ಮೀಸಲು ಪೊಲೀಸ್ ಪಡೆಯ ನೂತನ ಡೈರೆಕ್ಟರ್ ಜನರಲ್ ಆಗಿ ನೇಮಕಗೊಂಡಿದ್ದಾರೆ. ಕೆ. ದುರ್ಗಾ ಪ್ರಸಾದ್ ಅವರು ಫೆಬ್ರವರಿ 28, 2017 ರಂದು ನಿವೃತ್ತರಾದ ದಿನದಿಂದ ಈ ಹುದ್ದೆ ಖಾಲಿ ಉಳಿದಿತ್ತು. ಭಟ್ನಾಗರ್ ಅವರು ನಾರ್ಕೊಟಿಕ್ ಕಂಟ್ರೋಲ್ ಬ್ಯೂರೊದ ಡೈರೆಕ್ಟರ್ ಜನರಲ್ ಆಗಿದ್ದಾರೆ.
- **ITBP ಡೈರೆಕ್ಟರ್ ಜನರಲ್ ಆಗಿ ಆರ್.ಕೆ.ಪ್ರಚಂಡ ನೇಮಕ:** ಐಪಿಎಸ್ ಅಧಿಕಾರಿ ಆರ್.ಕೆ. ಪ್ರಚಂಡ ಅವರು ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ ನ ಡೈರೆಕ್ಟರ್ ಜನರಲ್ ಆಗಿ ನೇಮಕಗೊಂಡಿದ್ದಾರೆ. ಪ್ರಚಂಡ ಅವರು 1983ನೇ ಬ್ಯಾಚಿನ ಪಶ್ಚಿಮ ಬಂಗಾಳ ಕೇಡರ್ ನ ಅಧಿಕಾರಿ. ಕೃಷ್ಣಾ ಚೌಧರಿ ಅವರು ಜೂನ್ ತಿಂಗಳ ಕೊನೆಯಲ್ಲಿ ನಿವೃತ್ತರಾಗಲಿದ್ದು, ಅವರ ಸ್ಥಾನವನ್ನು ಪ್ರಚಂಡ ಅವರು ವಹಿಸಿಕೊಳ್ಳಲಿದ್ದಾರೆ.
- **ನಾಗ್ಪುರದಲ್ಲಿ E-taxiಯ ಪ್ರಾಯೋಗಿಕ ಚಾಲನೆ**: ದೇಶದ ಮೊದಲ ಎಲೆಕ್ಟ್ರಿಕ್ ಟ್ಯಾಕ್ಸಿಯ ಪ್ರಯೋಗಾರ್ಥ ಸಂಚಾರ ನಾಗ್ಪುರದಲ್ಲಿ ಮೇ 24 ರಿಂದ ನಡೆಯಲಿದೆ. ನಾಗ್ಪುರ ಮುನಿಸಿಪಾಲ್ ಕಾರ್ಪೋರೇಶನ್ ಪ್ರಾಯೋಜಕತ್ವದಲ್ಲಿ ಇದು ನಡೆಯಲಿದೆ. ಈ ವಿನೂತನ ಕಾರ್ಯಕ್ರಮಕ್ಕೆ ಮಹೀಂದ್ರಾ ಅಂಡ್ ಮಹೀಂದ್ರಾ 200 ಟ್ಯಾಕ್ಸಿಗಳನ್ನು ನೀಡಲಿದೆ.

www.karunaduexams.com